'ಶಿವನ ಡಂಗುರ' ಕಾದಂಬರಿ: ಒಂದು ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯ ಹಂಪಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ನಾಗಪ್ಪ ಬಾರಕೇರ

ನೊಂದಣಿ ಸಂಖ್ಯೆ :೧೫೦೧೦೧೦೬೦೦೦೫

ಮಾರ್ಗದರ್ಶಕರು

ಡಾ. ಬಿ. ಎಂ. ಪುಟ್ಟಯ್ಯ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವ ವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩-೨೭೬

೨೦೧೫-೧೬

‘ಶಿವನ ಡಂಗುರ’ ಕಾದಂಬರಿ: ಒಂದು ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯ ಹಂಪಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ

ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ನಾಗಪ್ಪ ಬಾರಕೇರ

ನೋಂದಣಿ ಸಂಖ್ಯೆ :೧೫೦೧೦೧೦೩೦೦೦೫

ಮಾರ್ಗದರ್ಶಕರು

ಡಾ. ಬಿ. ಎಂ. ಪುಟ್ಟಯ್ಯ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವ ವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩-೨೭೬

೨೦೧೫-೧೬

ಮಾರ್ಗದರ್ಶಕರ ಪ್ರಮಾಣ ಪತ್ರ

ನಾಗಪ್ಪ ಬಾರಕೇರ ಇವರು **" 'ಶಿವನ ಡಂಗುರ' ಕಾದಂಬರಿ : ಒಂದು ವಿಶ್ಲೇಷಣೆ"** ಎಂಬ ಶೀರ್ಷಿಕೆಯ ಈ ಎಂ.ಫಿಲ್. ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಬೇರೆ ಯಾವುದೇ ವಿಶ್ವವಿದ್ಯಾಲಯದ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಿರುತ್ತೇನೆ.

ದಿನಾಂಕ : ೨೩-೦೬-೨೦೧೬
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು

(ಡಾ. ಬಿ.ಎಂ. ಪುಟ್ಟಯ್ಯ)
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ-೭೬

ದೃಢೀಕರಣ ಪತ್ರ

" 'ಶಿವನ ಡಂಗುರ' ಕಾದಂಬರಿ : ಒಂದು ವಿಶ್ಲೇಷಣೆ" ಎಂಬ ಶೀರ್ಷಿಕೆಯ ಈ ಎಂ.ಫಿಲ್. ಸಂಪ್ರಬಂಧವನ್ನು **ಡಾ. ಬಿ.ಎಂ.ಪುಟ್ಟಯ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎ.ಫಿಲ್. ಪದವಿಗಾಗಿ ಸಲ್ಲಿಸಿದ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಬೇರೆ ಯಾವುದೇ ವಿಶ್ವವಿದ್ಯಾಲಯದ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೨೩-೦೬-೨೦೧೬
ಸ್ಥಳ : ವಿದ್ಯಾರಣ್ಯ

ನಾಗಪ್ಪ ಬಾರಕೇರ
ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ-೭೬

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

೧.೧. ಪ್ರಸ್ತಾವನೆ:

ಕನ್ನಡ ಸಾಹಿತ್ಯವು ಇಂದು ನಿನ್ನೆ ಹುಟ್ಟಿದ್ದಲ್ಲ. ಅದು ಕ್ರಿ.ಶ. ೪೫೦ರ ವೇಳೆಗೇ ಹುಟ್ಟಿತ್ತು ಎನ್ನುವುದಕ್ಕೆ 'ಹಲ್ಮಿಡಿ' ಶಾಸನವು ಸಾಕ್ಷಿಯಾಗಿ ನಿಲ್ಲುತ್ತದೆ. ಈ ಕನ್ನಡ ಸಾಹಿತ್ಯಕ್ಕೆ ಪ್ರಾಚೀನವಾದ ಇತಿಹಾಸವಿದ್ದು ಸದಾ ಹರಿಯುತ್ತಿರುವ ಜೀವಂತ ವಾಹಿನಿಯಾಗಿ ಕಂಡುಬರುತ್ತಿದೆ. ಪೂರ್ವಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಸಾಹಿತ್ಯವಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ಹೊಸಗನ್ನಡ ಸಾಹಿತ್ಯವು ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವದಿಂದಾಗಿ ಆಧುನಿಕತೆಯ ರೂಪ ಹೊಂದಿ ಕಾವ್ಯ, ನಾಟಕ, ಕಥೆ, ವಿಮರ್ಶೆ, ಸಂಶೋಧನೆ ಹೀಗೆ ಇನ್ನು ಹಲವು ಪ್ರಕಾರದಲ್ಲಿ ಕನ್ನಡ ಸಾಹಿತ್ಯ ಕೃಷಿಯಾಗಿರುವುದನ್ನು ಕಾಣುತ್ತೇವೆ.

ಹೊಸಗನ್ನಡ ಅಥವಾ ಆಧುನಿಕ ಸಾಹಿತ್ಯದ ಪ್ರಾರಂಭ ಕ್ರಿ.ಶ. ೧೯೨೧ರಲ್ಲಿ ಪ್ರೊ. ಬಿ.ಎಂ. ಶ್ರೀಯವರ 'ಇಂಗ್ಲೀಷ್ ಗೀತಗಳು' ಎಂಬ ಕವನ ಸಂಕಲನದಿಂದ ಆರಂಭಗೊಂಡು ಮುಂದೆ ಕಾವ್ಯವಷ್ಟೇ ಅಲ್ಲದೆ ಕಥೆ, ಕಾದಂಬರಿ, ನಾಟಕ ಇನ್ನೂ ಮುಂತಾದ ಪ್ರಕಾರಗಳಲ್ಲಿ ವಿಫುಲವಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ಈ ಆಧುನಿಕ ಸಾಹಿತ್ಯದ ಪ್ರಕಾರಗಳಲ್ಲಿ ಕಾದಂಬರಿ ಪ್ರಕಾರವೂ ಒಂದಾಗಿದ್ದು ಇದು ೧೯ನೆಯ ಶತಮಾನದ ಕೊನೆಯ ದಶಕದ ವೇಳೆಗೆ ಇದರ ಉಗಮವನ್ನು ಕಾಣಬಹುದಾಗಿದೆ. ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' (೧೮೯೯) ಕಾದಂಬರಿಯು ಮೊಟ್ಟ ಮೊದಲನೆಯ ಸ್ವತಂತ್ರ ಕಾದಂಬರಿ ಎಂದು ಗುರ್ತಿಸಲಾಗಿದೆ. ಈ ಕಾದಂಬರಿಯು ಇಂಗ್ಲೀಷ್ ಕಾದಂಬರಿಗಳ ಪ್ರಭಾವಕ್ಕಿಂತ ಮೊದಲು ಬಂದಿದೆ. ಈ ಮೊದಲೇ ಮುದ್ದಣ 'ಗೋದಾವರಿ' ಎಂಬ ಕಾದಂಬರಿಯನ್ನು ಅರ್ಧ ಮುಗಿಸಿದ್ದಾಗಿ ತಿಳಿದುಬಂದಿದೆ. ಕೆಂಪುನಾರಾಯಣನ ಮುದ್ರಾಮಂಜೂಷದಲ್ಲಿಯೂ ಕಥನ ರೀತಿ ಕಾದಂಬರಿಗೆ ಹೆಚ್ಚು ಸಮೀಪವಾಗಿದೆ.

ಬೋಳಾರ ಬಾಬುರಾಯರ 'ವಾಗ್ದೇವಿ' ಇವೆಲ್ಲ ಮೊದಲು ಕಂಡುಬಂದರೂ 'ಇಂದಿರಾಬಾಯಿ' ಅತ್ಯಂತ ಮಹತ್ವ ಸ್ವತಂತ್ರ ಕಾದಂಬರಿ ಎಂದು ಸಾಹಿತ್ಯ ಚರಿತ್ರಕಾರರು ಗುರ್ತಿಸಿದ್ದಾರೆ.'ಇಂದಿರಾಬಾಯಿ' ನಂತರ ಕನ್ನಡದಲ್ಲಿ ಮತ್ತೆ ಕಂಡುಬಂದ ಮಹತ್ವದ ಕಾದಂಬರಿಗಳೆಂದರೆ ೧೯೦೮ರಲ್ಲಿ ರಚಿತಗೊಂಡ ಕೆರೂರು ವಾಸುದೇವಾಚಾರ್ಯರ 'ಇಂದಿರೆ', ೧೯೧೫ರಲ್ಲಿ ರಚಿತಗೊಂಡ ಎಂ.ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಗಳು ಪ್ರಮುಖವಾಗಿವೆ. ಈ ಮೇಲಿನ ಎಲ್ಲ ಅಂಶಗಳಿಂದ ೧೮೭೫ರಿಂದ ೧೯೩೦ ರವರೆಗಿನ ಕಾಲವನ್ನು ಕನ್ನಡ ಕಾದಂಬರಿಯ ಉದಯದ ಕಾಲವೆಂದು ಕರೆಯಲಾಗಿದೆ.

ಕನ್ನಡದಲ್ಲಿ ಮುಂದೆ ಕಾನೂರು ಹೆಗ್ಗಡಿತಿ (ಕುವೆಂಪು), ಗ್ರಾಮಾಯಣ (ರಾವ್‌ಬಹದ್ದೂರು), ಚೋಮನದುಡಿ (ಶಿವರಾಮಕಾರಂತ), ಚಿಕವೀರರಾಜೇಂದ್ರ (ಮಾಸ್ತಿ), ಸಂಸ್ಕಾರ (ಅನಂತಮೂರ್ತಿ), ಒಡಲಾಳ, ಕುಸುಮಬಾಲೆ, (ದೇವನೂರ ಮಹಾದೇವ), ದಾಟು, ಮಂದ್ರ (ಎಸ್.ಎಲ್.ಬೈರಪ್ಪ) ಜ್ವಾಲಾಮುಖಿಯ ಮೇಲೆ (ಕಟ್ಟಿಮನಿ), ಶರಪಂಜರ (ತ್ರಿವೇಣಿ), ಮಸಣದ ಹೂವು (ತ.ರಾ.ಸು), ಬದುಕು (ಗೀತಾ ನಾಗಭೂಷಣ) ಇನ್ನೂ ಮುಂತಾದ ಕಾದಂಬರಿಗಳು ಬೆಳೆದು ಬಂದಿರುವುದನ್ನು ಕಾಣುತ್ತೇವೆ. ವಿಶ್ವಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಹೊಂದಿದ ಈ ಕಾದಂಬರಿ ಕ್ಷೇತ್ರವೂ ಜನಪ್ರಿಯ ಓದಿನ ಮಾಧ್ಯಮವಾಗಿದೆ.

ಶಿವರಾಮ ಕಾರಂತ, ಗೋಕಾಕ್, ಅ.ನ.ಕೃ, ಕುವೆಂಪು, ತ.ರಾ.ಸು, ದೇವುಡು, ಕಟ್ಟಿಮನಿ, ಮಾಸ್ತಿ, ತ್ರಿವೇಣಿ, ಎಂ.ಕೆ. ಇಂದಿರಾ, ಅನುಪಮಾ ನಿರಂಜನ, ಎಸ್.ಎಲ್, ಬೈರಪ್ಪ, ದೇವನೂರ ಮಹಾದೇವ ಇನ್ನೂ ಮುಂತಾಗಿ ಕಂಡುಬರುವ ಕನ್ನಡ ಕಾದಂಬರಿಕಾರರಲ್ಲಿ ಚಂದ್ರಶೇಖರ ಕಂಬಾರರು ಒಬ್ಬರಾಗಿದ್ದು ಹೆಚ್ಚಾಗಿ ನಾಟಕಕಾರರಾಗಿ ಗುರ್ತಿಸಿಕೊಂಡರೂ ಕವಿಗಳೂ, ಸಂಶೋಧಕರೂ ಆಗಿದ್ದಾರೆ. ಅಣ್ಣ ತಂಗಿ, ಕರಿಮಾಯಿ, ಜಿ.ಕೆ.ಮಾಸ್ತರ ಪ್ರಣಯ ಪ್ರಸಂಗ ಮೊದಲಾದ ಕಾದಂಬರಿಗಳ ಮೂಲಕ ಹೆಸರು ಮಾಡಿದ್ದು ಪ್ರಸ್ತುತ ಆಧುನಿಕ ಸಂದರ್ಭದಲ್ಲಿ ಅವರು ರಚಿಸಿದ 'ಶಿವನ ಡಂಗುರ' ಕಾದಂಬರಿ ಮೂಲಕ ಅತ್ಯುತ್ತಮ ಹಾಗೂ ವಿಶಿಷ್ಟ ಬರಹದ ದೇಶಿಯ ಅಪ್ಪಟ ಕಾದಂಬರಿಕಾರರೆಂದು ಗುರ್ತಿಸಬಹುದು. ಈ ಕಾದಂಬರಿಯು ೨೦೧೫ರಲ್ಲಿ ಅಂಕಿತ ಪುಸ್ತಕ ಬೆಂಗಳೂರು ಮೂಲಕ ಪ್ರಕಟಗೊಂಡಿದೆ. ದೇಶಿಯ ಚಿಂತನೆ ಮತ್ತು ವಸಾಹತುಶಾಹಿ ಆಡಳಿತ ತಡೆಗಟ್ಟುವಲ್ಲಿ ಈ ಕಾದಂಬರಿಯು ಮಹತ್ವದ ಪಾತ್ರ ವಹಿಸುತ್ತದೆ. ಶಿವನ ಡಂಗುರವು ಇತ್ತೀಚಿನ ಕನ್ನಡ ಬರವಣಿಗೆ ಅಷ್ಟೇ ಅಲ್ಲ ಕಂಬಾರರ ಬರವಣಿಗೆಯಲ್ಲಿಯೇ ಅತ್ಯಂತ ವಿಶಿಷ್ಟ ಕೃತಿಯಾಗಿದ್ದು ಇದು ಬಿಂಬಿಸುವ ವಿವಿಧ ಆಯಾಮಗಳನ್ನು ಅಭ್ಯಸಿಸುವುದು ಬಹುಮುಖ್ಯವಾಗಿದೆ.

೧.೨ ಉದ್ದೇಶ:

ಚಂದ್ರಶೇಖರ ಕಂಬಾರ ಅಪ್ಪಟ ಕನ್ನಡದ ದೇಶಿಯ ಬರಹಗಾರರಾಗಿದ್ದು ಕವಿಯಾಗಿ, ನಾಟಕಕಾರರಾಗಿ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಬಿಂಬಿತವಾಗಿದ್ದರೂ ಕಾದಂಬರಿ ಕ್ಷೇತ್ರದಲ್ಲಿಯೂ ಚಿರಪರಿಚಿತರು. ಇವರು ಈಗಾಗಲೇ ಐದು ಕಾದಂಬರಿಗಳನ್ನು ರಚಿಸಿದ್ದಾರೆ. ಕರಿಮಾಯಿ, ಜಿ.ಕೆ-ಮಾಸ್ತರ ಪ್ರಣಯ ಪ್ರಸಂಗ, ಸಿಂಗಾರವ್ವ ಮತ್ತು ಅರಮನೆ, ಶಿಖರ ಸೂರ್ಯ ಮತ್ತು ಶಿವನ ಡಂಗುರ. ಇವುಗಳಲ್ಲಿ ಶಿವನ ಡಂಗುರವು ಇತ್ತೀಚಿಗೆ ಅಗಸ್ಟ್ ೩೦, ೨೦೧೫ರಲ್ಲಿ ಬಿಡುಗಡೆಗೊಂಡಿದ್ದು ಈ ಕಾದಂಬರಿಯನ್ನು ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಆಧುನಿಕತೆ ಮತ್ತು ಜಾಗತೀಕರಣದಿಂದಾಗಿ ಗ್ರಾಮೀಣ ಬದುಕು, ಕಲೆ ಸಾಹಿತ್ಯ, ಸಂಸ್ಕೃತಿಯ ಮೇಲೆ ಆಧುನಿಕತೆ ಉಂಟುಮಾಡುತ್ತಿರುವ ಪರಿಣಾಮಗಳನ್ನು ಶಿವನಡಂಗುರ ಕಾದಂಬರಿಯು ತಿಳಿಸಿಕೊಡುತ್ತದೆ. ಭರಮೇಗೌಡನ ದುರಾಲೋಚನೆ ಮತ್ತು ಆತನ ಅಳಿಯ ಕುಂಟೀರಪ್ಪನ

ಕುತಂತ್ರದಿಂದಾಗಿ, ಶಿವಾಪುರ ಎನ್ನುವ ಹಳ್ಳಿಗೆ ಅಮೇರಿಕ ಜಾಕ್ಸನ್ ಕಂಪನಿ ಬಂದು ಅದು ಉಂಟು ಮಾಡಿದ ತಲ್ಲಣಗಳೇನು ಎಂಬುದನ್ನು ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

"ಶಿವಾಪುರ" ಎಂಬುದು ಕಂಬಾರರ ಬರವಣಿಗೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದು. ಈ ಶಿವಾಪುರವು ಅವರ ಕಾವ್ಯ, ನಾಟಕ, ಕಾದಂಬರಿಗಳಲ್ಲಿ ಕಂಡುಬರುತ್ತಿದ್ದು ಈ ಶಿವಾಪುರದ ಸುತ್ತಮುತ್ತಲಾಗಿ ಕಥೆ ಕಾದಂಬರಿಗಳನ್ನು ಹೆಣದಿದ್ದಾರೆ. ಹಾಗಾದರೆ ಕಂಬಾರರು ಕಂಡ ಶಿವಾಪುರ ಯಾವುದು? ಅವರು ಕಟ್ಟಬಯಸಲು ಹೊರಟ ಶಿವಾಪುರ ಹೇಗಿದೆ? ಎಂಬುದನ್ನು ಶಿವನಡಂಗುರ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಶಿವಾಪುರದ ಪುರಾಣ, ಚರಿತ್ರೆ, ವರ್ತಮಾನ, ಭವಿಷ್ಯದ ಸಾಧ್ಯತೆಗಳನ್ನು ಸೂಚಿಸುವ ಮಹತ್ವಾಕಾಂಕ್ಷೆ ಕಂಬಾರರದ್ದಾಗಿದ್ದು ಈ ಶಿವಾಪುರದ ಸುತ್ತಮುತ್ತ ನಡೆದ ಘಟನೆಗಳೇನು? ಎಂಬುದನ್ನು ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

ಶಿವನ ಡಂಗುರ ಕಾದಂಬರಿಯಲ್ಲಿ ಬರಮೇಗೌಡ-ತುಂಗಿ(ತುಂಗವ್ವ), ಚೆಂಬಸ-ಶಾರಿ ಇವರ ಅಂತರ್ಜಾತಿ ವಿವಾಹಗಳು ಜರುಗುವವು. ಈ ಅಂತರ್ಜಾತಿ ವಿವಾಹಕ್ಕೆ ಕಂಬಾರರು ಕಾದಂಬರಿ ಮೂಲಕ ಕೊಟ್ಟ ನಿದರ್ಶನಗಳೇನು? ಎಂಬುದನ್ನು ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಘಟಪ್ರಭಾ ನದಿಯ ದಕ್ಷಿಣ ದಂಡೆಯ ಮೇಲೆ ನೀರಲ್ಲಿ ಕಾಲಿಳಿಬಿಟ್ಟಂತೆ ಕೂತಿರುವ ಶಿವಾಪುರದಲ್ಲಿ ಬರಮೇಗೌಡನದ್ದೇ ಊರಿನ ಒಡೆತನವಿದ್ದು ಆತನ ವ್ಯಸನ ಮತ್ತು ದುರಾಲೋಚನೆಗಳಿಂದ ಸ್ವಚ್ಛಂದವಾಗಿದ್ದ ಶಿವಾಪುರದಲ್ಲಿ ಗಲಭೆ, ಘರ್ಷಣೆಗಳು, ರಾಜಕೀಯ ಹುನ್ನಾರಗಳು ನಡೆಯುತ್ತವೆ. ಹಾಗೇ ಊರಿಗೆ ಅಮೇರಿಕದ ಜಾಕ್ಸನ್ ಕಂಪನಿ ಆಗಮನದಿಂದ ಊರಿನ ಲಯ ತಪ್ಪುತ್ತದೆ. ಇದರಿಂದಾಗಿ ಊರಲ್ಲಿ ಸಂಗರ್ಷಗಳು ಜರುಗುವವು ಈ ಸಂಘರ್ಷ ನೆಲೆಗಳನ್ನು ಅಭ್ಯಸಿಸಿ ವಿಶ್ಲೇಷಣೆಗೈಯುವುದು ಈ ಅಧ್ಯಯನದ ಉದ್ದೇಶವಾಗಿದೆ.

ಈ ಕಾದಂಬರಿಯಲ್ಲಿ ಬರಮೇಗೌಡ, ತುಂಗವ್ವ, ಚೆಂಬಸ, ಕುಂಟೀರಪ, ಶಾರಿ, ನಮಶ್ಶಿವಾಯ, ಮಾದೇವಿ, ಮಾಣಿಕಮ್ಮ, ಪಾರ್ವತಿ, ಬಾಗೀರ್ತಿ, ಮುಂತಾದ ಪಾತ್ರಚಿತ್ರಣಗಳ ಮೂಲಕ ಕಂಬಾರರು ಶಿವನಡಂಗುರ ಕಾದಂಬರಿಯನ್ನು ಹೆಣೆದಿದ್ದು ಈ ಪಾತ್ರಗಳ ವಿವಿಧ ಮುಖಗಳನ್ನು ವಿಶ್ಲೇಷಿಸುವುದು ಮುಖ್ಯವಾಗಿದ್ದು ಬರಮೇಗೌಡನ ಒಡೆತನ, ವ್ಯಸನ, ಕುಂಟೀರಪ್ಪನ ಕುತಂತ್ರ, ಚೆಂಬಸನ ಹೊಸಬಗೆಯ ಮುಂದಾಲೋಚನೆ, ನಮಶ್ಶಿವಾಯನ ಸಲಹೆ, ಪಾರ್ವತಿಯ ಮುಗ್ದ ಪ್ರೀತಿ, ತುಂಗಿಯ ಮಮತೆ, ಮಾದೇವಿ ಸಮಾನ ದೃಷ್ಟಿಕೋನ ಇವೆಲ್ಲ ಅಂಶಗಳು ಕಾದಂಬರಿಯಲ್ಲಿ ಚಿತ್ರಿತಗೊಂಡ ಬಗೆಯನ್ನು ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಇಷ್ಟೇ ಅಲ್ಲದೆ ಚಂದ್ರಶೇಖರ ಕಂಬಾರರ ಬದುಕು-ಬರಹ ಮತ್ತು ಶಿವನ ಡಂಗುರ ಕಾದಂಬರಿ ಕುರಿತಾಗಿ ಬಂದಿರುವ ಲೇಖನಗಳನ್ನು ಮುಂದಿಟ್ಟುಕೊಂಡು ಈ ಕಾದಂಬರಿಯನ್ನು ಅಭ್ಯಸಿಸಿ ವಿವಿಧ ಆಯಾಮಗಳಿಂದ ಗುರ್ತಿಸಿ ಕಂಡುಬರುವ ಪ್ರತಿಫಲಗಳೇನು? ಎಂಬುದನ್ನು ತಿಳಿಪಡಿಸುವುದು ಈ ಅಧ್ಯಯನದ ಒಟ್ಟು ಉದ್ದೇಶವಾಗಿದೆ.

೧.೩. ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಅಧ್ಯಯನವು ಡಾ. ಚಂದ್ರಶೇಖರ ಕಂಬಾರರು ರಚಿಸಿದ 'ಶಿವನ ಡಂಗುರ' ಕಾದಂಬರಿಯನ್ನು ಮೂಲ ಪಠ್ಯವಾಗಿ ಆಯ್ದುಕೊಳ್ಳಲಾಗಿದೆ. ಹಾಗೇ ಈ ಶಿವನ ಡಂಗುರ ಕಾದಂಬರಿ ಕುರಿತಾಗಿ ಪತ್ರಿಕೆಯಲ್ಲಿ ಈವರೆಗೆ ಬಂದಿರುವ ವಿಮರ್ಶಾ ಲೇಖನಗಳನ್ನು ಕಂಬಾರರ ಕುರಿತಾಗಿ ಬಂದಿರುವ ಗ್ರಂಥಗಳನ್ನೂ ಸಹ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಶಿವಾಪುರ ಸುತ್ತ ಮುತ್ತ ಅನೇಕ ಘಟನೆಗಳು ಜರುಗುತ್ತವೆ. ದುರಾಡಳಿತ, ಮತ್ತು ಜಾಗತೀಕರಣದಿಂದ ಗ್ರಾಮೀಣ ಬದುಕಿನ ಮೇಲೆ ಆಧುನಿಕ ಉಂಟುಮಾಡಿದ ಪರಿಣಾಮಗಳೇನು? ಎಂಬುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಅಲ್ಲದೆ, ಅಂತರ್ಜಾತಿ ವಿವಾಹದಿಂದ ಇಂದಿನ ಸಮಾಜದಲ್ಲಿ ಬದಲಾಗುತ್ತಿರುವ ಅಂಶಗಳನ್ನು ಕಾದಂಬರಿ ಚಿತ್ರಿಸುತ್ತದೆ. ಬರಮೇಗೌಡನು ತುಂಗಿ ಎಂಬ ದೇವದಾಸಿ ಮತ್ತು ದಲಿತ ಸ್ತ್ರೀಯನ್ನು ಪ್ರೀತಿಸಿ ತನ್ನವಳನ್ನಾಗಿಸಿಕೊಂಡ. ಹಾಗೇ ಚೆಂಬಸನೂ ಕೂಡಾ ಶಾರಿಯನ್ನು ಪ್ರೀತಿಸಿ ಮದುವೆಯಾದ. ಇದರಿಂದಾಗಿ ಊರಲ್ಲಿ ಉಂಟಾದ ಬದಲಾವಣೆಗಳನ್ನು ಕಾದಂಬರಿಯು ತಿಳಿಸುವ ಬಗೆಯನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಶಿವಾಪುರ ಎನ್ನುವ ಊರಲ್ಲಿ ಬರಮೇಗೌಡನ ವಿಲಾಸಿ ಜೀವನ, ದುರಾಡಳಿತ ಹಾಗೂ ಕುಂಟೀರಪ್ಪನ ಕುತಂತ್ರದಿಂದಾಗಿ ಆಧುನಿಕತೆ ಆವರಿಸಿ ಊರಿನ ಹಿಡಿತ ತಪ್ಪುತ್ತದೆ, ಪರಿಣಾಮವಾಗಿ ಊರಲ್ಲಿ ಅನ್ಯಾಯ ಅತ್ಯಾಚಾರ ರಾಜಕೀಯ ಹುಣ್ಣಾರಗಳು ಉಂಟಾಗಿ ಊರಲ್ಲಿ ಕೊಲೆ ಸುಲಿಗೆಗಳು ಜರಗುತ್ತವೆ ಈ ಕುರಿತು ಚರ್ಚೆಗೈಯುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ವಿದೇಶಿ ತ್ಯಾಜ್ಯದಿಂದಾಗಿ ಊರಲ್ಲಿ ವಿಕೃತ ಸಂತಾನಗಳು ಹುಟ್ಟುತ್ತವೆ, ರೋಗ ರುಜಿನುಗಳು ಕಂಡುಬರುತ್ತವೆ ಅಲ್ಲದೆ ಊರಲ್ಲಿ ತನ್ನ ಹೆಂಡತಿ ಮೇಲೆ ಅತ್ಯಾಚಾರ ಗೈದ ಪೋಲಿಸರನ್ನು ಹಾಗೂ ರಾಡಿರಮೇಶರನ್ನು ಚೆಂಬಸನೆಂಬ ನಾಯಕ ಕೊಲೆಗೈದ ಬಗೆ ಕುರಿತ ಚರ್ಚೆ ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ.

೧.೪. ಅಧ್ಯಯನದ ವಿಧಾನ:

ಪ್ರಸ್ತುತ ಅಧ್ಯಯನವು ಶಿವನ ಡಂಗುರ ಕಾದಂಬರಿಯನ್ನು ವಿಶ್ಲೇಷಿಸುವದಾಗಿದ್ದು ಈ ಅಧ್ಯಯನದ ಪ್ರಮುಖ ವಿಧಾನಗಳು ಈ ಕೆಳಕಂಡಂತಿವೆ.

೧. ಜಾಗತೀಕರಣದಿಂದಾಗಿ ಗ್ರಾಮೀಣ ಬದುಕಿನ ಮೇಲೆ ಉಂಟಾಗುತ್ತಿರುವ ಪರಿಣಾಮಗಳನ್ನು ಕುರಿತು ಚರ್ಚಿಸಲಾಗುವುದು.

೨. ಶಿವನ ಡಂಗುರ ಕಾದಂಬರಿಯ ಒಟ್ಟು ಆಶಯವೇನು? ಎಂಬುವುದನ್ನು ಚರ್ಚಿಸುವುದು.

೩. ಶಿವಾಪುರದ ಸುತ್ತಮುತ್ತ ನಡೆಯುವ ಘಟನೆಗಳ ಕುರಿತು ಚರ್ಚಿಸಲಾಗುವುದು.

೪. ಮಾನವನ ಗುಣಗಳಾದ ಪ್ರೀತಿ, ಆಸೆ, ಮೋಹ, ವ್ಯಸನ, ದುರಾಲೋಚನೆ ಮುಂತಾದ ಗುಣಗಳು ಈ ಕಾದಂಬರಿಯಲ್ಲಿ ಹೇಗೆ ಅಡಕವಾಗಿವೆ ಎಂಬುದರ ಕುರಿತಾಗಿ ಪಾತ್ರಗಳ ಮೂಲಕ ಚರ್ಚಿಸಲಾಗುವುದು.

೫. ಸಮಾಜವನ್ನ ಒಂದು ಮಾಡುವಲ್ಲಿ ಅಂತರ್ಜಾತಿ ಮದುವೆಗಳ ಪಾತ್ರಗಳು ಯಾವುವು ಎಂಬುದನ್ನು ವಿವಿಧ ಆಯಾಮಗಳ ಮೂಲಕ ಚರ್ಚಿಸುವುದು.

೬. ಸಂಘರ್ಷಗಳು ನಡೆಯುವ ಕಾರಣಗಳು ಪರಿಣಾಮಗಳ ಕುರಿತಾಗಿ ಈ ಕಾದಂಬರಿ ಮೂಲಕ ಚರ್ಚಿಸುವುದು.

೭. ಕಂಬಾರರ ದೇಶಿಯ ಚಿಂತನೆಗಳಾವುವು ಎಂಬುದನ್ನ ವಿವಿಧ ಅಧ್ಯಯನಗಳ ಹಿನ್ನೆಲೆಯಲ್ಲಿ ಪರಾಮಾರ್ಶಿಸುವುದು.

೮. ನಾವು ಇಂದು ಎಷ್ಟೇ ಮುಂದುವರಿಯುತ್ತಿದ್ದರೂ ಅಲೌಕಿಕವಾದ ಶಕ್ತಿಗೆ ಎಲ್ಲೋ ಒಂದು ಕಡೆ ಮತ್ತೆ ಅದಕ್ಕೆ ಅಂಟಿಕೊಳ್ಳುವುದು ಅನಿವಾರ್ಯವೇನೋ ಎಂಬ ಆಯಾಮವನ್ನು ಚರ್ಚಿಸಲಾಗುವುದು.

೯. ಜೀವನದಲ್ಲಿ ಇಂದು ಗುರುವಿನ ಮಾರ್ಗದರ್ಶನ ಅವಶ್ಯಕ ಎಂಬುದನ್ನು ಕಾದಂಬರಿಯಲ್ಲಿ ಬರುವ ನಮಶ್ಶಿವಾಯನ ಪಾತ್ರ ಸಾಕ್ಷಿಯಾಗಿ ನಿಲ್ಲುತ್ತದೆ. ಈ ಕುರಿತು ಚರ್ಚಿಸಲಾಗುವುದು.

೧೦. ಚಂದ್ರಶೇಖರ ಕಂಬಾರರ ಬದುಕು ಹಾಗೂ ಬರಹ ಕುರಿತಾಗಿ ಪರಿಚಯಿಸಲಾಗುವುದು.

* * *

ಅಧ್ಯಾಯ- ೨

ಚಂದ್ರಶೇಖರ ಕಂಬಾರರ ಬದುಕು-ಬರಹ ಸಂಕ್ಷಿಪ್ತ ಪರಿಚಯ

ಅಧ್ಯಾಯ- ೨

ಚಂದ್ರಶೇಖರ ಕಂಬಾರರ ಬದುಕು-ಬರಹ ಸಂಕ್ಷಿಪ್ತ ಪರಿಚಯ

೨.೧. ಬಾಲ್ಯ ಜೀವನ ಹಾಗೂ ಪ್ರಾಥಮಿಕ ಶಿಕ್ಷಣ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಡಾ. ಚಂದ್ರಶೇಖರ ಕಂಬಾರ ಅವರು ತಮ್ಮ ಹೆಜ್ಜೆ ಗುರುತನ್ನು ಮೂಡಿಸಿದ್ದಾರೆ. ಕಾವ್ಯ, ನಾಟಕ, ಕಾದಂಬರಿ ಕ್ಷೇತ್ರದಲ್ಲಿ ಇವರು ಸಾಹಿತ್ಯ ಕೃಷಿಗೈದಿದ್ದಾರೆ. ಗ್ರಾಮೀಣ ಜೀವನದ ಆಪ್ತ ಅನುಭವಗಳನ್ನು ಹೀರಿಕೊಂಡು ಅವರ ಜೀವನದಲ್ಲಿ ಅನುಭವಿಸಿದ ಬಡತನ ಹಾಗೂ ಅನಾನುಕೂಲತೆಗಳು ಜೀವನ ಶ್ರದ್ಧೆಗೆ ವ್ಯಕ್ತಿತ್ವದ ನಿರ್ಮಾಣಕ್ಕೆ ಪೂರಕವಾದವು. ಆದ್ದರಿಂದ ಅವರ ಬರಹಗಳಲ್ಲಿ ಅಚ್ಚ ಜಾನಪದೀಯ ಅಂಶಗಳು ಕಂಡುಬರುತ್ತವೆ.

ಡಾ. ಚಂದ್ರಶೇಖರ ಕಂಬಾರರು ರಾಷ್ಟ್ರಮಟ್ಟದಲ್ಲಿ ಕನ್ನಡದ ಸಿದ್ಧಿ ಸಾಧನೆಗಳನ್ನು ಎತ್ತಿ ಹಿಡಿದಿರುವ ಹಾಗೂ ಅವರ ಪ್ರತೀಕವಾಗಿರುವ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾಗಿದ್ದಾರೆ. ಕಾವ್ಯ, ನಾಟಕ, ಕಾದಂಬರಿ ಮತ್ತು ಜಾನಪದ ಕ್ಷೇತ್ರಗಳಲ್ಲಿ ಮಹತ್ವದ ಕೃತಿಗಳನ್ನು ಕಾಣಿಕೆಯಾಗಿತ್ತಿರುವುದು ಮಾತ್ರವಲ್ಲದೆ, ತಮ್ಮ ಆಯ್ಕೆಯ ಎಲ್ಲ ಕ್ಷೇತ್ರಗಳಿಗೆ ಹೊಸ ಆಯಾಮ ನೀಡಿದ್ದಾರೆ. ಜಾನಪದ ಸತ್ವ-ಸೌಂದರ್ಯಗಳನ್ನು ಮೈಗೂಡಿಸಿಕೊಂಡಿರುವ ಇವರು ಚಕೋರಿಯಂತಹ ಮಹಾಕಾವ್ಯವನ್ನು, ಜೋಕುಮಾರಸ್ವಾಮಿ, ಋಷ್ಯಶೃಂಗ, ಕಾಡಕುದುರೆ, ನಾಯಿಕತೆ, ಸಿರಿ ಸಂಪಿಗೆಯಂತಹ ನಾಟಕಗಳನ್ನು ಕರಿಮಾಯಿ, ಸಿಂಗಾರವ್ವ ಮತ್ತು ಅರಮನೆ, ಶಿಖರ ಸೂರ್ಯ, ಮತ್ತು ಇತ್ತೀಚಿಗೆ (೨೦೧೫) ಪ್ರಕಟಗೊಂಡ 'ಶಿವನ ಡಂಗುರ'ದಂತಹ ಕಾದಂಬರಿಗಳು, ಮುಗಳು, ಹೇಳತೇನಿ ಕೇಳ, ಸಾವಿರದ ನೆರಳುದಂತಹ ಕವನಸಂಕಲನ, ಸಂಶೋಧನಾ ಕೃತಿಗಳನ್ನು ಕನ್ನಡಕ್ಕೆ ಕಾಣ್ಕೆಯಾಗಿ ನೀಡಿದ್ದಾರೆ.

ಗ್ರಾಮ್ಯ ಮತ್ತು ಶಿಷ್ಟ ಭಾಷೆಗಳೆರಡರ ಮೇಲೂ ಅವರು ಎಂಥ ಪ್ರಭುತ್ವ ಸಾಧಿಸಿದ್ದರು ಎಂಬುದಕ್ಕೆ ಅವರ ಕೃತಿಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಇವರ ಜೀವನ ಸಾಧನೆ ಅಮೋಘ, ಪಡೆದ ಪ್ರಶಸ್ತಿಗಳು ಅಪಾರ. ಇಂಥಹ ಕನ್ನಡ ಕುವರ, ಜಾನಪದ ಕಥೆಗಾರ, ನಾಟಕಕಾರರಾದ ಕಂಬಾರರು ಬದುಕು ಬರಹವನ್ನು ಈ ಮುಂದಿನಂತೆ ಗುರ್ತಿಸಬಹುದಾಗಿದೆ.

ಉತ್ತರ ಕರ್ನಾಟಕವು ಕಲೆ, ಸಾಹಿತ್ಯ, ಸಂಗೀತ, ಜಾನಪದಕ್ಕೆ ಹೆಸರು ವಾಸಿಯಾದದ್ದು ಇಂತಹ ಪ್ರದೇಶಕ್ಕೆ ಒಳಪಟ್ಟ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಗೋಡಗೇರಿ ಗ್ರಾಮವು ಪ್ರೀತಿ-ವಿಶ್ವಾಸ, ಬಡತನ-ಸಿರಿತನ, ಉದಾರತೆ ಇವನ್ನೆಲ್ಲ ತನ್ನ ಒಡಲೊಳಗಿಟ್ಟುಕೊಂಡು ಸದಾ ಕಂಗೊಳಿಸುವ ಹಳ್ಳಿ. ಇಂಥ "ಗೋಡಗೇರಿಯಲ್ಲಿ ೧೯೩೭-ರ ಜನವರಿ ೨ರಂದು ತಂದೆ ಬಸವಣೆಪ್ಪ ತಾಯಿ ಚೆನ್ನಮ್ಮನವರ ಉದರದಿ ಜನಿಸಿದವರು ಚಂದ್ರಶೇಖರ ಕಂಬಾರರು"[೧].

ಕಮ್ಮಾರಿಕೆಯ ವೃತ್ತಿಯ ಬಡಕುಟುಂಬದಲ್ಲಿ ಜನಿಸಿದ ಚಂದ್ರಶೇಖರ ಕಂಬಾರರು ಸಾಂಸ್ಕೃತಿಕವಾದ ಸಿರಿವಂತಿಕೆಯಲ್ಲಿ ಬೆಳೆದರು, ಗೋಡಗೇರಿ ಪುಟ್ಟ ಹಳ್ಳಿಯಾದರೂ ಸಾಂಸ್ಕೃತಿಕವಾಗಿ ಸದಾ ಜೀವಂತಿಕೆಯ ಒರತೆ ಇರುವ ಹಳ್ಳಿ. ಎಲ್ಲ ಹಳ್ಳಿಗಳಲ್ಲಿರುವಂತೆ ಬಡತನ-ಸಿರಿತನ, ಹಾದರ, ವೈರ, ಪ್ರೀತಿ-ವಿಶ್ವಾಸ ಇತ್ಯಾದಿ ಆ ಹಳ್ಳಿಯಲ್ಲೂ ಇದ್ದವು. ಜಾತಿ-ಮತ ಭೇದವಿಲ್ಲದ ಸಹಕಾರ-ಸಹಬಾಳ್ವೆ ಅಲ್ಲಿತ್ತು. ಹೀಗೆ ಈ ಪರಿಸರದಲ್ಲಿ ಬೆಳೆಯುತ್ತಾ ಕಂಬಾರರು ತಮ್ಮ ಬಾಲ್ಯವನ್ನು ಕಳೆದು ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದರು. ಅಂದಿನ ಗೋಡಗೇರಿ ಜೀವನಾನುಭವಗಳು ಕಂಬಾರರ ವ್ಯಕ್ತಿತ್ವದ ಅಡಿಪಾಯವಾಗಿರುವುದು ಗಮನಾರ್ಹ ಅಂಶ ಎಂದರೆ ತಪ್ಪಗಲಾರದು.

ಗೋಡಗೆರಿಯಲ್ಲಿ ೧೮೯೦ರ ಹೊತ್ತಿಗೆ ಪ್ರಾಥಮಿಕ ಶಾಲೆ ಆರಂಭವಾದರೂ ಅಕ್ಷರವಿದ್ಯೆಯ ಕಡೆಗೆ ಗಮನ ನೀಡದ ಅನಕ್ಷರಸ್ಥರ ಸಂಖ್ಯೆಯೇ ಹುಟ್ಟಿತ್ತು. ಹೀಗೆ ೧೯೪೨ ರಲ್ಲಿ ಈ ಊರಿನ ಕೆಲವರು ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರಿಂದ ರಾಷ್ಟ್ರೀಯ ಪ್ರಜ್ಞೆ ಅಷ್ಟಿಷ್ಟಾದರೂ ಉದಯಿಸಿತ್ತು. ಇಬ್ಬರು ಲಿಂಗಾಯತರು. ಒಬ್ಬ ಮುಸ್ಲಿಂ, ಒಬ್ಬ ಹರಿಜನ, ಒಬ್ಬ ಕಂಬಾರ ಬಸವಣ್ಣೆಪ್ಪ (ಚಂದ್ರಶೇಖರ ಕಂಬಾರರ ತಂದೆ) ಈ ಐದು ಜನರ ಪಂಚಾಯಿತಿ ಊರಿನ ಕೋರ್ಟ ಆಗಿತ್ತು. ಅಪ್ರಜ್ಞಾಪೂರ್ವಕವಾಗಿ ಎಲ್ಲ ಜಾತಿಯವರೂ ಹೊಂದಿಕೊಂಡು ಬಾಳುವ ಸೌಹಾರ್ದತೆಯ ಸೂತ್ರ ಗೋಡಗೇರಿಯಲ್ಲಿತ್ತು.

ಗೋಡಗೇರಿ ಗ್ರಾಮಕ್ಕೆ ಲಾವಣಿ, ಗೀಗೀ ಮೇಳಗಳು ವರ್ಷ ಪೂರ್ತಿ ಭೇಟ್ಟಿ ನೀಡುತ್ತಿದ್ದವು. ಪಾರಿಜಾತ ಕಂಪನಿಗಳು ಬರುತ್ತಿದ್ದವು. ಪಾರಿಜಾತದ ಧ್ರುವತಾರೆ 'ಕೌಜಲಗಿ ನಿಂಗಮ್ಮ'ಳ ತಂಡ ಪ್ರತಿ ವರ್ಷ ಬಂದು ಪ್ರದರ್ಶನ ನೀಡುತ್ತಿತ್ತು ಗೋಡಗೇರಿ ಜನಕ್ಕೆ ನಿಂಗಮ್ಮ ಒಂದು ದಂತಕತೆಯಾಗಿದ್ದಳು. ಯಾವುದೇ ಮೆಳ ಈ ಊರಲ್ಲಿ 'ಭೇಷ್' ಅನ್ನಿಸಿಕೊಳ್ಳಲು ಅಪೇಕ್ಷಿಸುತ್ತಿತ್ತು. ಇಲ್ಲಿನ ಜನರ ರಸಿಕರ ಮೆಚ್ಚುಗೆಯೇ ಒಂದು ಅಪೂರ್ವ ಸರ್ಟಿಫಿಕೇಟ್ ಆಗಿತ್ತು. "ಸಂಗ್ಯಾಬಾಳ್ಯ" ನಾಟಕ ಆ ಊರವರಿಗೆ ಮನೆಮಾತಾಗಿತ್ತು ಅಲ್ಲದೇ ಗದುಗಿನ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಈ ಗ್ರಾಮಕ್ಕೆ ತಮ್ಮ ಆಧ್ಯಾತ್ಮದ ಗುಂಗು ಹಿಡಿಸಿದ್ದರು. ಪ್ರತಿ ವರ್ಷ ಶ್ರಾವಣದಲ್ಲಿ ಅವರು 'ಪ್ರಭುಲಿಂಗ ಲೀಲೆ' ಮೊದಲಾದ ಪುರಾಣಗಳನ್ನು ಹೇಳುತ್ತಿದ್ದರು. ಬೆಳಗಿನ ವೇಳೆ ಹಿರಿಯರಿಗಷ್ಟೇ ನಿಜಗುಣರ ಶಾಸ್ತ್ರ ಪ್ರವಚನವಿರುತ್ತಿತ್ತು. ಇಂತಹ ಕಲೆ ಆಚಾರ- ವಿಚಾರದಲ್ಲಿ ಕಂಬಾರರೆಂಬ ಪುಷ್ಪ ಅರಳಿತು.

ಕಂಬಾರಿಕೆ ವೃತ್ತಿಯ ಬಡರೈತ ಕುಟುಂಬದಲ್ಲಿ ಚಂದ್ರಶೇಖರರು ಹುಟ್ಟಿದ್ದರು. ತಂದೆ ಬಸವಣೆಪ್ಪ ಊರಿನ ಗಣ್ಯವ್ಯಕ್ತಿ ಮೇಲಾಗಿ ವಿದ್ಯಾವಂತ, ಬಯಲಾಟ ಮತ್ತು ಹಾಡುಗಾರಿಕೆಯ ಬಗ್ಗೆ ಅಪಾರ ತಿಳುವಳಿಕೆ ಹೊಂದಿದ್ದ ರಸಿಕ. ಬಸವಣೆಪ್ಪ ಅಟ್ಟದ ಮುಂದೆ ಬಂದು ಕುಳಿತುಕೊಂಡ ನಂತರವೇ ಕೌಜಲಗಿ ನಿಂಗಮ್ಮನಂತಹ ಕಲಾವಿದರು ತಮ್ಮ 'ಪಾರಿಜಾತ' ಪ್ರದರ್ಶನ ಪ್ರಾರಂಭ ಮಾಡುತ್ತಿದ್ದರೆಂದರೆ ಅವರ ಘನತೆ-ಗೌರವ ಎಷ್ಟಿತ್ತು ಎಂಬುದು ಗೊತ್ತಾಗುತ್ತದೆ. ಇನ್ನು ತಾಯಿಯೂ ಹಾಡು ಕತೆಗಳ ಕಣಜವೇ ಆಗಿದ್ದಳು. ಇವರ ಮನೆಯು ಹರಿಜನಕೇರಿಯ ಅಂಚಿನಲ್ಲಿತ್ತು ಸೋದರಮಾವ ರಾಮಪ್ಪ

ಈತನನ್ನು ಮುದ್ದಿನಿಂದ ಸಾಕಿದ್ದ. ಆದರೆ ಸರಾಯಿ ಕುಡುಕನಾದ ಈ ರಾಮಪ್ಪನ ಕಂಡ ಚಂದ್ರಶೇಖರ ಕಂಬಾರರಗೆ ಅಧೋಲೋಕದ ಪರಿಚಯವಾಗಿತ್ತು.

ಶಾಲೆಯ ಮೆಟ್ಟಿಲು ಹತ್ತದ ತನ್ನ ವಾರಗೆಯವರಲ್ಲಿ ದನ ಕಾಯಲು ಹೊರಡುವುದು, ಘಟಪ್ರಭಾದಲ್ಲಿ ಈಜಿ ಮೋಜು ಮಾಡುವುದು, ಉಡಾಳರಂತೆ ಊರು ಸುತ್ತುವುದು ಗೋಡಗೇರಿಯಲ್ಲಿ ಸಾಮಾನ್ಯವಾಗಿತ್ತು. ಆದರೆ ಮನೆಯ, ಒತ್ತಾಯಕ್ಕೆ ಮಣಿದು ಬಾಲಕ ಕಂಬಾರರು ಶಾಲೆಗೆ ಹೊರಡಬೇಕಾಗಿತ್ತು ಒಂದೊಂದು ಸಾರಿ ತಂದೆಯ ಕಾಣ್ತಪ್ಪಿಸಿ 'ದನ ಕಾಯುವ' ಕೆಲಸ ಮಾಡುತ್ತಿದ್ದರು. ಅವರೇ ಒಂದೆಡೆ ಹೇಳುವಂತೆ

'ಶಾಲೆ ನನಗೆ ಇಷ್ಟವಾದದ್ದಲ್ಲ ಒತ್ತಾಯದಿಂದ ಒಂದೆರಡು ಸಲ ನನ್ನ ಅಣ್ಣ ಕೈಕಾಲು ಕಟ್ಟಿ ಶಾಲೆಯಲ್ಲಿ ಚೆಲ್ಲಿ ಬಂದುದರಿಂದ ಶಾಲೆಯನ್ನು ಅನಿವಾರ್ಯವಾಗಿ ಕಲಿಯಬೇಕಾಯಿತು'[೨] ಎಂದಿರುವರು.

ಬಾಲಕ ಕಂಬಾರರಿಗೆ ಮೂರನೇಯ ತರಗತಿವರೆಗೂ ಶಾಲೆಯಲ್ಲಿ ಅಷ್ಟು ಆಸಕ್ತಿ ತೋರಿರಲಿಲ್ಲ ನಂತರ ಶಾಲೆಯ ಆಕರ್ಷಣೆ ನಿಧಾನಕ್ಕೆ ಬಲಿಯಿತು. ಆ ವಯಸ್ಸಲ್ಲೇ ಸಣ್ಣ ಪುಟ್ಟ ಪದ್ಯ ಬರೆಯುತ್ತಿದ್ದರು. "ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು" ಎನ್ನುವ ಜನಪದ ಗಾದೆಯಂತೆ ಪುಟ್ಟ ಪುಟ್ಟ ಪದ್ಯ ರಚಿಸುತ್ತಿದ್ದ ಇವರು ನಾಟಕಗಳಲ್ಲಿ ಪಾತ್ರವಹಿಸಿ 'ಹುಡ್ಗ ಭಾಳ ಛಲೋ ಅದಾನ...ನಟನ ಚೆಂದ ಮಾಡ್ತನ' ಎಂದು ಊರಜನರಿಂದ ಮೇಷ್ಟ್ರುಗಳಿಂದ ಶಹಬ್ಬಾಷ್‌ಗಿರಿ ಪಡೆದಿದ್ದ. ಇದೇ ವೇಳೆ ಗ್ರಾಮೀಣ ಬದುಕಿನ ಉಸಿರಾಗಿದ್ದ ಸಂಗ್ಯಾಬಾಳ್ಯಾ, ಶ್ರೀಕೃಷ್ಣ ಪಾರಿಜಾತ, ಲಾವಣಿ-ಗೀಗೀ ಮೇಳವೆಲ್ಲ ಬಾಲಕ ಕಂಬಾರರ ಹೃದಯ ಸೂರೆಗೊಂಡು ಅವರು ಅಂತರಂಗದ ಸೃಜನಶೀಲತೆ ಹುಟ್ಟಿಸುವಲ್ಲಿ ಕಾರಣವಾಗುತ್ತಿದ್ದವು.

ಗೋಡಗೇರಿಯಲ್ಲಿದ್ದ ಸಾಂಸ್ಕೃತಿಕ ವಾತಾವರಣವೇ ಬಾಲಕ ಕಂಬಾರರಲ್ಲಿ ಸಾಂಸ್ಕೃತಿಕ ಚೈತನ್ಯವನ್ನು ಉಕ್ಕಿಸಿತೆನ್ನಬಹುದು. ನಾಲ್ಕು ಗೋಡೆಗಳ ಮದ್ಯೆ ಕೂತು ಕಲಿಯುವ ಒಣಪಾಠಕ್ಕಿಂತ ಬಯಲಲ್ಲಿ ಲಾವಣೀ-ಗೀಗೀ ಮೇಳ, ಶ್ರೀಕೃಷ್ಣ ಪಾರಿಜಾತ ತಂಡಗಳ ಜತೆ ಸುತ್ತುತ್ತಾ ಹುಟ್ಟು ನೆಲದ ಜಾನಪದ ಬದುಕನ್ನು ಬಾಲಕ ಕಂಬಾರರು ಹೀರತೊಡಗಿದ್ದರು.

ಕಂಬಾರರು ತಮ್ಮ ಬಾಲ್ಯವನ್ನು ಹೀಗೆ ನೆನಪಿಸಿಕೊಳ್ಳುವರು. "ಶಾಲೆ ನನಗೇನು ಅಷ್ಟು ಇಷ್ಟವಾದುದ್ದಲ್ಲ ಆದರೂ ಅಪ್ಪನ ಬಲವಂತಕ್ಕೆ ಶಾಲೆಯ ಮೆಟ್ಟಿಲು ಏರಿದೆ, ಒಂದನೇಯ ಎರಡನೇಯ ತರಗತಿ ಹೇಗೋ ಕಳೆಯಿತು. ಮೂರನೇಯ ತರಗತಿಯಲ್ಲಿ ನಾನು ಊರಿನ ಜನಕ್ಕೆ ಮತ್ತು ನನ್ನ ಮೇಷ್ಟ್ರುಗಳಿಗೆ ಮೆಚ್ಚಿನ ವಿದ್ಯಾರ್ಥಿಯಾದೆ. ಕನ್ನಡ ಭಾಷೆಯಲ್ಲಿ ಸಣ್ಣಪುಟ್ಟ ಪದ್ಯ ಲಾವಣಿಗಳನ್ನು ಬರೆಯುತ್ತಿದ್ದೆ. ಮೂರನೇಯ ತರಗತಿಯಿಂದಲೇ ನಾನು ಶಾಲೆಯ ನಾಟಕಗಳಲ್ಲಿ ಪಾತ್ರವಹಿಸತೊಡಗಿದೆ.

ಒಮ್ಮೆ ನನ್ನ ನಾಟಕದ ಪಾತ್ರವನ್ನು ಮೆಚ್ಚಿ ಊರವರು ನನಗೆ '೪' ರೂ. ಇನಾಮು ಕೊಟ್ಟರು. ಇದನ್ನು ಕಂಡು ತಂದೆಯೂ ಖುಷಿಪಡುತ್ತಿದ್ದರು. ಸಂಗ್ಯಾಬಾಳ್ಯಾ ನಾಟಕದಲ್ಲಿ ಕೋಚು(ಹಾಡು) ಹೊಡೆಯುತ್ತಿದ್ದೆ. ನಂತರ ಸ್ವಲ್ಪ ದೊಡ್ಡವನಾಗುತ್ತಲೇ ಸಂಗ್ಯಾಬಾಳ್ಯಾ ನಾಟಕದಲ್ಲಿ ನಾನು ಆಡತೊಡಗಿದೆ. ಆದರೆ ನನ್ನ ಈ ಎಲ್ಲ ಚಟುವಟಿಕೆಗಳು ಅಪ್ಪನನ್ನು ಭಯಗೊಳಿಸಿದವು"[೩] ಎಂದು ಹೇಳಿಕೊಂಡಿದ್ದಾರೆ.

ಮಗನಿಗೆ ಕಮ್ಮಾರಿಕೆಯ ವೃತ್ತಿ ಕಲಿಸಬೇಕೆಂದು ಪ್ರಯತ್ನಿಸಿದರು. ಆದರೆ ಆ ವೃತ್ತಿಯ ಮೇಲೆ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ಆದರೆ ತಮ್ಮ ಬಾಲಪ್ರತಿಭೆಗಳಿಂದಲೇ ಊರಿನವರ ಗಮನ ಸೆಳೆದಿದ್ದರು. ಕಂಬಾರರ ಹಳ್ಳಿಗೆ ಪ್ರತಿವರ್ಷ ಪಾರಿಜಾತದ ಕಂಪನಿಗಳು ಬರುತ್ತಿದ್ದವು. ಅದರಲ್ಲಿ ಕೌಜಲಗಿ ನಿಂಗಮ್ಮಳ ಪಾರಿಜಾತ ತಂಡವಂತೂ ಖಾಯಂ ಬರುತ್ತಿದ್ದ ತಂಡವಾಗಿತ್ತು. ಗೋಡಗೇರಿ ಜನರಿಗೆ ಈಕೆಯ ಪಾರಿಜಾತವೆಂದರೆ ಅಚ್ಚುಮೆಚ್ಚು. ಕೌಜಲಗಿ ನಿಂಗಮ್ಮನಿಗೂ ಆ ಗೋಡಗೇರಿಗೂ ವರ್ಣಿಸಲು ಅಸಾಧ್ಯವಾದಂತಹ ಒಂದು ರೀತಿಯ ಭಾವನಾತ್ಮಕ ಮತ್ತು ಸಾಂಸ್ಕೃತಿಕವಾದ ಸಂಬಂಧವಿತ್ತು. ಬಾಲಕ ಕಂಬಾರರಿಗೆ ಈ ಕೌಜಲಗಿ ನಿಂಗಮ್ಮ ಮರೆಯಲಾರದ ರತ್ನವಾಗಿದ್ದಳು. ಕಂಬಾರರು ಹೇಳುವಂತೆ "ನನ್ನ ಅಪ್ಪನ ಮೂಲಕ ಶ್ರೀಕೃಷ್ಣ ಪಾರಿಜಾತವನ್ನು ನನಗೆ ಕಟ್ಟಿಕೊಟ್ಟವಳು ಕೌಜಲಗಿ ನಿಂಗಮ್ಮ. ಪಾರಿಜಾತದೊಳಗೆ ಭಕ್ತಿಪರವಶಳಾಗಿ ಆಕೆ ಹಾಡುವ ಹಾಡು, ಏರಿಳಿಸುವ ಧ್ವನಿ, ರಾಗ ಸಂಯೋಜನೆ ಹಾಡುವ ಪರಿ, ಅವೆಲ್ಲವನ್ನೂ ಮರೆಯುವಂತಿಲ್ಲ. ಕಂಬಾರರ ತಂದೆ ಹೇಳುವಂತೆ 'ಆಕೆ ಒಬ್ಬ ಅಪ್ಸರೆ'[೪] ಆಗಿದ್ದಳು.

ಬಾಲ್ಯದಲ್ಲಿ ಅಜ್ಜಿ ಕತೆ, ಅಲೌಕಿಕ ಜಗತ್ತಿನ ಕಟ್ಟುಕತೆಗಳು, ಜನಪದ ಕತೆ–ಪುರಾಣ ಕತೆಗಳೆಂದರೆ ಇಷ್ಟಪಡುತ್ತಿದ್ದ ಬಾಲಕ ಕಂಬಾರರು ಹತ್ತಿರದಲ್ಲಿ ತನ್ನ ತಾಯಿಯಿಂದ ಮತ್ತು ಸುಲದಾಳ ಎನ್ನುವ ಗ್ರಾಮದಲ್ಲಿದ್ದ ತನ್ನ ದೊಡ್ಡಮ್ಮನ ಹತ್ತಿರ ಕತೆ ಹೇಳಿಸಿಕೊಳ್ಳುತ್ತಿದ್ದರು. ಅವರಿಬ್ಬರಲ್ಲಿ ಹಾಡು–ಕತೆಗಳ ಖಜಾನೆ ತುಂಬಿ ತುಳುಕುತ್ತಿತ್ತು.

ಬರವಣಿಗೆ ವಿಷಯ ಬಂದಾಗ ಕಂಬಾರರು 'ಅಪ್ಪ ನನಗೆ ಯೋಚನಾಕ್ರಮವನ್ನು ಕಲಿಸಿದರು. ತಾಯಿಯು ಪ್ರತಿಮೆ ರೂಪಕಗಳ ಲೋಕವನ್ನು ಪರಿಚಯಿಸಿದಳು"[೫] ಎಂದು ಹೇಳಿಕೊಳ್ಳುವರು. ಅಪ್ಪನ ಕಂಬಾರ ಸಾಲೆಯೂ ಕಂಬಾರರನ್ನು ಬೌದ್ಧಿಕವಾಗಿ, ಸಾಹಿತ್ತಿಕವಾಗಿ ಬೆಳೆಸಿತೆನ್ನಬಹುದು. ಕಂಬಾರ ಸಾಲೆಗೆ ದಿನನಿತ್ಯ ಬರುತ್ತಿದ್ದ ಹಳ್ಳಿಯ ಹಲವು ತಲೆಗಳು ಆ ಶಾಲೆಯನ್ನು ಚರ್ಚಾಕೇಂದ್ರವನ್ನಾಗಿ ಮಾರ್ಪಡಿಸಿದ್ದವು. ಅಲ್ಲಿ ಚರ್ಚೆಗೆ ಬಾರದ ಕಥೆಗಳಿಲ್ಲ–ವಸ್ತುಗಳಿಲ್ಲ ಎಲ್ಲ ವಿಷಯಗಳು ಅಲ್ಲೇ ಚರ್ಚೆಯಾಗುತ್ತಿದ್ದವು. ಒಂದು ಸಲ ಪ್ರಪಂಚದಲ್ಲಿ ಯಾರು ಸುಂದರಿ ಚರ್ಚೆ ನಡೆದಿತ್ತು. ಎಲ್ಲರೂ ಗಾಂಧಿ–ಗಾಂಧಿ ಹೆಂಡತಿ, ನೆಹರು–ಅವನ ಹೆಂಡತಿ ಹೀಗೆ ತಮಗೆ ಅನಿಸಿದವರ ಹೆಸರು ಹೇಳುತ್ತಿದ್ದರು. ಆದರೆ ನನ್ನ ಅಪ್ಪ ಹೇಳಿದ "ಜೊಚ್ಚಲ ಬಸುರಿ ಚೆಂದ–ದುಡಿಯುವ ಗಂಡ ಚಂದ ಅಂತಾ" ಹೀಗೆ ತಂದೆಯ ಯೋಚನಾಕ್ರಮ ವಿಶಿಷ್ಟವಾಗಿತ್ತು.

ನಾನು ಕನ್ನಡಿ ನೋಡಿಕೊಳ್ಳುವಾಗಲೆಲ್ಲ ಅಪ್ಪ ಹೇಳುತ್ತಿದ್ದ– "ಆ ಕನ್ನಡಿ ನೋಡಿದರೆ ಏನು ಕಾಣಿಸುತ್ತೆ ನೀನು ಒಬ್ಬನೇ ಕಾಣಿಸುತ್ತಿ ಅದೇ ಹೊಂಡದ ನೀರಲ್ಲಿ ನಿನ್ನನ್ನು ನೋಡಕೋ, ನಿನ್ನ ಜೊತೆಗೆ ಸೂರ್ಯ, ಆಕಾಶ, ಮೋಡ, ಹಾರುವ ಹಕ್ಕಿಗಳು, ಸುತ್ತಲ ಮರಗಿಡ ಬಳ್ಳಿಗಳು ಕಾಣಿಸುತ್ತವೆ. ಹಾಗೇ ನಿನ್ನನ್ನು ಮಾತ್ರ ನೋಡಿಕೊಳ್ಳುವುದಲ್ಲ ನಿನ್ನ ಜೊತೆ ನಿನ್ನ ಕರಳು ಬಳ್ಳಿಯನ್ನೆಲ್ಲ ನೋಡಿಕೊಳ್ಳುವುದರಲ್ಲಿ ಅರ್ಥವಿದೆ ಅದನ್ನು ಕಲಿ....."[8] ಎಂದು ಅಪ್ಪ ನನ್ನಲ್ಲಿ ಸಮುದಾಯ ಪ್ರಜ್ಞೆಯನ್ನು ಬೆಳೆಸಿದ್ದರು.

ಮುಲ್ಕಿ ಪರೀಕ್ಷೆ ಪಾಸಾದ ಮೇಲೆ ಚಂದ್ರಶೇಖರರು ಗೋಕಾಕದ ಮುನ್ಸಿಪಲ್ ಹೈಸ್ಕೂಲ್ ಸೇರಿದರು. ಅಲ್ಲಿ ಕೃಷ್ಣ ಮೂರ್ತಿ ಪುರಾಣಿಕರು ಗುರುಗಳು. ಅವರು ಪ್ರತಿ ರವಿವಾರ ಆಸಕ್ತಿ ವಿದ್ಯಾರ್ಥಿಗಳನ್ನು ಕೂಡಿಸಿ ಸಾಹಿತ್ಯದ ಚರ್ಚೆ ನಡೆಸುತ್ತಿದ್ದರು. ವಿದ್ಯಾರ್ಥಿಗಳ ಕವಿತೆ, ಪ್ರಬಂಧ, ಕತೆಗಳನ್ನು ಓದಿ ಅವನ್ನೆಲ್ಲ ತಿದ್ದುತ್ತಿದ್ದರು ಮತ್ತು ಪ್ರೋತ್ಸಾಹಿಸಿ ಅವರ ಬೆಳವಣಿಗೆಗೆ ಕಾರಣರಾಗಿರುತ್ತಿದ್ದರು. ಈ ವೇಳೆ ಚಂದ್ರಶೇಖರ ಕಂಬಾರರು ಕೃಷ್ಣಮೂರ್ತಿ ಪುರಾಣಿಕರ ಪ್ರೀತಿಯ ಶಿಷ್ಯರಾದರು ಕಾರಣ ಕಂಬಾರರ ಕತೆ ಕವಿತೆಗಳು ಕೃಷ್ಣಮೂರ್ತಿಗಳಿಗೆ ಅತ್ಯಂತ ಪ್ರೀಯವಾಗಿದ್ದವು. ಈ ವೇಳೆ ಕಂಬಾರರಿಗೆ ತಮ್ಮ ಸಂಬಂಧಿಕರ ಮನೆಯಲ್ಲಿ ವಾಸ್ತವ್ಯ ಇದ್ದಿದ್ದರಿಂದ ಅದು ಸರಿಹೋಗಲಿಲ್ಲ. ನಿರ್ವಾಹವಿಲ್ಲದೆ ವಿದ್ಯಾಭ್ಯಾಸ ಕೈಬಿಟ್ಟು ಹಳ್ಳಿ ಸೇರಿದ್ದರು. ಪುರಾಣಿಕರು ಕಂಬಾರರಲ್ಲಿ ಅಡಗಿದ್ದ ಪ್ರತಿಭೆ ಗುರ್ತಿಸಿ ತಾವೇ ಹೈಸ್ಕೂಲ್ ಫೀ ಕಟ್ಟಿ ತಮ್ಮ ಗೆಳೆಯ 'ಮುಂಡಾಸ ಮಾಸ್ತರ'ರಿಗೆ ಹೇಳಿಸಿ ಸಾವಳಗಿ ಮಠದ ಶಾಖಾ ಮಠ ಗೋಕಾಕದಲ್ಲಿ ಕಂಬಾರರಿಗೆ ವಸತಿ ವ್ಯವಸ್ಥೆ ಮಾಡಿಸಿಕೊಟ್ಟರು, ಈ ಸಂಧರ್ಭದಲ್ಲಿ ಮಠದ ಸಿದ್ಧರಾಮ ಸ್ವಾಮಿಗಳು ಇವರ ಮೇಲೆ ಪರಿಣಾಮ ಬಿರಲು ಮುಂದಾದರು.

ಸಿದ್ಧರಾಮ ಸ್ವಾಮಿಗಳು ಬಗ್ಗೆ ಮಾತಾಡುವಾಗಲೆಲ್ಲ ಕಂಬಾರರು ಭಾವುಕರಾಗುತ್ತಾರೆ. ತಮ್ಮ ಕಾವ್ಯ ನಾಟಕಗಳಲ್ಲಿ ಅವರನ್ನು ಭಕ್ತಿಯಿಂದ ಸ್ಮರಿಸಿದ್ದಾರೆ. ಸಿದ್ಧರಾಮ ಸ್ವಾಮಿಗಳು ತೋರಿದ ಆ ತಾಯಿ ಪ್ರೀತಿ ಅವರನ್ನು ಮಂತ್ರಮುಗ್ಧರನ್ನಾಗಿಸಿತ್ತು. ಕಂಬಾರರು ಬರೆದ ಕವಿತೆ, ಲಾವಣಿ ಪ್ರಬಂಧಗಳನ್ನು ಓದಿ ಅವುಗಳಿಗೆ ಮೆಚ್ಚುಗೆ ಸೂಚಿಸುತ್ತಿದ್ದರು. ಕುವೆಂಪು ಮತ್ತು ಮಧುರಚೆನ್ನನ ಕಾವ್ಯಶೈಲಿ ಕಂಬಾರರ ಮೇಲೆ ಗಾಡ ಪರಿಣಾಮ ಬೀರಿತ್ತು. ತಾವು ಎಸ್.ಎಸ್.ಎಲ್.ಸಿ. ಬರುವಷ್ಟರಲ್ಲಿ ಕವಿತೆ ರಚನೆಯಲ್ಲಿ ಸಾಕಷ್ಟು ಫಳಗಿದ್ದರು. ಅಲ್ಲದೇ ತಮ್ಮ ಕವಿತೆಗಳನ್ನು ಆಗಾಗ ಬಸವರಾಜ ಕಟ್ಟೀಮನಿಯವರಿಗೆ ತೋರಿಸಿ ಮೆಚ್ಚುಗೆ ಪಡೆಯುತ್ತಿದ್ದರು.

ಕಾಲೇಜು ಶಿಕ್ಷಣ :

ಸಾವಳಿಗಿಯ ಸಿದ್ಧರಾಮ ಸ್ವಾಮಿಗಳ ಪ್ರೀತಿ ಮತ್ತು ಆರ್ಥಿಕ ಸಹಾಯದಿಂದ ಎಸ್.ಎಸ್.ಎಲ್.ಸಿ. ಪಾಸಾದರು. ಮುಂದೆ ಕಲಿಯುವುದು ಕಷ್ಟವಾಯಿತು. ಕಾರಣ ಬಡತನವಿದ್ದುದ್ದರಿಂದ ವಿದ್ಯಾಭ್ಯಾಸ ಸಾಧ್ಯವಿಲ್ಲವೆಂದು ಹಳ್ಳಿಗೆ ಮರಳಲು ನಿರ್ಧರಿಸಿದ್ದರು. ಆದರೂ ಇದುವರೆಗೆ ಆಸರೆ ಕೊಟ್ಟು ದಾರಿದೀಪವಾದ ಸಾವಳಗಿ ಸಿದ್ಧರಾಮ ಸ್ವಾಮಿಗಳಲ್ಲಿ ಹತ್ತಿರ ಒಂದು ಮಾತು ಕೇಳಲು ನಿರ್ಧರಿಸಿ,

ವಿದ್ಯಾಭ್ಯಾಸ ಮುಂದುವರಿಸಬೇಕೆನ್ನುವ ಆಸೆ ಹೇಳಿಕೊಂಡರು. ಸ್ವಾಮಿಗಳು ಇವನನ್ನು ಆಶೀರ್ವದಿಸಿ ವಿದ್ಯಾಭ್ಯಾಸಕ್ಕೆ “ಮುನ್ನೂರು ರೂಪಾಯಿ” ಧನ ಸಹಾಯ ಮಾಡಿದರು. ಸಂತಸಗೊಂಡ ಕಂಬಾರರು ತಮ್ಮ ಮುಂದಿನ ವಿದ್ಯಾಭ್ಯಾಸ ಕಲಿಯಲು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಕಲಾ ವಿಭಾಗಕ್ಕೆ ಸೇರಿಕೊಂಡರು. ವಾಸ್ತವ್ಯವನ್ನು ಅಲ್ಲೇ ಇರುವ ನಾಗನೂರು ಶಿವಬಸವ ಸ್ವಾಮಿಗಳ ಬೋರ್ಡಿಂಗನಲ್ಲಿ ಮಾಡಿಕೊಂಡರು. ಅವರು ಕಾಲೇಜಿಗೆ ಸೇರಿಕೊಂಡಿದ್ದು ೧೯೫೪ರಲ್ಲಿ.

ಹಳ್ಳಿಯ ವಾತಾವರಣದಲ್ಲಿ ಬೆಳೆದ ಕಂಬಾರರು ನಗರದ ಬದುಕಿನಿಂದಾಗಿ ಕೆಲ ಕಾಲ ಕಂಗಾಲಾದರು. ಕಾಲೇಜಿನ ಶಿಷ್ಯ ವಾತಾವರಣವೂ ಅವರಲ್ಲಿ ಆತಂಕ ಮೂಡಿಸಿತ್ತು. ಅದೇ ವರ್ಷ ಕಂಬಾರರು ಒಂದು ಹೊಸ ಕವನವನ್ನು ಕಾಲೇಜ ಮಿಸಲಿನಿಯಲ್ಲಿ ಪ್ರಕಟಿತ ಪಡಿಸಿದರು. ಆ ಪದ್ಯ ಓದಿದ ಪ್ರೊ. ಭೂಸನೂರಮಠರು ಮರುವರ್ಷದ ಆರಂಭಕ್ಕೆ ಕರೆಸಿ ಒಳ್ಳೆಯ ಪ್ರೋತ್ಸಾಹ ಮಾತುಗಳನ್ನಾಡಿದರು. ಅಂದಿನಿಂದ ಗುರು-ಶಿಷ್ಯರ ಸಂಬಂಧ ಗಾಢವಾಗುತ್ತ ಹೋಯಿತು. ಆ ಹದಿ ಹರೆಯ ವಯಸ್ಸಲ್ಲಿ ಕಂಬಾರರ ಸಾಹಿತ್ತಿಕ ಜೀವನ ಒಂದು ಅರ್ಥ ಪೂರ್ಣ ದಾರಿ ಕಂಡುಕೊಳ್ಳಲು ಪ್ರೊ. ಭೂಸನೂರುಮಠರು ಕಾರಣರು. ಅಂತೆಯೇ ಕಂಬಾರರು ತಮ್ಮ ನಾಟಕಗಳಲ್ಲಿ ಭೂಸನೂರಮಠವನ್ನು ಮತ್ತು ಸಾವಳಗಿ ಶಿವಲಿಂಗನನ್ನು ನಾಂದಿ ಪದ್ಯದಲ್ಲಿ ಸ್ಮರಿಸಿರುವುದನ್ನು ಈ ಕೆಳಕಂಡಂತೆ ಗುರ್ತಿಸಬಹುದು.

ಶರಣು ಹೇಳೇವ್ರಿ ಸ್ವಾಮಿ ನಾವು ನಿಮಗೆ

ಸದ್ದುಗದ್ದಲ!..............

....

ಭುಸನೂರಮಠದಯ್ಯ ಸಾವಳಗಿ ಶಿವಲಿಂಗಾ

ಇರಲೆಪ್ಪಾ ನಿಮ್ಮ ಪ್ರೀತಿ ನಮ್ಮಮ್ಯಾಗ ॥[೨]

ಹೀಗೆ ಭೂಸನೂರಮಠರ ವಾತ್ಸಲ್ಯ ಮತ್ತು ಪ್ರೋತ್ಸಾಹಗಳು ಕಂಬಾರರ ಸಾಹಿತ್ತಿಕ ಸೃಷ್ಟಿಗೆ ಹುಮ್ಮಸ್ಸು ನೀಡಿದವು. ಅಲ್ಲದೇ ಭೂಸನೂರಮಠರು ‘ವಚನಸಾಹಿತ್ಯ ಸಂಗ್ರಹ’ ಕೃತಿಯ ತಯಾರಿಯಲ್ಲಿದ್ದರು. ಈ ಕೃತಿಯ ಕೆಲಸಕ್ಕೆ ತಮ್ಮ ಶಿಷ್ಯ ಕಂಬಾರರನ್ನೂ ತೊಡಗಿಸಿಕೊಂಡಿದ್ದರಲ್ಲದೇ ವಚನಗಳನ್ನು ಓದಿ ಪ್ರತಿ ಮಾಡುವ ಮುಖ್ಯ ಕೆಲಸವನ್ನೂ ಅವರಿಗೆ ವಹಿಸಿಕೊಟ್ಟಿದ್ದರು. ಇದರಿಂದಾಗಿ ವಚನಲೋಕದ ಆಳ-ಹರವುಗಳ ಅನುಭವ ಕಂಬಾರರಿಗಾಯಿತು.

ಕಂಬಾರರು ಕಾವ್ಯ ಲೋಕದಿಂದ ನಾಟಕರಂಗಕ್ಕೆ ಕಾಲಿಟ್ಟಿದ್ದು ತಾವು ‘ಇಂಟರ್‌ಮಿಡಿಯಟ್’ ಓದುತ್ತಿದ್ದಾಗ. ಈ ವೇಳೆ ‘ಬೆಂಬತ್ತಿದ ಕಣ್ಣು’ ಎಂಬ ಏಕಾಂತ ನಾಟಕ ಬರೆದು ತರುಣ ಅಧ್ಯಾಪಕ

ಸುಮತೀಂದ್ರ ನಾಡಿಗರ ಒಲವು-ಪ್ರೋತ್ಸಾಹ-ಸ್ನೇಹವನ್ನು ಸಂಪಾದಿಸಿಕೊಂಡರು. ನಾಡಿಗರ ಮುತುವರ್ಜಿಯಿಂದ ಆ ನಾಟಕವು ಧಾರವಾಡ ಆಕಾಶವಾಣಿಯಲ್ಲಿ ಪ್ರಸಾರವಾಯಿತು. ಇದರಿಂದಾಗಿ ಕಂಬಾರರಲ್ಲಿ ಅಡಗಿದ್ದ ನಾಟಕಕಾರ ಇನ್ನಷ್ಟು ಬಲ ಪಡೆದ”

“೧೯೫೭ರಲ್ಲಿ ಅಂದಿನ ತನ್ನ ಪ್ರೀತಿಯ ಕವಿಗಳಾದ ಕುವೆಂಪುರವರನ್ನು ಬೇಟಿಯಾದರು. ಅದು ಧಾರವಾಡ ಸಾಹಿತ್ಯ ಸಮ್ಮೇಳನದಲ್ಲಿ”[೮] ೧೯೫೮ರಲ್ಲಿ ಬಿ.ಎ. ಮುಗಿಯುತ್ತಿದ್ದಂತೆ ಅವರ ಪ್ರಥಮ ಕವನ ಸಂಕಲನ ‘ಮುಗುಳು’ ಪ್ರಕಟವಾಯಿತು ಹೀಗೆ ಕಂಬಾರರು ಬಿ.ಎ ವಿದ್ಯಾಭ್ಯಾಸದಲ್ಲಿ ತಮ್ಮಲ್ಲಿನ ಕವಿತ್ವ, ನಾಟಕತ್ವವನ್ನು ಗುರ್ತಿಸಿಕೊಂಡು ಬೆಳೆಯಲು ಮುಂದಾದರು.

ಉನ್ನತ ಶಿಕ್ಷಣ:

ಬಿ.ಎ. ಪದವಿ ಪಡೆದ ಕಂಬಾರರು ಮುಂದಿನ ವಿದ್ಯಾಭ್ಯಾಸ ಕೈಗೊಳ್ಳಬೇಕೆಂದು ಇಚ್ಚಿಸಿ ೧೯೫೮ರಲ್ಲಿ ಪ್ರೊ. ಭೂಸನೂರಮಠ ಸಹಾಯ, ಮತ್ತು ಮಾರ್ಗದರ್ಶನದಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಶಿಕ್ಷಣವನ್ನು ಮುಂದುವರಿಸಿದರು. ವಿದ್ಯಾಕಾಶಿ, ಸಾಹಿತಿಗಳ ತವರು ನೆಲವಾದ ಧಾರವಾಡವು ಕಂಬಾರರಿಗೆ ಹೊಸ ಚೈತನ್ಯ ಮೂಡಿಸಿತು. ಬಾಡಿಗೆ ಕೊಠಡಿಯಲ್ಲಿದ್ದು ಆರ್ಥಿಕ ಕಷ್ಟ ಎದುರಿಸುತ್ತಲೇ ತಮ್ಮ ಎಂ.ಎ ಪದವಿ ಮುಗಿಸಿದರು. ಇದೇ ವೇಳೆ ಧಾರವಾಡದ ಹಲವು ಸಮಾನ ಮನಸ್ಕ ಸಾಹಿತ್ಯ ಗೆಳೆಯರನ್ನು ಸಂಪಾದಿಸಿಕೊಂಡರು.

ಪ್ರೊ. ಬಿ.ಟಿ. ದೇಸಾಯಿ, ಪ್ರೊ. ಗಿರಡ್ಡಿ ಗೋವಿಂದರಾಜ, ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ, ಪ್ರೊ. ಚಂದ್ರಶೇಖರ ಪಾಟೀಲ ಇವರೆಲ್ಲರೂ ಕಂಬಾರರ ವಿದ್ಯಾರ್ಥಿ ದೆಸೆಯ ಸ್ನೇಹಿತರಾಗಿದ್ದರು. ಕಂಬಾರರ ಸಾಹಿತ್ಯ ಚರ್ಚೆ, ಚಿಂತನೆ ಈ ಸ್ನೇಹಿತ ವಲಯದಿಂದ ಗಟ್ಟಿಗೊಂಡಿತು. ೧೯೬೨ರಲ್ಲಿ ಎಂ.ಎ. ಪದವಿ ಪಡೆದ ಕಂಬಾರರು ಮತ್ತೇ ೧೯೭೫ರಲ್ಲಿ ಇದೇ ವಿಶ್ವವಿದ್ಯಾಲಯದಿಂದ ‘origin and development of karnataka folk theatre’ ಎಂಬ ಮಹಾಪ್ರಬಂಧಕ್ಕಾಗಿ ಪ್ರೊ. ಎಸ್.ಎಸ್. ಭೂಸನೂರಮಠ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿ ಪಡೆದುಕೊಂಡರು. ತಮ್ಮ ಎಂ.ಎ. ಪದವಿ ಮುಗಿವ ವೇಳೆಗೆ ಅಂದರೆ ೧೯೬೨ರ ವೇಳೆ ‘ಹೇಳುತೇನ ಕೇಳ’ ಕವನ ಸಂಕಲನ ಪ್ರಕಟವಾಯಿತು. ಇದು ಒಂದು ಆಧುನಿಕ ಲಾವಣಿಯಾಗಿತ್ತು. ಭಿನ್ನ ಪರಿಸರದಲ್ಲಿ ಹುಟ್ಟಿ ಬಂದ ಈ ಲಾವಣಿ ಕಂಬಾರರಿಗೆ ಕೀರ್ತಿ ತಂದು ಕೊಟ್ಟಿತು.

ಹೀಗೆ ಕಂಬಾರರ ಬಾಲ್ಯ ವಿಚಿತ್ರವಾದದ್ದು ಬಾಲ್ಯದಲ್ಲಿ ಬಡತನ, ಕಷ್ಟ ಕಾರ್ಪಾಣ್ಯಗಳಲ್ಲಿ ಬೆಳೆಯುತ್ತಾ ಅವೆಲ್ಲವುಗಳನ್ನು ಎದುರಿಸುತ್ತಾ ಬೆಳೆದು ಬಂದ ಕಂಬಾರರ ಬದುಕು ಬೇಂದ್ರೆಯಂತಹ ಕವಿಯ ಬದುಕನ್ನು ನೆನಪಿಸುತ್ತದೆ. ಬೇಂದ್ರೆಯವರು ಬೆಂದ್ರ ಮಾತ್ರ ಬೇಂದ್ರೆಯಾಗಲು ಸಾಧ್ಯ ಎನ್ನುವಂತೆ ಬಡತನ, ಕಷ್ಟ ಕಾರ್ಪಣ್ಯಗಳೆಂಬ ಕುಲುಮೆಯಲ್ಲಿ ಬೆಂದು ಶಿಲೆಯಾಗಿ ಕವಿಯಾಗಿ, ನಾಟಕಕಾರರಾಗಿ ಕಾದಂಬರಿಕಾರರಾಗಿ ಹೊರ ಹೊಮ್ಮಿದವರು ಕಂಬಾರರಾಗಿದ್ದಾರೆ.

ಕವಿ ಕುವೆಂಪು ಹೇಳಿದಂತೆ ನಾಮರೂಪಗಳ ದಾಟಿ ಆಗು ನೀ ಅನಿಕೇತನ ಎನ್ನುವಂತೆ ಇಂದು ಕಂಬಾರರು ಕನ್ನಡದ ಅಂತಃಸತ್ವವಾಗಿ ಕನ್ನಡ ಭಾಷೆ, ಸಾಹಿತ್ಯದ ಉಳಿವು ಬೆಳವಣಿಗೆಗಾಗಿ ಕಂಕಣ ಬದ್ಧರಾಗಿ ನಿಂತಿದ್ದಾರೆ ಕನ್ನಡಕ್ಕಾಗಿ ಶ್ರಮವಹಿಸಿ ಕನ್ನಡತನವನ್ನು ಜಗತ್ತಿನ ತುಂಬೆಲ್ಲ ಪ್ರಚುರ ಪಡಿಸಿದ್ದಾರೆ. ಇಂತಹ ಕನ್ನಡ ಕಣಜ ಕಂಬಾರರ ವೃತ್ತಿ ಬದುಕು ಮತ್ತು ಮತ್ತು ಸಂಸಾರಿಕ ಬದುಕಿನ ನೋಟಗಳನ್ನು ಈ ಮುಂದಿನಂತೆ ಗುರ್ತಿಸಬಹುದಾಗಿದೆ.

ವೃತ್ತಿ ಬದುಕು:

ಡಾ. ಚಂದ್ರಶೇಖರ ಕಂಬಾರರು ಎಂ.ಎ. ಪದವಿ ಪಡೆದ ನಂತರ ಅಂದರೆ ೧೯೬೨ರಲ್ಲಿ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯನ್ನು ಆರಂಭಿಸಿದರು. ಅಲ್ಲಿ ಮತ್ತೇ ಗುರುಶಿಷ್ಯರ ಮಿಲನವಾಗಿ ಪ್ರೊ. ಭೂಸನೂರಮಠರ ಒಡನಾಟ ಮತ್ತಷ್ಟು ಬಲಿಯಿತು. ಕಂಬಾರರು ಆಗ ಶಿಷ್ಯ ಈಗ ಸಹೋದ್ಯೋಗಿ, ಆದರೂ ಗುರು ಭೂಸನೂರಮಠರ ಮಾರ್ಗದರ್ಶನದಲ್ಲೇ ತಮ್ಮ ಮುಂದಿನ ದಾರಿಯನ್ನು ಹುಡುಕ ಬಯಸಿದರು. ಈ ಸಮಯದಲ್ಲೇ ಎ.ಕೆ. ರಾಮನುಜನ್ ಅವರೊಂದಿಗೆ ಸ್ನೇಹ-ಸಲಿಗೆ ಇನ್ನಷ್ಟು ಬೆಳೆಯಿತು. ಜಗತ್ತಿನ ಜಾನಪದದ ಬಗ್ಗೆ ಸಮಗ್ರ ಅಧ್ಯಯನ ಆಸಕ್ತಿ ಹೊಂದಿದ್ದ ಎ.ಕೆ. ರಾಮಾನುಜನ್ ಅದರ ಪೂರ್ವಭಾವಿಯಾಗಿ ತಾವು ಕೈಗೊಂಡಿದ್ದ ಜನಪದ ಕತೆಗಳ ಸಂಗ್ರಹಣೆಯ ಕೆಲಸಕ್ಕೆ ಕಂಬಾರರ ನೆರವು ಪಡೆದರು. ಕಂಬಾರರು ಉತ್ತರ ಕರ್ನಾಟಕದ ಸಾವಿರಾರು ಜನಪದ ಸಾಹಿತ್ಯದ ಆಳ-ಅಗಲ ಅಭ್ಯಸಿಸಿದರು. ಹಾಗೇ ಜನಪದ ಸಾಹಿತ್ಯದ ಸತ್ವಶಕ್ತಿ ಎಲ್ಲಿದೆ ಎಂಬುದನ್ನು ಕಂಡುಕೊಂಡರು.

ಕಂಬಾರರು ತಾವು ಅಧ್ಯಾಪಕರಾಗಿದ್ದಾಗಲೇ ಅಂದರೆ ೧೯೬೪ರಲ್ಲಿ 'ಹೇಳತೇನ ಕೇಳ' ಕವನ ಸಂಕಲನ ಪ್ರಕಟಿಸಿ ಅದರಲ್ಲಿ ಜನಪದ ಕಾವ್ಯದಲ್ಲಿನ ಲಯಗಾರಿಕೆ ಬೆರಸಿದರು. ಇದು ಕನ್ನಡ ಕಾವ್ಯ ಪರಂಪರೆಯಲ್ಲೇ ಹೊಸ ಪ್ರಯೋಗ. ಹೀಗೆ ೧೯೬೨ರಿಂದ ೧೯೬೪ ರವರೆಗೆ ಬೆಳಗಾವಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ ಕಂಬಾರರು ೧೯೬೪ರಲ್ಲಿ ಸಾಗರದ 'ಲಾಲ್‌ಬಹದ್ದೂರ್ ಶಾಸ್ತ್ರಿ" ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಕೈಗೊಂಡರು. ಆಗ ಕಾಲೇಜಿನ ಪ್ರಾಂಶುಪಾಲರು ಕವಿ ಗೋಪಾಲಕೃಷ್ಣ ಅಡಿಗರು. ಅಡಿಗರ ಸತತ ಒಡನಾಟದಿಂದ ಕಂಬಾರರ ಸಾಹಿತ್ಯದ ಕಾವ್ಯಶೈಲಿ ಹೊಸ ರೂಪ ಪಡೆಯಿತು. ಈ ವೇಳೆ ಕಂಬಾರರು ನವ್ಯದ ಪ್ರಭಾವಕ್ಕೊಳಗಾದರು. ಆದರೂ ತನ್ನತನ ಬಿಡದೇ ನವ್ಯವನ್ನು ನಿರಾಕರಿಸದೇ, ಜನಪದ ಶೈಲಿ, ಜನಪದ ತಂತ್ರ, ದೇಶಿ ಸತ್ವವನ್ನು ತನ್ನ ಬರಹದಲ್ಲಿ ಎಲ್ಲಿ ಎಷ್ಟು ಹೇಗೆ ಬಳಸಬಹುದು ಎಂಬ ಹೊಸ ಪ್ರಯೋಗದಲ್ಲೇ ಕಂಬಾರರು ಅಲ್ಲಿ ಕೆಲವು ವರ್ಷ ಕಳೆದರು. ಈ ಕಾಲದಲ್ಲಿ ನವ್ಯರು ನಿರ್ಲಕ್ಷಿಸಿದ ಗೇಯತೆ, ದೇಶಿಯತೆಯನ್ನು ಕಂಬಾರರು ತನ್ನ ಬರವಣಿಗೆಯ ಬತ್ತಳಿಕೆಯಲ್ಲಿ ಜೋಪಾನವಾಗಿ ಹೆಕ್ಕಿಟ್ಟುಕೊಂಡು ಮುಂದೆ ಅದನ್ನು ನವ್ಯದ ಆಲೋಚನೆಯೊಂದಿಗೆ ಹೆಣೆದು ಸುಂದರ ಕೃತಿಮಾಲೆಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸುವ ಸುಯೋಗ ದೊರೆತದ್ದು ಈ ಅವಧಿಯ ಚಿಂತನೆಯಿಂದ ಎಂಬುದನ್ನು ಮರೆಯುವಂತಿಲ್ಲ. ಸಾಗರದಲ್ಲಿದ್ದಾಗ ಅಂದರೆ '೧೯೬೫'ರಲ್ಲಿ ಕಂಬಾರರು 'ಉತ್ತರ ಕರ್ನಾಟಕದ

ಜಾನಪದ ರಂಗಭೂಮಿ' ಎಂಬ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದರು. ಸಾಕಷ್ಟು ಶ್ರಮದ ಅಧ್ಯಯನ ಮತ್ತು ಕ್ಷೇತ್ರಕಾರ್ಯಗಳಿಂದ ಉತ್ತರ ಕರ್ನಾಟಕದ ರಂಗ ಪ್ರಕಾರಗಳ ಸಮಗ್ರ ಮಾಹಿತಿ ನೀಡುವ ಈ ಕೃತಿ ಜಾನಪದ ಕ್ಷೇತ್ರದ ಅಮೂಲ್ಯ ಸಂಪತ್ತಾಯಿತು. ಈ ವೇಳೆ ಶಾಂತವೇರಿ ಗೋಪಾಲಗೌಡ, ಜೆ.ಎಚ್.ಪಟೇಲ್, ಕೆ.ವಿ.ಸುಬ್ಬಣ್ಣ, ಕಾಗೋಡು ತಿಮ್ಮಪ್ಪನಂತವರ ಪರಿಚಯವಾಯಿತು.

ಚಂದ್ರಶೇಖರ ಕಂಬಾರರ ಕವಿತೆಯೊಳಗಿನ ಗೇಯತೆ ಹಾಗೂ ಅವರು ಹಾಡುವ ಧ್ವನಿಕಂಡು ಮನಸೋತ ಶಾಂತವೇರಿ ಗೋಪಾಲಗೌಡ್ರು ಕಂಬಾರರ ಕವನ ಕೇಳಲು ಆಗಾಗ ಕಂಬಾರರಿದ್ದಲ್ಲಿಗೆ ಬರುತ್ತಿದ್ದರಂತೆ ಅದನ್ನು ಕಂಬಾರರು ಹೀಗೆ ಹೇಳಿಕೊಂಡಿದ್ದಾರೆ. "...ನಾನು ಸಾಗರದಲ್ಲಿ ಎಲ್ಲಾದ್ರು ಭಾಷಣ ಮಾಡುತ್ತಿದ್ದರೆ ಮತ್ತು ಹಾಡುತ್ತಿದ್ದರೆ ಗೋಪಾಲಗೌಡ್ರು ಮತ್ತವರ ಶಿಷ್ಯ ಬಳಗ ಬಂದು ಮೆತ್ತಗೆ ಕೂತು ಕೇಳಿಸಿಕೊಳ್ಳುತ್ತಿದ್ದರು. ಒಬ್ಬ ತರುಣ ಕವಿ ವಸಾಹತುಶಾಹಿಯನ್ನು ವಿರೋಧಿಸಿ ಹೇಗೆ ಕವಿತೆ ಬರೆದಿದ್ದಾನೆ ನೋಡಿ.. ಎಷ್ಟು ಚೆನ್ನಾಗಿ ಬರೆದಿದ್ದಾರೆ"[೮] ಎಂದು ಎಲ್ಲರೆದುರು ಹೊಗಳುತ್ತಿದ್ದರು.

೧೯೬೪ರಿಂದ ೧೯೬೭ರವರಗೆ ಸಾಗರದಲ್ಲಿಂದ ಕಂಬಾರರು ಮತ್ತು ಉದ್ಯೋಗ ಅರಸಿ ೧೯೬೭ರಲ್ಲಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿಗೆ ಕಾಲಿಟ್ಟರು. ಮುಂದೆ ೧೯೬೮-೬೯ರವೇಳೆ ಅಮೇರಿಕಾದಲ್ಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು.

೧೯೭೦ರಲ್ಲಿ ಅಮೇರಿಕಾದಿಂದ ಮರಳಿ ಬಂದ ಕಂಬಾರರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ ೧೯೯೧ರವರೆಗೆ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ೧೯೯೨ರಿಂದ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕುಲಪತಿಗಳಾಗಿ ನೇಮಕಗೊಂಡು ೬ ವರ್ಷಗಳ ಕಾಲ ವಿಶ್ವವಿದ್ಯಾಲಯವನ್ನು ಕಟ್ಟಿ ಬೆಳೆಸಿದರು.

ಹೀಗೆ ಗೊಡಗೇರಿಯಿಂದ ಉದ್ಯೋಗ ಅರಸಿ ನಾಡಿನ ಅನೇಕ ಕಡೆ ತಮ್ಮ ಪ್ರಾಧ್ಯಾಪಕ ವೃತ್ತಿಗೈದು ಕನ್ನಡ ಸಾಹಿತ್ಯ ಕೃಷಿಗೈದು ತಮ್ಮ ಬದುಕನ್ನು ಹುಟ್ಟು ಹಾಡಾಗಿಸಿದ ಅಪ್ಪಟ ಕನ್ನಡ ಪ್ರತಿಭೆಯಾದ ಕಂಬಾರರ ವೃತ್ತಿ ಬದುಕನ್ನು ಈ ಮೇಲಿನಂತೆ ಗುರ್ತಿಸಬಹುದು.

ಸಂಸಾರಿಕ ಬದುಕು:

ಕಂಬಾರರ ತಂದೆ ಬಸವಣೆಪ್ಪ ತನ್ನ ಮಗ ರಂಗಪ್ರವೇಶ ಮಾಡಿರುವುದನ್ನು ಕಂಡು ತುಂಬಾ ಆತಂಕಕ್ಕೊಳಗಾಗಿದ್ದ ಕಾರಣ ಆ ವೇಳೆ "ಸಂಗ್ಯಾಬಾಳ್ಯಾ" ನಾಟಕ ಎಲ್ಲರಲ್ಲಿ ಆಕರ್ಷಣೆ ಮೂಡಿಸಿತ್ತು. ಅಂತದರಲ್ಲಿ ತನ್ನಮಗ ಆ ನಾಟಕದಲ್ಲಿ ಆಡತೊಡಗಿದಾಗ ಮಗ ಇನ್ನು ಹದಗೆಡಬಾರದೆಂದು ಇಚ್ಛಿಸಿ ಮಗನಿಗೊಂದು ಮೂಗುದಾರ ಹಾಕುವ ಸೊಸೆಯನ್ನು ತರಲು ತೀರ್ಮಾನಿಸಿದರು. ಆಗ ಅವರ ನೆದರಿಗೆ ಬಿದ್ದವಳು ತಮ್ಮ ಪಕ್ಕದ ಹಳ್ಳಿ "ಅಕ್ಕತಂಗೇರ ಹಳ್ಳ"ದ ಸಂಬಂಧಿಯ ಮಗಳು

ಹನ್ನೆರಡರ ಹರೆಯದ ಬಾಲೆ ಸತ್ಯಭಾಮೆ. ಕಂಬಾರರು ತಮ್ಮ ಬಿ.ಎ. ಪದವಿ ಮುಗಿಸುವ ವೇಳೆ ಇವರ ಮದುವೆ ನಿಶ್ಚಿತಾರ್ಥವಾಗಿತ್ತು. ಆಗ ಸತ್ಯಭಾಮೆ ವಯಸ್ಸು ೧೩, ಕುಂಬಾರರ ವಯಸ್ಸು ೨೧ ಇತ್ತು. ಆದರೆ ಮದುವೆ ಜರುಗಿದ್ದು ೧೯೬೪ ಜೂನ್‌ದಲ್ಲಿ.

ಸುಮಾರು ೪ ದಶಕಗಳ ತಮ್ಮ ದಾಂಪತ್ಯ ಜೀವನ ಸಾಗಿಸಿರುವ ಕಂಬಾರರದು ದಂಪತಿಗಳದ್ದು ಈಗ ತುಂಬು ಸಂಸಾರವಾಗಿದ್ದು ಒಬ್ಬ ಮಗ, ಮೂರು ಹೆಣ್ಣು ಮಕ್ಕಳು , ನಾಲ್ಕು ಮಂದಿ ಮೊಮ್ಮಕ್ಕಳು. ತನ್ನ ಹೆಂಡತಿ ಮನೆ-ಮಕ್ಕಳ ಜವಾಬ್ದಾರಿ ವಹಿಸಿಕೊಂಡು ಸಮರ್ಥವಾಗಿ ತನಗೆ ಸಹಧರ್ಮಿಣಿಯಾಗಿ ಬಾಳ್ವೆ ಸಾಗಿಸಿಕೊಂಡು ಬಂದ ಸತ್ಯಭಾಮೆ ಮೇಲೆ ಕಂಬಾರರಿಗೆ ಅಪಾರ ಕೃತಜ್ಞತೆ-ಗೌರವವಿದೆ.

ಹೀಗೆ ಕಂಬಾರರ ಒಟ್ಟು ಬಾಲ್ಯ, ಯೌವನ, ವಿದ್ಯಾಭ್ಯಾಸ, ವೃತ್ತಿಬದುಕು, ಸಂಸಾರಿಕ ಬದುಕಿನ ಮಧ್ಯೆ ಅವರ ಸಾಹಿತ್ಯ ನೋಟಗಳನ್ನು ಈ ರೀತಿ ಗುರ್ತಿಸಬಹುದು.

೨.೨. ಕಂಬಾರರ ಬರಹಗಳು

ಜನಪದ ಸಾಹಿತ್ಯ ಸಂಸ್ಕೃತಿಯಿಂದ ಪ್ರೇರಣೆ ಪಡೆದ ಕಂಬಾರರು ತಮ್ಮ ಜೀವನದುದ್ದಕ್ಕೂ ದೇಶಿ ಸಂಸ್ಕೃತಿಯ ಕೂಸನ್ನು ಮಡಲಿಗೆ ಕಟ್ಟಿಕೊಂಡು ಜೋಪಾನ ಮಾಡಿದವರು. ದೇಶಿಯ ಅಪ್ಪಟ ಬರಹಗಾರರಾಗಿ ಗುರ್ತಿಸಿಕೊಂಡ ಇವರು ಕಾವ್ಯ, ನಾಟಕ, ಕಾದಂಬರಿ, ಸಂಶೋಧನೆ, ಮಹಾಕಾವ್ಯದಲ್ಲಿ ಸಾಹಿತ್ಯ ಕೃಷಿ ಮಾಡಿ ಇಲ್ಲಿಯವರೆಗೆ ಒಟ್ಟು ೫೮ ಕೃತಿಗಳನ್ನು ರಚಿಸಿ ರಾಷ್ಟ್ರಮಟ್ಟದಲ್ಲಿ ಕನ್ನಡ ಸಿದ್ಧಿ ಸಾಧನೆಗಳನ್ನು ಎತ್ತಿ ಹಿಡಿದ ಕನ್ನಡದ ಪ್ರಮುಖ ಬರಹಗಾರರಾಗಿದ್ದಾರೆ. ಅವರ ಒಟ್ಟು ಬರಹಗಳನ್ನು ಸಂಕ್ಷಿಪ್ತವಾಗಿ ಈ ಕೆಳಕಂಡಂತೆ ಗುರ್ತಿಸಬಹುದು.

೨.೨.೧. ಕವನ ಸಂಕಲನಗಳು

ಬಹುಮುಖ ಪ್ರತಿಭೆಯುಳ್ಳ ಕಂಬಾರರು ಅನೇಕ ಮಹತ್ವದ ಕಾವ್ಯ-ನಾಟಕ-ಕಾದಂಬರಿಗಳನ್ನು ಬರೆದರಾದರೂ ತಾವು ಕವಿ ಎಂದು ಗುರ್ತಿಸಿಕೊಳ್ಳಲು ಇಷ್ಟ ಪಡುತ್ತಾರೆ ಈ ಮಾತಿಗೆ ಅವರೇ ಕೊಡುವ ಸಮರ್ಥನೆ ಹೀಗಿದೆ: "ನಾನು ಮೂಲತಃ ಕವಿ ನಂತರ ನಾಟಕಕಾರ. ನಾನು ಕವಿಯಾಗಿಯೇ ನಾಟಕ, ಕಾದಂಬರಿ ಬರೆಯುವುದು ಮತ್ತು ನಮ್ಮ ಗ್ರಾಮೀಣ ಬದುಕಿನ ತಲ್ಲಣಗಳಿಗೆ ಸ್ಪಂಧಿಸುವುದು ಕವಿಯಾಗಿಯೇ" ಹೀಗೆ ಕವಿಯಾಗಿ ಕಂಬಾರರು ಮುಗುಳು, ಹೇಳತೇನಿ ಕೇಳ, ತಕರಾರಿನವರು, ಸಮಗ್ರ ಕಾವ್ಯ, ಸಾವಿರದ ನೆರಳು, ಆಯ್ದ ಕವನಗಳು, ಬೆಳ್ಳಿ ಮೀನು, ಈವರೆಗೆ ಹೇಳ್ತೇನಿ ಕೇಳ, ಅಕ್ಕಕ್ಕು ಹಾಡುಗಳೇ, ರಾಕ್ ಆಫ್ ಹಂಪಿ, ಎಲ್ಲಿದೆ ಶಿವಾಪುರ ಇವು ಅವರು ಬರೆದ ಕವನಸಂಕಲನಗಳಾಗಿವೆ.

"ಮುಗುಳು" ಕಂಬಾರರ ಮೊದಲ ಸಂಕಲನವಾಗಿದ್ದು ಇದು ೧೯೫೮ರಲ್ಲಿ ಪ್ರಕಟಗೊಂಡ ಕೃತಿಯಾಗಿದೆ. ವಿದ್ಯಾರ್ಥಿ ಜೀವನದ ಅವಧಿಯಲ್ಲಿ ಬರೆದ ಕವನಗಳಾಗಿದ್ದು ನವೋದಯ ಅಂಚಿನಲ್ಲಿ ಬರೆದ ಇಲ್ಲಿನ ಕವನಗಳಲ್ಲಿ ದೇಶಪ್ರೇಮ, ಪ್ರಕೃತಿ ಸಂಭ್ರಮ, ಪ್ರೀತಿ, ಅಧ್ಯಾತ್ಮ-ವೈಚಾರಿಕತೆ, ಮೌಢ್ಯಗಳು ಇವೆಲ್ಲವುಗಳಿಂದ ಕೂಡಿದ ಕವನಗಳಾಗಿವೆ.

"ಹೇಳತೇನ ಕೇಳ" ಇದು ೧೯೬೪ರಲ್ಲಿ ಪ್ರಕಟವಾದ ಕವನ ಸಂಕಲನವಾಗಿದ್ದು ಕಂಬಾರರ ಮಹತ್ವದ ಕೃತಿಗಳಲ್ಲಿ ಇದು ಒಂದಾಗಿದೆ, ಕಂಬಾರರು ಗೋಪಾಲಕೃಷ್ಣ ಅಡಿಗರ ಪರಿಚಯ ಮತ್ತು ಪ್ರಭಾವದಿಂದಾಗಿ ನವೋದಯದಿಂದ ನವ್ಯದ ಕಡೆಗೆ ಹೊರಳಿದರೂ ಹುಟ್ಟು ನೆಲದ ಪರಂಪರೆಯಿಂದ ಜನಪದವನ್ನು ಬಳಸಿಕೊಂಡು ರಚಿಸಿದ ೧೨ ಕವನಗಳಿಂದ ಕೂಡಿದ ಕವನ ಸಂಕಲನ ಇದಾಗಿದೆ. ಈ ಕವನ ಸಂಕಲನದಲ್ಲಿರುವ 'ಹೇಳತೇನ ಕೇಳ' ಕವನವು ಧೀರ್ಘವಾಗಿದ್ದು ಜನಪದ ಭಾಷೆ, ಲಾವಣಿಯಾಗಿದೆ. ಇಲ್ಲಿ ಕವಿಯಾಗಿ ಅವರು ಬಳಸುವ ರೂಪಕ, ಉಪಮೆ ಪ್ರತಿಮೆಗಳು ಜನಪದದಿಂದಲೇ ಬಂದಂತವುಳಾಗಿವೆ. ಜಾನಪದ ರಚನೆಗಳನ್ನು ಆಧುನಿಕ ಪ್ರಜ್ಞೆಯ ಅಭಿವ್ಯಕ್ತಿಯಾಗಿ ಬಳಸಿಕೊಂಡು ಯಶಸ್ವಿಯಾದ ಕವಿಗಳಲ್ಲಿ ಕಂಬಾರರು ಮುಖ್ಯರು ಎಂಬುದನ್ನು "ಹೇಳತೇನ ಕೇಳ" ಸ್ಪಷ್ಟ ಪಡಿಸುವುದು.

ತಕರಾರಿನವರು-೧೯೭೧, ಸಾವಿರದ ನೆರಳು-೧೯೭೬, ಬೆಳ್ಳಿಮೀನು-೧೯೮೬, ಅಕ್ಕಕ್ಕು ಹಾಡುಗಳೇ-೧೯೯೩, ರಾಕ್ ಆಪ್ ಹಂಪಿ-೨೦೦೪, ಎಲ್ಲಿದೆ ಶಿವಾಪುರ? ೨೦೦೯ ಇವರ ಇನ್ನುಳಿದ ಕವನ ಸಂಕಲನಗಳಾಗಿದ್ದು ಇಲ್ಲಿ ನವ್ಯತೆಯ ಜಾಡು ಹಿಡಿದ ಕವನಗಳಿವೆ. ತಮ್ಮ ಕವನಗಳ ಮೂಲಕ ದೇಶಿಯ ಸೊಬಗನ್ನು ಬಿಂಬಿಸುವ, ಮತ್ತು ದೇಶಿ ನೆಲೆಗಳನ್ನು ಪ್ರಖರವಾಗಿ ಪ್ರಕಟಪಡಿಸುವ ಇಚ್ಛೆ ಇರುವುದನ್ನು ಅವರ ಹೇಳತೇನಿ ಕೇಳದಲ್ಲಿ ಕಾಣಬಹುದು.

ಹೀಗೆ ಇವರ ಕಾವ್ಯಗಳಲ್ಲಿ ದೇಶಿಯ ನೆಲೆಗಳನ್ನು, ಪ್ರೀತಿ, ಮೌಢ್ಯಗಳು, ಮುಂತಾದ ಅಂಶಗಳನ್ನು ಗುರ್ತಿಸಬಹುದಾಗಿದೆ.

'ಶಿವಾಪುರ' ಎಂಬುದು ಕಂಬಾರರ ಕಾವ್ಯದ ಮುಖ್ಯ ಬಿತ್ತಿಯಾಗಿದ್ದು ಈ ಜಗತ್ತಿನ ಆಗುಹೋಗುಗಳೆಲ್ಲ ಬಹುತೇಕ ಕವಿತೆಯ ಸಂಗತಿಗಳಾಗಿವೆ, ತುಂಬು ಹಸಿರಿನ ವರ್ಣನೆ ಕಾಣಿಸಿಕೊಂಡಿದೆ. ಹಾಗೇ ಶಿವಾಪುರ ಮುಕ್ತ ಕಾಮದ ಜಗತ್ತು. ಹೇಳ್ತೇನಿ ಕೇಳದ ಗೌಡತಿಯೊಬ್ಬಳನ್ನು ಬಿಟ್ಟರೆ ಅವರ ಅನೇಕ ಕವನಗಳಲ್ಲಿ ಸಂಯಮವನ್ನು ಮೀರಿದವರೇ ಆಗಿದ್ದಾರೆ.

ನವೋದಯ ಕವಿಗಳಿಗೆ 'ಗ್ರಾಮ' ಮುಗ್ಧತೆಯ ಪ್ರತೀಕವಾದರೆ, ದಲಿತ-ಬಂಡಾಯದ ಸಂದರ್ಭದಲ್ಲಿ ಶೋಷಣೆಯ ಕೇಂದ್ರವಾಗಿದೆ. ಆದರೆ " ಚಂದ್ರಶೇಖರ ಕಂಬಾರರ ಕಾವ್ಯದಲ್ಲಿ ಗ್ರಾಮ 'ಸಂಕ್ರಮಣದ' ಸ್ಥಿತಿಯಾಗಿದೆ"[೧೦] ಎಂದು ವಿಕ್ರಮ್ ವಿಸಾಜಿಯವರು ಗುರ್ತಿಸಿದ್ದಾರೆ.

೨.೨.೨. ನಾಟಕಗಳು

ಚಂದ್ರಶೇಖರ ಕಂಬಾರರು ಕವಿಯಾಗಿ ಗುರ್ತಿಸಿಕೊಂಡಂತೆ ನಾಟಕಕಾರರಾಗಿ ಗುರ್ತಿಸಿಕೊಂಡಿದ್ದಾರೆ. ದೇಸಿ ಸಂಸ್ಕೃತಿಯ ಮೇಲೆ ಬಹು ಪ್ರೀತಿ ಹೊಂದಿದ ಇವರು ಇಪ್ಪತ್ತೈದು ನಾಟಕಗಳನ್ನು ರಚಿಸಿ ಕನ್ನಡದ ಕೆಲವೇ ಬಹುಮುಖ್ಯ ನಾಟಕಕಾರರಲ್ಲಿ ತಮ್ಮನ್ನು ಗುರ್ತಿಸಿಕೊಂಡಿದ್ದಾರೆ. ಬೆಂಬತ್ತದ ಕಣ್ಣು, ನಾರ್ಸಿಸಸ್, ಋಷ್ಯಶೃಂಗ, ಜೋಕುಮಾರ ಸ್ವಾಮಿ, ಚಾಳೇಶ, ಸಂಗ್ಯಾಬಾಳ್ಯಾ ಅನಬೇಕೋ ನಾಡೊಳಗ, ಕಿಟ್ಟಿಯ ಕಥೆ, ಜೈಸಿದನಾಯ್ಕ, ಆಲಿಬಾಬಾ ಮತ್ತು ನಲವತ್ತು ಕತೆಗಳು, ಕಾಡಕುದರೆ, ನಾಯಿ ಕತೆ, ಖರೋಖರ, ಮತಾಂತರ, ಹರಕೆಯ ಕುರಿ, ಸಾಂಬಶಿವ ಪ್ರಹಸನ, ಸಿರಿ ಸಂಪಿಗೆ, ಹುಲಿಯ ನೆರಳು, ಬೆಪ್ಪು ತಕ್ಕಡಿ ಬೋಳೆ ಶಂಕರ, ಪುಷ್ಪರಾಣಿ, ತುಕ್ರನ ಕನಸು, ಮಹಾಮಾಯಿ, ನೆಲಸಂಪಿಗೆ, ಜಕ್ಕಣ, ಮತ್ತು ಶಿವರಾತ್ರಿ ಇವೆಲ್ಲವು ಅವರು ಬರೆದ ಒಟ್ಟು ನಾಟಕಗಳಾಗಿದ್ದು ಕೆಲವು ಮುಖ್ಯ ಕೃತಿಗಳನ್ನು ಈ ಕೆಳಕಂಡಂತೆ ಗುರ್ತಿಸಬಹುದು.

ಬೆಂಬತ್ತಿದ ಕಣ್ಣು (೧೯೫೬) ಕಂಬಾರರು ವಿದ್ಯಾರ್ಥಿ ಬದುಕಿನಲ್ಲಿ ಬರೆದ ಮೊದಲ ನಾಟಕವಾಗಿದೆ. ಹೆಣ್ಣು ನೀತಿಯ ಚೌಕಟ್ಟು ಮೀರಿ ಹೋದರೆ ಆಗುವ ಶಾಸ್ತಿ, ಕಾಮುಕ ಆಕರ್ಷಣೆಯ ಬಂಧ ಅದೆಷ್ಟು ಸಡಿಲ ಮತ್ತು ಗಂಡಿನ ಕ್ಷಮಾಗುಣ ಅತ್ಯಂತ ಭಾವುಕ ನೆಲೆಯಲ್ಲಿ ಸಾಂಪ್ರದಾಯಿಕ ಸಮಾಜಕ್ಕೆ ತಕ್ಕಂತೆ ಪ್ರೀತಿ ಫಲಿತಗೊಂಡ ಕುರಿತಾಗಿ ತಿಳಿಸುವ ಏಕಾಂತ ನಾಟಕ ಇದಾಗಿದೆ.

ನಾರ್ಸಿಸಸ್ (೧೯೬೮) ಇದೊಂದು ಅಸಂಗತ ನಾಟಕವಾಗಿದ್ದು ಗೀತಾ-ನಾಣಿಯ ಉತ್ಕಟ ಪ್ರೇಮ ಚಿತ್ರಣವಿದ್ದು ವೈಚಾರಿಕತೆಯಲ್ಲಿ ಬಹಳಷ್ಟು ಭಿನ್ನವಾದ ನಾಟಕ ಇದಾಗಿದೆ.

ಋಷ್ಯಶೃಂಗ (೧೯೭೦)ವು ಜನಪದ ತಂತ್ರ ಬಳಸಿಕೊಂಡ ನಾಟಕವಾಗಿದೆ. ಹೇಳತೇನ ಕೇಳದ ಮುಂದುವರಿದ ಭಾಗವೇ ಋಷ್ಯಶೃಂಗವಾಗಿದೆ. ಬಾಳಗೊಂಡ ಈ ನಾಟಕದ ನಾಯಕ ಈತ ಕಮಲಿಯನ್ನು ಕೂಡುವುದು ರಾಕ್ಷಸಗೌಡನ ಕೊಲ್ಲುವ ಚಿತ್ರಣವಿದೆ.

ಜೋಕುಮಾರಸ್ವಾಮಿ (೧೯೭೨) ಕಂಬಾರರ ನಾಟಕಗಳಲ್ಲಿ ಹೆಚ್ಚು ಪ್ರಸಿದ್ದಿ ಪಡೆದ ನಾಟಕವೆಂದರೆ ಜೋಕುಮಾರಸ್ವಾಮಿ ನಾಟಕ. ಇದೊಂದು ಬಯಲಾಟ ಮಾದರಿಯ ನಾಟಕ. ನಾಟಕದ ಆರಂಭ ಜೋಕುಮಾರಸ್ವಾಮಿಯ ಪೂಜೆಯಿಂದ ಆರಂಭವಾಗುತ್ತದೆ.

'ಫಲವತ್ತಿನ ಸಂಕೇತವಾದ ಜೋಕುಮಾರಸ್ವಾಮಿ ಕತೆಯೊಂದಿಗೆ ಉಳ್ಳವನಿಗೆ ಭೂಮಿ' ಎಂಬ ಸಮಾಜವಾದಿ ಘೋಷಣೆ ಮತ್ತು ಉಳ್ಳವನಿಗೆ-ಹೆಣ್ಣನ್ನು ಒಲಿಸಿ ಆಳುವ ಹಕ್ಕಿದೆ ಎಂಬ ಸಂದೇಶ ಈ ನಾಟಕದಲ್ಲಿ ಕಾಣುತ್ತೇವೆ.

ಸಾಂಗ್ಯಾಬಾಳ್ಯಾ ಅನಬೇಕೋ ನಾಡೊಳಗ (೧೯೭೫) ಈ ನಾಟಕವನ್ನು ಜನಪದರ 'ಸಂಗ್ಯಾಬಾಳ್ಯಾ'ವನ್ನು ಹವ್ಯಾಸಿ ರಂಗಭೂಮಿಗೆ ಅದರಲ್ಲೂ ನಗರದ ಜನರ ಅಭಿರುಚಿಗೆ ತಕ್ಕಂತೆ

ನಾಟಕವಾಗಿಸುವಲ್ಲಿ ಕಂಬಾರರು ಯಶಸ್ವಿಯಾಗಿದ್ದಾರೆ. ಉತ್ತರ ಕರ್ನಾಟಕದ ರಂಗಭೂಮಿಯನ್ನು ಆಳುತ್ತಿದ್ದ ಈ ಜನಪದ ಸಣ್ಣಾಟವನ್ನು ರಂಗಪ್ರತಿಯ ಮೂಲಕ ಇಡೀ ಕರ್ನಾಟಕ ರಂಗಭೂಮಿಗೆ ತಲುಪಲು ಕಂಬಾರರು ಕಾರಣರಾದರು.

ಜೈಸಿದನಾಯಕ (೧೯೭೫) ಜಮಿನ್ದಾರಿ ವ್ಯವಸ್ಥೆಯನ್ನು ಮಟ್ಟ ಹಾಕಿ ಹೊಸ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಯತ್ನಿಸುವ ಹಳ್ಳಿಯ ಕತೆ ಇದಾಗಿದೆ.

ಕಾಡುಕುದುರೆ (೧೯೭೬)ಯು ಉತ್ಕಟ ಕಾಮದ ಸಂಕೇತವಾಗಿರುವ ಇದು ಉಳಿಗಮಾನ್ಯ ವ್ಯವಸ್ಥೆಯನ್ನು ಪೋಷಿಸುವ ಕುಟುಂಬವೊಂದರ ನೈತಿಕ ಅಧಃಪತನದ ಚಿತ್ರಣದೊಂದಿಗೆ ಆಸ್ತಿ ಅಂತಸ್ತು ತಿರಸ್ಕರಿಸಿ ಜೀವ ವಿರೋಧಿ ನೀತಿ-ನಿಯಮ ಸಂಪ್ರದಾಯಗಳನ್ನು ಮುರಿದು ಅತ್ಯಂತ ಸಹಜ ಪ್ರೇಮದ ನೆಲೆಯಲ್ಲಿ ಪ್ರೇಮಿಗಳು ಒಂದಾಗುವುದು ಈ ನಾಟಕದ ಮುಖ್ಯ ಧೋರಣೆಯಾಗಿದೆ.

ಬೆಪ್ಪುತಕ್ಕಡಿ ಬೋಳೆಶಂಕರ (೧೯೯೧)ವು ಟಾಲ್‌ಸ್ಟಾಯ್ ಅವರ ಕತೆಯನ್ನಾಧರಿಸಿದ ನಾಟಕ, ಕಾಲ್ಪನಿಕತೆಯ ಎಲ್ಲ ರಂಜಕಗಳನ್ನು ಮೈಗೂಡಿಸಿಕೊಂಡು ಸಮಾಜವಾದಿ ಮತ್ತು ಶ್ರಮ ಸಂಸ್ಕೃತಿಯ ಮಹತ್ವವನ್ನು ಈ ನಾಟಕ ಹೇಳುತ್ತದೆ.

ಸಿರಿಸಂಪಿಗೆ (೧೯೯೧) ನಾಟಕವು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ನಾಟಕವಾಗಿದ್ದು ಜನಪದ ಕತೆಯೊಂದರ ಪ್ರೇರಣೆಯಿಂದ ರಚಿತವಾದ ಮತ್ತು ಯಕ್ಷಗಾನದ ಮೈಗಟ್ಟನ್ನು ಹೊಂದಿರುವ ನಾಟಕವಾಗಿವೆ. ಮನುಷ್ಯ ಜೀವನದ ರಹಸ್ಯತಮವಾದ ಸತ್ಯವನ್ನು ತೆರೆದು ತೋರಿಸುವಲ್ಲಿ ಈ ನಾಟಕ ಯಶಸ್ವಿಯಾಗಿದೆ.

ಶಿವರಾತ್ರಿ (೨೦೧೧) ನಾಟಕವು ಕಲ್ಯಾಣದ ಬಸವಣ್ಣನ ಮೇಲೆ ಬೆಳಕು ತೋರುವ ನಾಟಕವಾಗಿದೆ. ಇದು "ಬಸವಣ್ಣ ಬಿಜ್ಜಳರ ಸಂಘರ್ಷ ಪ್ರಕಾಶಿಸುವ ನಾಟಕವಾದರೂ ಇನ್ನೊಂದು ಸ್ತರದಲ್ಲಿ ಅಧಃಪತನಗೊಂಡಿರುವ ಸಮಕಾಲಿನ ಸಾಮಾಜಿಕ-ರಾಜಕೀಯ-ಧಾರ್ಮಿಕ ವಿಷಯಗಳನ್ನು ಹೊಂದಿದ್ದು ಸರ್ವಕಾಲಿನತೆ ಮತ್ತು ಸಮಾಕಾಲೀನತೆ ಎರಡನ್ನೂ ಏಕಕಾಲಕ್ಕೆ ಸೂಕ್ಷ್ಮವಾಗಿ ಶೋಧಿಸುತ್ತದೆ"[೧೧] ಎಂಬ ಡಾ. ಎ.ಆರ್. ನಾಗಭೂಷಣರ ಮಾತನ್ನು ಗ್ರಹಿಸಬೇಕಾದರೆ ಈ ನಾಟಕದ ಒಳಾಂಶಗಳನ್ನು ಓದಿ ಅರ್ಥೈಸಿಕೊಳ್ಳಬೇಕು.

ಕಂಬಾರರ ಒಟ್ಟು ನಾಟಕಗಳು ಸೃಜನಶೀಲ ಬರವಣಿಗೆಯ ನಾಟಕಗಳಗಿದ್ದು ಹೊಸ ಶಿವಾಪುರದ ಕಲ್ಪನೆಯನ್ನು ಕಟ್ಟಿಕೊಡುತ್ತವೆ.

೨.೨.೩ ಮಹಾಕಾವ್ಯ:

ಚಂದ್ರಶೇಖರ ಕಂಬಾರರು ೧೯೭೬ರಲ್ಲಿ ಚಕೋರಿ ಮಹಾಕಾವ್ಯ ರಚಿಸಿದರು. ಜನಪದ, ವಚನ ಪರಂಪರೆ ಮತ್ತು ಶಿಷ್ಟ ಮಹಾಕಾವ್ಯಗಳ ಗುಣಗಳನ್ನು ಅಳವಡಿಸಿಕೊಂಡು ರಚನೆಗೊಂಡ

ಮಹಾಕಾವ್ಯ ಈ ಚಕೋರಿಯಾಗಿದೆ. ಚಿನ್ನಮುತ್ತ ಮತ್ತು ಚಂದ್ರಮುತ್ತರ ಸುತ್ತ ಹೆಣೆದ ಕಾವ್ಯವಾಗಿದ್ದು ಜನಪದ ಗೀತೆಗಳ ಸೊಗಸು ಮತ್ತು ಶ್ರೇಷ್ಠತಮ ತ್ರಿಪದಿಗಳ ಅರ್ಥಗರ್ಭಿತ ಸರಳತೆ ಇವೆಲ್ಲವನ್ನೂ ಈ ಮಹಾಕಾವ್ಯ ಒಳಗೊಂಡಿವೆ. ಈ ಕಾವ್ಯ ಮುಗ್ಧತೆ ಮತ್ತು ಅನುಭವದ ದುರಂತಗಳನ್ನು ಹಲವು ನೆಲೆಗಳಲ್ಲಿ ಕಟಿಕೊಟ್ಟಿದೆ.

೨.೨.೪ ಜಾನಪದ-ಸಂಶೋಧನೆ-ಸಂಪಾದಿತ ಕೃತಿಗಳು

ಉತ್ತರ ಕರ್ನಾಟಕದ ರಂಗಭೂಮಿ (೧೯೬೫), ಸಾಂಗ್ಯಾಬಾಳ್ಯಾ (೧೯೬೬), ಬಣ್ಣಿಸಿ ಹಾಡವ್ವ ನನ ಬಳಗ (೧೯೬೮), ಬಯಲಾಟ (೧೯೭೩), ಮಾತಾಡು ಲಿಂಗವೇ (೧೯೭೩), ಕನ್ನಡ ನಾಟಕ ಸಂಪುಟ (೧೯೮೨), ಕನ್ನಡ ಜಾನಪದ ವಿಶ್ವಕೋಶ (೧೯೮೫), ನೆಲದ ಮರೆಯ ನಿಧಾನ (೧೯೯೩), ದೇಶಿ ಚಿಂತನೆ (೨೦೦೪) ಮುಂತಾದವು ಜಾನಪದ-ಸಂಶೋಧನೆ ಮತ್ತು ಸಂಪಾದನಾ ಕ್ಷೇತ್ರದಲ್ಲಿ ಕಂಬಾರರು ಕೃತಿಗಳನ್ನು ರಚಿಸಿದ್ದಾರೆ .

೨.೨.೫. ಕಾದಂಬರಿಗಳು

ಕಾದಂಬರಿ ಕ್ಷೇತ್ರಕ್ಕೂ ಕಂಬಾರರ ಕೊಡುಗೆ ಅಪಾರ. ಹೊಸಬಗೆಯ ವೈಚಾರಿಕತೆಯ ಮೂಲಕ ಆಧುನಿಕ ಪ್ರಜ್ಞೆ ಇರುವ ತಮ್ಮ ಬರವಣಿಗೆಯಲ್ಲಿ ಗ್ರಾಮೀಣ ಬದುಕಿನ ಸತ್ಯ-ಮಿಥ್ಯ ತಲ್ಲಣಗಳು ಅವುಗಳ ಜತೆಗೆ ಜಾನಪದ ತಂತ್ರದ ಪ್ರಯೋಗ ಬಳಸಿ ಜನಪ್ರಿಯ ಕಾದಂಬರಿಗಳನ್ನು ಬರೆದಿದ್ದಾರೆ. ಅಣ್ಣ ತಂಗಿ (೧೯೫೬)ಯು ವಿದ್ಯಾರ್ಥಿ ಜೀವನದಲ್ಲಿ ಹದಿಹರೆಯದ ಹುಮ್ಮಸ್ಸಿನಲ್ಲಿ ಬರೆದ ಕಾದಂಬರಿಯಾಗಿದ್ದು ಕೌಟುಂಬಿಕ ಚಿತ್ರಣ ಇಲ್ಲಿದೆ.

ಕರಿಮಾಯಿ ೧೯೭೫ರಲ್ಲಿ ಪ್ರಕಟಗೊಂಡ ಕಾದಂಬರಿಯಾಗಿದ್ದು ಗ್ರಾಮೀಣ ಭಾರತ ನಗರೀಕರಣದ ಮಾಯೆಗೆ ಒಳಗಾಗುವ ಆರಂಭದ ಸಂದರ್ಭ ಈ ಕಾದಂಬರಿಯಲ್ಲಿ ಕಾಣುತ್ತೇವೆ. ಶಿವಾಪುರವೆಂಬ ಹಳ್ಳಿಗೆ ಆಧುನಿಕತೆಯೊಂದಿಗೆ, ಹೊಸ ಮೌಲ್ಯಗಳು ಪ್ರವೇಶಿಸಿ ಹಳ್ಳಿಯ ನಂಬಿಕೆ ಸಂಪ್ರದಾಯಗಳ ಬೇರನ್ನು ಅಲುಗಾಡಿಸಿ ಜನ ಸಮುದಾಯದಲ್ಲಿ ತಲ್ಲಣ ಸಂಘರ್ಷ ಉಂಟುಮಾಡಿದ ಚಿತ್ರಣ ಇಲ್ಲಿದೆ.

ಸಿಂಗಾರೆವ್ವ ಮತ್ತು ಅರಮನೆ (೧೯೮೨)ಯು ಊಳಿಗಮಾನ್ಯ ವ್ಯವಸ್ಥೆಯೊಳಗಿನ ಅಮಾನುಷತೆ, ಸ್ವಾರ್ಥ, ಕ್ರೌರ್ಯ, ಅಹಂಕಾರ, ಕುಟಿಲತೆ, ಕುತಂತ್ರ, ಸಂಘರ್ಷ ಸಮಸ್ಯೆಗಳೇ ಆ ವ್ಯವಸ್ಥೆಯನ್ನ ಬುಡಮೇಲು ಮಾಡಿ ನಾಶಗೊಳಿಸುವ ಚಿತ್ರಣ ಈ ಕಾದಂಬರಿಯಲ್ಲಿದೆ.

ಜಿ.ಕೆ. ಮಾಸ್ತರ ಪ್ರಣಯ ಪ್ರಸಂಗ (೧೯೮೬) ಕಾದಂಬರಿಯ ಕಥಾ ನಾಯಕ ಕರಿಬಸಯ್ಯ ಅಂದರೆ ಜಿ.ಕೆ. ಮಾಸ್ತರರು. ದೊಡ್ಡ ಹೆಸರು ಮಾಡಿದ್ದ ಮೇರು ವ್ಯಕ್ತಿತ್ವದ ಇವರು ಪ್ರೇಮಕ್ಕಾಗಿ

ಮನಸ್ಸಿನ ಹತೋಟಿ ಕಳೆದುಕೊಳ್ಳುವ ಪರಿ ಮತ್ತು ಮಾಸ್ತರರ ಪ್ರೀತಿ, ಅಂತಃಕರಣ, ಕ್ಷಮೆ, ಉದಾರತೆಗಳು ಮತ್ತೆ ತೇಲಿ ಬರುವುದನ್ನು ಈ ಕಾದಂಬರಿ ತಿಳಿಸಿಕೊಡುತ್ತದೆ.

ಶಿಖರ ಸೂರ್ಯ (೨೦೦೭)ವು ಎರಡು ಭಿನ್ನ ಮೌಲ್ಯಗಳ ಮುಖಾಮುಖಿಯನ್ನು ವಸ್ತುವಾಗುಳ್ಳ ಕಾದಂಬರಿಯಾಗಿದ್ದು ಜನೋಪಕಾರ ಮಾಡುವ ವ್ಯಕ್ತಿಯ ಮುಂದೆ ಸ್ವಾರ್ಥ ಅಧಿಕಾರದ ಆಸೆಯಿಂದ ವಿದ್ಯೆ ಬಳಸಿಕೊಳ್ಳುವ ವ್ಯಕ್ತಿ ನಿಕೃಷ್ಟವಾಗುವ ಪರಿ ಇಲ್ಲಿದೆ. ಮನುಷ್ಯನಿಗೆ ವಿದ್ಯೆಗಿಂತ ಮಾನವೀಯತೆ ಮುಖ್ಯ ಎಂಬ ಅರಿವು ಈ ಕಾದಂಬರಿಯಲ್ಲಿದೆ.

ಶಿವನಡಂಗುರವು ಇತ್ತೀಚೆಗೆ ಅಂದರೆ ೨೦೧೫ ರಲ್ಲಿ ಪ್ರಕಟಗೊಂಡ ಅವರ ಮಹತ್ವದ ಕೃತಿಗಳಲ್ಲಿ ಒಂದಾಗಿದೆ. ಚೆಂಬಸ ಈ ಕಾದಂಬರಿಯ ನಾಯಕನಾಗಿದ್ದು ಕಂಬಾರರು ಈ ಚೆಂಬಸನ ಮೂಲಕ ಹೊಸ ಶಿವಾಪುರವನ್ನ ಹೇಗೆ ಕಟ್ಟಬಹುದು? ಎಂದು ಸೂಚಿಸ ಹೊರಾಟ ಕಾದಂಬರಿ ಇದಾಗಿದೆ.

ಒಟ್ಟಾರೆ ಇವರ ಬರಹಗಳು ನಗರ ಸಂಪರ್ಕದಿಂದ ಹಳ್ಳಿಗೆ ಹರಿದು ಬರುವ ವಿದೇಶಿ ಸರಕುಗಳಾದ ವಸಾಹತು ನೀತಿಗಳಾದ ಅಧಿಕಾರ, ಪ್ರಭುತ್ವ ಮತ್ತು ಆಧುನಿಕತೆ ಮುಂತಾದ ಸಂಗತಿಗಳು ವಸಾಹತುಶಾಹಿಯ ಕೆಟ್ಟ ಕರಿನೆರಳುಗಳಾಗಿಯೇ ಇದ್ದು ಇಂಥಹ ಕ್ರೌರ್ಯ ಪ್ರವೇಶದಿಂದ ತಲ್ಲಣಗೊಳ್ಳುವ ಸಾಂಸ್ಕೃತಿಕ ಜಗತ್ತಿನ ಮೂಲಕ ಹಳತು ಹೊಸತರ ಮುಖಾಮುಖಿಯೊಂದಿಗೆ ಮತ್ತೊಂದನ್ನ ಕಟ್ಟ ಹೊರಟಿರುವ ಇವರ ಬರವಣಿಗೆಗಳು ಇವೆ. "ಹೊಸ ಶಿವಾಪುರ" ಕುರಿತಾಗಿ ಅವರ ಈ ಕಾದಂಬರಿ ಮತ್ತು ಇನ್ನುಳಿದ ಅವರ ಬರಹ ಚಿಂತನದಲ್ಲಿ ಕಾಣಬಹುದು.

ಹಲವು ಚಿಂತನೆಯಿಂದ ಕೂಡಿದ ಚೆಂದ್ರಶೇಖರ ಕಂಬಾರರ ಶಿವನ ಡಂಗುರ ಕಾದಂಬರಿಯ ಒಂದು ವಿಶ್ಲೇಷನೆಯನ್ನು ವಿವಿಧ ಅಧ್ಯಾಯಗಳ ಮೂಲಕ ಈ ಮುಂದಿನಂತೆ ವಿಶ್ಲೇಷಣೆ ಮಾಡಬಹುದಾಗಿದೆ.

* * * *

ಕೊನೆ ಟಿಪ್ಪಣಿಗಳು

೧. ನಾಗವೇಣಿ ಎಚ್. (ಡಾ): ರಂಗ ಸಂಪನ್ನರು, ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಪ್ರಕಟಣೆ, ೨೦೦೪ ಪುಟಸಂಖ್ಯೆ-೭

೨. ಅದೇ ಪುಟ-೭

೩. ಅದೇ ಪುಟ-೮

೪. ಅದೇ ಪುಟ-೯

೫. ಅದೇ ಪುಟ-೧೦

೬. ಅದೇ ಪುಟ-೧೦

೭. ತಿಪ್ಪೇಸ್ವಾಮಿ ಎನ್(ಸಂ) : ನೆಲಸಂಪಿಗೆ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೪ ಪುಟ-೧೦೦, ೧೮೩

೮.ನಾಗವೇಣಿ ಎಚ್(ಡಾ) :ರಂಗಸಂಪನ್ನರು ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ೨೦೦೪ ಪುಟ-೩೦

೯. ಅದೇ ಪುಟ-೨೭

೧೦.ವಿಕ್ರಂ ವಿಸಾಜಿ : ನಾದಗಳು ನುಡಿಯಾಗಲೆ ಸಂಶೋಧನಾ ಪ್ರಬಂಧ, ಪಲ್ಲವ ಪ್ರಕಾಶ ಚೆನ್ನಪಟ್ಟಣ ೨೦೦೮, ಪುಟ-೧೨೬

೧೧. ನಾಗಭೂಷಣ.ಎ.ಆರ್. (ಡಾ) : ರಂಗಾನುಭವದ ಶಿವರಾತ್ರಿ ಸಾಪ್ತಾಹಿಕ ಲವಲ, ವಿಜಯ ಕರ್ನಾಟಕ ದಿನಪತ್ರಿಕೆ ದಿನಾಂಕ ೦೧-ಏಪ್ರಿಲ್ ೨೦೧೨ ಪುಟ-೫

ಅಧ್ಯಾಯ– ೩

ಶಿವನ ಡಂಗುರ ಕಾದಂಬರಿಯ ಸಂಕ್ಷಿಪ್ತ ಸಾರಾಂಶ

ಅಧ್ಯಾಯ- ೩

ಶಿವನ ಡಂಗುರ ಕಾದಂಬರಿಯ ಸಂಕ್ಷಿಪ್ತ ಸಾರಾಂಶ

ಚಂದ್ರಶೇಖರ ಕಂಬಾರರು ರಚಿಸಿದ ಆರು ಕಾದಂಬರಿಗಳಲ್ಲಿ 'ಶಿವನ ಡಂಗುರ' ಕಾದಂಬರಿಯೂ ಒಂದಾಗಿದೆ. ಇದು ಬೆಂಗಳೂರಿನ ಅಂಕಿತ ಪ್ರಕಾಶನ ಪ್ರಕಟಣೆ ಮೂಲಕ " ೩೦ನೇ ಆಗಸ್ಟ್ ೨೦೧೫ರ ಭಾನುವಾರದಂದು ಬೆಂಗಳೂರಿನಲ್ಲಿ ಬಿಡುಗಡೆಗೊಂಡಿತು"[೧] ಈ ಕಾದಂಬರಿಯು ಮೂರು ಭಾಗ ಮುವತ್ತೇಳು ಅಧ್ಯಾಯಗಳನ್ನು ಒಳಗೊಂಡಿದೆ. ಹಳ್ಳಿ ಹಳ್ಳಿಗಳಲ್ಲೂ ಜಾಗತಿಕರಣ ಹಾಗೂ ಹೊಸ-ವಸಾಹತು ಶಾಹಿ ಸಾಮ್ರಾಜ್ಯ ಹೇಗೆ ಹರಡುತ್ತಾ ಹೊರಟಿದೆ ಅನ್ನುವ ಕಹಿ ಸತ್ಯವನ್ನು ಎತ್ತಿ ತೋರುವ ಕಾದಂಬರಿ ಇದಾಗಿದ್ದು ಸಮಕಾಲಿನ ಬದುಕನ್ನು ಮುಖಾಮುಖಿಯಾಗಿಸಿದೆ. ವಸಾಹತುವಿನಿಂದ ನಲುಗಿ ಹೋದ 'ಶಿವಾಪುರ'ವನ್ನು ಮತ್ತೆ ಹೊಸದಾಗಿ ಕಟ್ಟಲು ಅನುಸರಿಸಬೇಕಾದ ಮಾದರಿಯನ್ನು ಸಮುದಾಯದ ಬದುಕಿನಲ್ಲೇ ಕಲೆತು, ಎಲ್ಲರ ನೂವು ನಲಿವನ್ನು ಹಂಚಿಕೊಂಡು ಕೆಳಗೆ ಬಿದ್ದವರ ಕೈಹಿಡಿದು ಒಟ್ಟಾಗಿ ಮುನ್ನಡೆಯುವ ಚಿಂತನೆಯನ್ನು ಈ ಕಾದಂಬರಿ ಒಳಗೊಂಡಿದ್ದು ಇದರ ಸಂಕ್ಷಿಪ್ತ ಸಾರಾಂಶವನ್ನು ಈ ಕೆಳಕಂಡಂತೆ ಗುರ್ತಿಸಬಹುದು.

ಕಾದಂಬರಿಯು ಶಿವಾಪುರದ ಪುರಾಣ, ಚರಿತ್ರೆ ಮೂಲಕ ಪ್ರಾರಂಭವಾಗುತ್ತದೆ. ಪುರಾಣದ ಮೂಲ ಆಲದ ಮರ. ಎರಡು ಸಾವಿರ ವರ್ಷದ ಇತಿಹಾಸ ಹೊಂದಿದ್ದು. ಶಿವನಿಂದ ದೇವಲೋಕ, ಭೂಲೋಕ ನಿರ್ಮಾಣವಾದವು. ದೇವತೆಗಳ ಮಕ್ಕಳು ಚಿಕ್ಕ ತಾರೆಗಳನ್ನು ಚಂಡು ಮಾಡಿಕೊಂಡು ಆಟವಾಡುತ್ತಿರುವಾಗ ಅವು ಕೈತಪ್ಪಿ ಭೂಲೋಕದಲ್ಲಿ ಬಿದ್ದವು. ಆಗ ಭೂಲೋಕ ಹೊಳೆಯಲು ಪ್ರಾರಂಭಿಸಿದ್ದ ಕಂಡು ಮಕ್ಕಳು ಅಲ್ಲಿಗೆ ಹೋಗಲು ನಿರ್ಧರಿಸಿ ಸುರ್ಯೋದಯಕ್ಕೆ ಮುನ್ನವೇ ಮರಳಿ ಬರುತ್ತೇವೆಂದು ಹೋಗಿ ಅಲ್ಲೇ ನಿಶ್ಚಲರಾದರು. ಹಾಗೇ ಇವರ ಕರೆಯಬಂದ ಸೇವಕಿಯೂ ಅಲ್ಲೇ ಬೇರುಬಿಟ್ಟಳು. ಆಗ ದೇವತೆಗಳು ಕಣ್ಣೀರು ಸುರಿಸಿದರು. ಆ ಕಣ್ಣೀರು ಮಳೇಯಾಗಿ ನಿಟ್ಟುಸಿರು ಗಾಳಿಯಾಗಿ ಇದರಿಂದ ಜೀವ ಸಂಚಾರವಾಯಿತು. ಮಕ್ಕಳ ಕರೆಯ ಬಂದ ಹಿರಿಯ ಸೇವಕೆಯೇ ಈ ಆಲದ ಮರವಾದಳೆಂದು ತುಂಗವ್ವ ತನ್ನ ಜೋಗತಿ ಪದ್ಯದಲ್ಲಿ ಕತೆಹೇಳಿ ಮುಗಿಸುವಳು. ನಂತರ ಶಿವದೇವರು ವಿಶ್ವಕರ್ಮರನ್ನು ಸೃಷಿಸಿದರು ಈ ವಿಶ್ವಕರ್ಮರಿಂದ ಭೂಲೋಕದಲ್ಲಿ ಜೀವ ಸಂಚಾರವಾಯಿತೆಂದು ಪುರಾಣ ಚಿತ್ರಣ ಕೊಡುವರು.

ಇಂತಹ ಶಿವಾಪುರ ಬ್ರಿಟಿಷರು ಬಂದ ಮೇಲೆ ಇದರ ಇತಿಹಾಸ ನಿರ್ವಾಣೆಪ್ಪನ ಗುಡ್ಡದಿಂದ ಪ್ರಾರಂಭಿಸಲಾಯಿತು. ಗುಡ್ಡದ ಪಕ್ಕ ಉತ್ತರಕ್ಕೆ ಎರಡು ಮೈಲು ಅಂತರದಲ್ಲಿ ಮೂಡಣದ ಕಡೆ ಹರಿಯುವ ಘಟಪ್ರಭಾ ನದಿ ಇದೆ. ಈ ನದಿಯ ದಕ್ಷಿಣ ದಂಡೆಯ ಮೇಲೆ ನೀರಲ್ಲಿ ಕಾಳಿಬಿಟ್ಟಂತೆ ಇರುವುದೇ ಶಿವಾಪುರವಾಗಿದೆ. ಪಕ್ಕದಲ್ಲಿ 'ಮಲ್ಲಿಮಡು' ಪ್ರದೇಶ ಅಂದರೆ ಸಣ್ಣ ತೊರೆ ಹರಿದು ಕೆಳಗೆ ಸುರಿವಲ್ಲಿ ಒಂದು ಸಣ್ಣ ಕುಳಿ ಇದೆ. ಇದೇ ಮಲ್ಲಿಮಡು. ತೊರೆ ಸುತ್ತುವರಿದಿದ್ದರಿಂದ ನಡುಗಡ್ಡೆ ಪ್ರದೇಶ ಅಲ್ಲಿತ್ತು ಇಲ್ಲೇ ನಿರ್ವಾಣೆಪ್ಪನ ಗುಡಿ ಇತ್ತು. ಹೀಗೆ ಊರ ಸುತ್ತ ದೈತ್ಯಾಕಾರದ ಮರಗಿಡಗಳು ನೇರಳೆ ಹಣ್ಣುಗಳು ಇದ್ದವು. ನಡುಗಡ್ಡೆ ಪ್ರದೇಶದಲ್ಲಿರುವ ಶಿವಾಪುರವು ಕುಲವಂತರ

ಕೇರಿ ಮತ್ತು ದಲಿತರ ಕೇರಿ ಎಂದು ಇಬ್ಭಾಗವಾಗಿತ್ತು. ರೈತರ ಓಣಿ, ಗೌಡರ ಓಣಿ, ಕುಲಕರ್ಣಿಯ ಮನೆ, ಆಯಗಾರ ಓಣಿ, ಬ್ಯಾಂಕು, ಪೋಸ್ಟಾಫೀಸು ಕನ್ನಡ ಶಾಲೆ ಇವೆಲ್ಲ ಒಂದು ಕಡೆ ಇದ್ದರೆ ಇನ್ನೊಂದೆಡೆ ಕೊಳಚೆ ಪ್ರದೇಶದಲ್ಲಿ ದರಿದ್ರರು, ದಿಕ್ಕಿಲ್ಲದವರು ಎಂದು ಸಮಾಜದಿಂದ ಕರೆಸಿಕೊಳ್ಳುವ ದಲಿತರ ಕೇರಿ ಇತ್ತು. ಹೀಗೆ ಶಿವಾಪುರದ ಮೂಲಕ ಸ್ವಚ್ಛಂದ ಗಾಳಿ ಮಳೆಯಿಂದ ಕೂಡಿದ ಶಿವಾಪುರ ಚಿತ್ರಣದ ಮೂಲಕ ಕಾದಂಬರಿ ಪ್ರಾರಂಭವಾಗುತ್ತದೆ. ಇಂತಹ ಶಿವಾಪುರದಲ್ಲಿ ಆಧುನಿಕತೆ ಆವರಿಸಿ ತನ್ನ ಹಿಡಿತ ಕಳೆದುಕೊಂಡು ಹೋದ ಬಗೆಯನ್ನು ಈ ಮುಂದಿನಂತೆ ಗುರ್ತಿಸಬಹುದು.

ಶಿವಾಪುರದಲ್ಲಿ ಬರಮೇಗೌಡನದೇ ಒಡೆತನವಾಗಿತ್ತು. ಈತ ದ್ಯಾಮೇಗೌಡನೆಂಬ ಶಿವಾಪುರದ ಮೂಲ ಇತಿಹಾಸ ಪುರುಷನೆನೆಸಿದ್ದ ಗೌಡಕುಲದ ಆರನೇ ತಲೆಯ ಶಿವಗೊಂಡನ ಮಗನೇ ಈ ಬರಮೇಗೌಡ ಈತನ ತಮ್ಮನೇ ಈಸುರಗೌಡನಾಗಿದ್ದ. ಬರಮೇಗೌಡ ಕುಳ್ಳದೇಹಿ ಬೋಳು ತಲೆಯ ಓರೆಗಣ್ಣು ಹೊಂದಿದವನಾಗಿದ್ದ. ಅತ್ಯಂತ ಠಾಕುಠೀಕಾಗಿದ್ದು ಮತ್ತೆ ಮತ್ತೆ ಮೀಸೆ ತಿರುವುತ್ತಿದ್ದ ಧೋತ್ರ, ಬಣ್ಣದ ಜುಬ್ಬ ತೊಡುವ ವ್ಯಕ್ತಿಯೇ ಈ ಬರಮೇಗೌಡನಾಗಿದ್ದ.

ಬರಮೇಗೌಡ ವ್ಯಸನಿ, ಕಾಮುಕ, ಮತ್ತು ದುರಾಡಳಿತ ನಡೆಸುವ ಕ್ರೂರಿಯಾಗಿದ್ದ. ಕುಡಚಿಯ ಕೊಟ್ರೇಶನೆಂಬ ವೈದ್ಯನ ಮಗಳು ಪಾರ್ವತಿಯನ್ನು ಮದುವೆಯಾಗಿ ಬಾಗಿರ್ತಿ ಎನ್ನುವ ಮಗುವಿಗೆ ಜನ್ಮ ನೀಡಿದ್ದರೂ ತನ್ನ ತೋಟದ ಮನೆಯನ್ನು 'ವಿಲಾಸ್ ಖಾನಾ' ಮಾಡಿಕೊಂಡು ಅಲ್ಲಿ ತನಗೆ ಬೇಕಾದ ಹೆಣ್ಣನ್ನು ಕರೆಸಿಕೊಂಡು ಭೋಗಸುಖ ಅನುಭವಿಸುತ್ತಿದ್ದ. ಹೀಗಿರುವಾಗ ಒಮ್ಮೆ ಸವದತ್ತಿ ಎಲ್ಲಮ್ಮನ ಜಾತ್ರೆಗೆ ಹೋದಾಗ ಅಲ್ಲಿ ಕರಿ ವರ್ಣದ ದೇವದಾಸಿ ತುಂಗಿಯ ಕಂಡು ಮೋಹಿಸಿ ತನ್ನವಳನ್ನಾಗಿಸಿಕೊಂಡ. ಕೊನೆಗೆ ಆಕೆಯನ್ನು ಮದುವೆಯಾಗದೇ ಆಕೆಯನ್ನು ಕೈಬಿಡದೇ ಆಕೆಗೆ ಹೊರಕೇರಿಯಲ್ಲಿ ಒಂದು ಮನೆ ಮತ್ತು ಐದೆಕರೆ ಜಮೀನು ಕೊಟ್ಟಿದ್ದ. ಭೋಗಿಸಲು ಯಾವುದೇ ಜಾತಿಯ ಹೆಣ್ಣಾಗಬಹುದು ಆದರೆ ಸಂಸಾರ ಮಾಡಲು ತನ್ನ ಕುಲದವಳೇ ಆಗಬೇಕೆಂಬ ಈತನ ದುರಾಲೋಚನೆ ಸಮಾಜದಲ್ಲಿ ಜಾತಿ ವ್ಯವಸ್ಥೆಯ ಕೆಟ್ಟ ಸ್ಥಿತಿಯನ್ನು ಬರಮೇಗೌಡನ ಪಾತ್ರ ತಿಳಿಸಿಕೊಡುತ್ತದೆ.

ಬರಮೇಗೌಡನ ತಮ್ಮ ಈಸುರಗೌಡ ಸ್ವಾತಂತ್ರ್ಯದ ಗಾಂಧೀ ಚಳುವಳಿಯಲ್ಲಿ ಭಾಗವಹಿಸಿ ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಗಿ ಸತ್ತು ಹೋದ, ಈಸುರಗೌಡ ಸುಲದಾಳದ ರಾಜಪ್ಪಗೌಡನ ತಂಗಿ "ಶಿವಕ್ಕ"ಳನ್ನು ಮದುವೆಯಗಿದ್ದ. ಶಿವಕ್ಕನ ಊರು ಮತ್ತು ಬರಮೇಗೌಡ ಪ್ರೀತಿಸಿದ ತುಂಗಿಯ ಊರು ಒಂದೇ ಆಗಿತ್ತು. ಶಿವಕ್ಕಳಿಗೆ 'ಚೆಂಬಸವ' ಮತ್ತು ತುಂಗಿಗೆ ಲಕ್ಷ್ಮಣ (ಲಸಮ) ನೆಂಬ ಮಕ್ಕಳು ಒಂದೇ ವೇಳೆಯಲ್ಲಿ ಹುಟ್ಟಿದರು. ಶಿವಕ್ಕ ಹೆರಿಗೆ ವೇಳೆ ಸತ್ತಿದ್ದರಿಂದ ಚೆಂಬಸ ತುಂಗಿಯ ಎದೆ ಹಾಲು ಕುಡಿದು ಬೆಳೆದು ದೊಡ್ಡವನಾಗಿದ್ದ. ಆತ ಹುಟ್ಟಿದ್ದು ಗೌಡ ಕುಲದ ಶಿವಕ್ಕಳಲ್ಲಾದರೂ ಬೆಳೆದಿದ್ದು ದಲಿತ ತುಂಗಿಯಲ್ಲಿ.

ತುಂಗಿಯು ತನ್ನ ಅಣ್ಣ ನಾಗಪ್ಪ ಮತ್ತವನ ಮಡದಿ ಯಮನವ್ವನನ್ನು ಕರೆತಂದು ತನ್ನ ಐದೆಕೆರೆ ಭೂಮಿಯ ಮೇಲ್ವಿವಿಚಾರಣೆ ವಹಿಸಿಕೊಟ್ಟಿದ್ದಳು. ಈ ನಾಗಪ್ಪ-ಯಮಳವ್ವರಿಗೆ "ಶಾರವ್ವ" ಎಂಬ ಮಗಳಿದ್ದಳು. ಮುಂದೆ ದಲಿತಳಾದ ಶಾರವ್ವ ಮತ್ತು ಗೌಡ ಕುಲದ ಚೆಂಬಸರಲ್ಲಿ ಪ್ರೀತಿ ಅಂಕುರಿಸಿ ಮದುವೆ ಮಟ್ಟ ತಲುಪಿತು. ಬರಮೇಗೌಡನಲ್ಲಿದ್ದ ಜಾತಿ ವಿಷ ಬೀಜ ಆತನ ತಮ್ಮನ ಮಗನಾದ ಚೆಂಬಸನಲ್ಲಿ ಎಳ್ಳಷ್ಟು ಇರಲಿಲ್ಲ. ಅಂತೆಯೇ ಆತ ತಾನು ಪ್ರೀತಿಸಿದ ಶಾರಿಯನ್ನು ಮದುವೆಯಾಗಲು ನಿರ್ಧರಿಸಿದ್ದ. ಇತ್ತ ಪಾರ್ವತಿಗೆ ಹುಟ್ಟಿದ್ದ ಮಗಳು ಬಾಗಿರ್ತಿ ತನ್ನ ತಾಯಿಯ ಪ್ರೀತಿಯಲ್ಲಿಯೇ ಬೆಳೆದಳು. ಜೊತೆಗೆ ಚೆಂಬಸನೆಂದರೆ ಅತ್ಯಂತ ಪ್ರೀತಿ ಹೊಂದಿದ್ದಳು ಕಾರಣ ತನ್ನ ಅಣ್ಣನೆಂದು.

ಚೆಂಬಸ ಬೆಳೆದದ್ದು ಹೆಚ್ಚಾಗಿ ದಲಿತ ಕೇರಿಯ ತುಂಗಿಯ ಮನೆಯಲ್ಲಿ. ಆತನಿಗೆ ದಲಿತರು, ಕುಲವಂತರೆಂಬ ಬೇಧ ತಿಳಿದದ್ದು ಶಾಲೆಯ ಕರಿಯಲು ಹೋದಾಗ, ಆದರೂ ಜಾತಿಬೇಧ ಮಾಡದೇ ಬೆಳೆದುನಿಂತನು. ತನಗೆ ಅತ್ಯಂತ ಪರಮ ವೈರಿಯಾಗಿ ರಾಡಿರಮೇಶ ಇದ್ದ. ಆಗಾಗ ಇವನ ಮೇಲೆ ಜಗಳವಾಡುತ್ತಿದ್ದ. ಕಾರಣ "ರಮೇಶ ಶಾಲೆಯಲ್ಲಿ ಥೇ ಥೇ ಹೊರಕೇರ್ಯಾಗ ಹುಟ್ಟಿದವನ ಜೋಡಿ ನಾ ಹೆಂಗ ಕುಂದರಬೇಕ್ರಿ?" ಎಂದು ಹೇಳಿ ಚೆಂಬಸನ ಕೆಂಗಣ್ಣಿಗೆ ಗುರಿಯಾಗಿದ್ದ. ಆಂದೇ ತುಂಗವ್ವನಿರೋ ಸ್ಥಳ ಹೊರಕೇರಿಯೆಂದು ತಿಳಿಯಿತು ಅಲ್ಲಿದ್ದವರೆಲ್ಲ ಅಸ್ಪೃಶ್ಯರೆಂದು ಊರಿನ ಜನರ ಜೊತೆ ಬೆರೆಯುವ ಹಕ್ಕು ಅವರಿಗಿಲ್ಲ ಎಂದು ತಿಳಿಯಿತು. ಚೆಂಬಸವ ಈ ಅಸಮಾನತೆ ವಿರುದ್ಧ ಧ್ವನಿ ಎತ್ತಿ ನಿಲ್ಲಲು ಮುಂದಾದ ಈತನಿಗೆ ಬೆನ್ನೆಲುಬಾಗಿ ನಿಂತವ ನಮಶ್ಶಿವಾಯ ಸ್ವಾಮಿ ಎಂಬ ಸಾಧು ಪುರುಷ.

ಹೊರಕೇರಿ ಜನರಿಗೆ ತಾವು ದಲಿತರೆಂದು ಗೊತ್ತಿಲ್ಲವೆಂದು ಚೆಂಬಸ ತಿಳಿದಿದ್ದ. ಬೆಳೆದಂತೆ ಆತಗೆ ಅರಿವಾಯಿತು. "ಈ ಎಲ್ಲ ವಿಷಯಗಳು ಕರಿಮನಸ್ಸಿಗೆ ಗೊತ್ತಿದ್ದರೂ ಗೊತ್ತಿಲ್ಲದಂತೆ ನಟಿಸುತ್ತಿದ್ದಾರೆಂದು ಗೊತ್ತಾಯಿತು"

ಚೆಂಬಸ ತನ್ನ ತಮ್ಮ ಲಸಮನ ಜೊತೆ ಕಾಡಿಗೆ ಹೋಗಿ ಬರುತ್ತಿದ್ದ. ಅಲ್ಲಿ ನೇರಳೆ ಹಣ್ಣು ಇರುತ್ತಿದ್ದವು ಆಗಾಗ ತಿಂದು ಬರುತ್ತಿದ್ದ ಹಾಗೇ ತನ್ನ ತಂಗಿ ಬಾಗಿರ್ತಿಗೆ ಮತ್ತು ಪ್ರೀತಿಸಿದ ಶಾರಿಗೆ ನೇರಳೆ ಹಣ್ಣು ತಂದು ಕೊಡುತ್ತಿದ್ದ.

ಚಳಿಮಳೆ ಪ್ರದೇಶದಲ್ಲಿ ವಾಸವಾಗಿದ್ದ ನಮಶಿವಾಯ ಸ್ವಾಮಿ. ಊರಿನ ಎಲ್ಲ ಆಗು ಹೋಗುಗಳನ್ನು ನೋಡುತ್ತ ಇಲ್ಲೇ ಕಾಲಕಳೆಯುತ್ತಿದ್ದ. ಪ್ರತಿದಿನ ಶೂನ್ಯ ಸಂಪಾದನೆ ಓದುತ್ತಿದ್ದ ಭಿಕ್ಷೆ ಬೇಡಿ ಹೊಟ್ಟೆ ತುಂಬಿಕೊಳ್ಳುತ್ತಿದ್ದ. ಉರಲ್ಲಿ ರಾತ್ರೋ ರಾತ್ರಿ ಕೊಲೆಗಳು ಹೆಚ್ಚಾಗಿ ನಡೆಯುತ್ತಿದ್ದವು. ಇವುಗಳಿಗೆ ಸಂಸ್ಕಾರ ಮಾಡಿಸಲು ಈ ನಮಶ್ಶಿವಾಯನೆ ಬೇಕಾಗಿತ್ತು. ಊರಿಗೆ ಗುರುವಿನಂತೆ ಭಾಸವಾಗಿದ್ದ ಈತ ಊರಲ್ಲಿ ಯಾರನ್ನೂ ನಂಬಿರಲಿಲ್ಲ, ನಂಬಿದ್ದು ಗಾಳಿ, ನೀರು ಮತ್ತು ಕಾಡಿನ ಹಸಿರನ್ನು. ಆದರೂ ಮನುಷ್ಯರಲ್ಲಿದ್ದ ನಂಬಿಕೆ ಕಳೆದುಕೊಂಡಿರಲಿಲ್ಲ. ಈತನಿಗೆ ಹೆಸರು ಇರಲಿಲ್ಲ.

ನಮಶ್ಶಿವಾಯ ನಮಶ್ಶಿವಾಯ ಎಂದು ಸದಾ ಜಪಮಾಡುತ್ತಿದ್ದರಿಂದ ಈತನನ್ನು "ನಮಶ್ಶಿವಾಯ ಸ್ವಾಮಿ" ಎಂದೇ ಗುರ್ತಿಸುತ್ತಿದ್ದರು. ಒಂದು ಸಾರಿ ನೇರಳೆ ಹಣ್ಣು ತರಲು ಚೆಂಬಸ ಮತ್ತು ಲಸಮರು ರಾತ್ರಿ ಈ ಗುಡಿ ಹತ್ತಿರ ಬಂದಾಗ ಅಲ್ಲಿ ರಾಡಿರಮೇಶ ಮತ್ತು ತನ್ನ ಗೆಳೆಯರು ಜೊತೆಗೂಡಿ ಈತನನ್ನು ಹಿಗ್ಗಾಮುಗ್ಗಾ ಹೊಡೆದಿದ್ದರು. ಆ ಸೇಡಿನಿಂದ ಪಕ್ಕದಲ್ಲಿದ್ದ ಶಿವಲಿಂಗಕ್ಕೆ ಪ್ರತಿದಿನ ಸುರ್ಯೋದಯಕ್ಕೆ ಮುನ್ನ ಕತ್ತೆಸೆಯುತ್ತಿದ್ದ. ಕೊನೆಗೆ ನಮಶ್ಶಿವಾಯನ ಪ್ರೀತಿಕರುಣೆಯಿಂದಾಗಿ ತನ್ನ ತಪ್ಪಿನ ಅರಿವು ತಂದುಕೊಂಡ.

ಒಂದು ಸಾರಿ ಶಾಲೆಗೆ ಶಾಲಾ ಇನ್ಸ್‌ಫೆಕ್ಟರ್ ಬಂದಾಗ 'ಅಹಿಂಸೆ' ಎಂದರೇನು? ಎಂದು ಪ್ರಶ್ನಿಸಿದಾಗ ರಮೇಶನಾದಿಯಾಗಿ ಎಲ್ಲರೂ ಬಾಯಿ ಮುಚ್ಚಿದ್ದರು. ಚೆಂಬಸನನ್ನು ಕೇಳಿದಾಗ ಚೆಂಬಸ ಹೇಳಿದ "ಇನ್ನೊಬ್ಬರ ಮನಸನ್ನಾಗಲಿ, ದೇಹವನ್ನಾಗಲಿ ನೋಯಿಸದೆ ಇರುವುದೇ ಅಹಿಂಸೆ ಎಂದು ಮತ್ತೆ ಮುಂದುವರಿದು ಅಸ್ಪೃಶ್ಯತೆ ಅಂದರೇನು? ಎಂದಾಗ ಒಬ್ಬರನ್ನು ಮುಟ್ಟದೇ ಮತ್ತು ಮುಟ್ಟಿಸಿಕೊಳ್ಳದೆ ಇರುವುದೇ ಅಸ್ಪೃಶ್ಯತೆ" ಎಂದು ಉತ್ತರಿಸಿದ್ದು ಚೆಂಬಸನ ಚಿಂತನೆ ಬೇರೆಯಾಗಿ ತೋರುತ್ತಿತ್ತು.

ಲಸಮ ಒಂದು ಸಾರಿ ಶಾಲೆಗೆ ಶಾರಿಗೆ ಕಾರಿಹಣ್ಣು ಕೊಟ್ಟು ಬರಲು ಚೆಂಬಸನನ್ನು ಕರೆದುಕೊಂಡು ಹೋಗಿದ್ದ. ಅಲ್ಲಿ ತುಂಗಿಯ ಅಣ್ಣನ ಮಗಳು ಶಾರಿಯನ್ನು ಕಂಡು ಚೆಂಬಸನಲ್ಲಿ ಪ್ರೀತಿ ಅಂಕುರವಾಗಿತ್ತು. ಈ ಮೊದಲು ಆತ ಕಾಡಿನಲ್ಲಿ ನೇರಳೆಹಣ್ಣು ಕೀಳುತ್ತಿರುವಾಗ ಈಕೆಯ ಕಂಡಿದ್ದ ಮುಂದೆ ಪರಸ್ಪರರಲ್ಲಿ ಭೇಟಿಯಾಗಿ ಪ್ರೀತಿ ಬೆಳೆಯತೊಡಗಿತು.

ಇತ್ತ ಪಾರೋತಿ ಅನಾರೋಗ್ಯದಿಂದ ಬಳಲುತ್ತಿದ್ದಳು. ಇದನ್ನು ಕಂಡ ಬರಮೇಗೌಡ ತುಂಗಿಯಲ್ಲೇ ಕಾಲ ಕಳೆಯುತ್ತಾ ಈಕೆಯನ್ನು ನಿರ್ಲಕ್ಷಿಸಿದ್ದ. ಹೀಗಿರುವಾಗ ತನ್ನ ಮಗಳಿದ್ದೂ ಆಗಾಗ ಶಾಪ ಹಾಕುತ್ತಿದ್ದಳು. ಆಕೆಯ ಅಂದರೆ ತುಂಗಿಯ ಮಗ ಲಸಮ ಬೆಳೆದು ದೊಡ್ಡವನಾಗಿದ್ದ. ಈಗ ಈಕೆಗೆ ನೆನಪಾಗಿದ್ದು ತನ್ನ ತಮ್ಮ ಕುಂಟೀರಪ್ಪ. ಈತನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದರೆ ತನ್ನ ಜವಾಬ್ದಾರಿ ಕಡಿಮೆಯಾಗುವುದೆಂದು ನಿಶ್ಚಯಿಸಿದ್ದಳು ಅಲ್ಲದೇ ಮನೆ ಅಳಿಯನನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದ್ದಳು. ತನ್ನ ಮಲತಾಯಿಯ ಮಗನೇ ಈ ಇರಪನಗೌಡ. ಪೋಲಿಯೋದಿಂದ ಎಡಗಾಲು ಸೊಟ್ಟಾಗಾಗಿತ್ತು. ಕುಂಟುತ್ತಿದ್ದರಿಂದ 'ಕುಂಟೀರಪ್ಪ' ಎಂದು ಜನ ಕರೆಯುತ್ತಿದ್ದರು. ಇವನು ಶಿವಾಪುರಕ್ಕೆ ಬಂದು ಗೌಡರ ಎಲ್ಲ ಆಸ್ತಿಗೆ ಹಕ್ಕುದಾರನಾಗಬೇಕಾದರೆ ಬಾಗಿರ್ತಿಯನ್ನು ಮದುವೆಯಾಗಬೇಕೆಂದು ಅಂದುಕೊಂಡು ಮದುವೆಯಾದ ಅತ್ಯಂತ ಕುತಂತ್ರ ಬುದ್ಧಿ ಹೊಂದಿದ್ದ ಈತ ಮುಂದೆ ಎಲ್ಲ ಕುತಂತ್ರಕ್ಕೂ ನಾಶಕ್ಕೂ ಈತನೆ ಕಾರಣನಾದ ಕುಂಟೀರಪ್ಪ ಶಿವಾಪುರಕ್ಕೆ ಕಾಲಿಟ್ಟಿದ್ದೇ ತಡ ಬರಮೇಗೌಡನ ತಲೆಯಲ್ಲಿ ಇಲ್ಲದ ವಿಚಾರ ತುಂಬಿ ಊರನ್ನು ಸ್ಮಶಾನ ಮಾಡ ಹೊರಟನು. ಈ ಕುಂಟೀರಪ್ಪ ದುಷ್ಟ ಚಿಂತನೆಯಿಂದ ಅಮೇರಿಕಾ ಜಾಕ್ಸನ್ ಕಂಪನಿ ಶಿವಾಪುರಕ್ಕೆ ಬಂದು ಊರಲ್ಲಿ ತ್ಯಾಜ್ಯ ತುಂಬಿ ಊರಲ್ಲಿ ರೋಗ ರುಜಿನಿಗಳು ಉಂಟಾಗುವಂತೆ ಮಾಡಿತು.

ಚೆಂಬಸ ಬಿ.ಎ. ಮುಗಿಸಿ ಮರಳಿ ಊರಿಗೆ ಕಾಲಿಟ್ಟ ಒಂದು ಸಾರಿ ಗುಡ್ಡದ ಹೊನ್ನೆಯ ಮರದಡಿ ಶಾರಿ ಭೆಟ್ಟಿಯಾದಳು ಅಲ್ಲಿ ಆಕೆಯ ಜೊತೆ ಮಾತಾಡುತ್ತಾ "ಶಾರಿ ಹೊಳೀ ನೋಡು; ಕುಲವಂತರು ಹೊರಗಿನವರು ಅನ್ನುವುದಿಲ್ಲ ಎಲ್ಲರಿಗೂ ನೀರ ಕೊಡತೈತಿ ಆದರ ಮನಿಶ್ಯಾ ಕುಲ ಜಾತಿ, ಹೆಚ್ಚು ಕಡಿಮೆ ಅಂತ ಏನೇನೋ ಮಾಡಿಕೊಂಡು ಕಚ್ಚಾಡತಾನಲ್ಲ!"[3] ಎಂದು ಹೇಳುವಲ್ಲಿ ಆತನ ಮನೋಧರ್ಮ ಮುಖ್ಯವಾಗಿದ್ದು ಎಲ್ಲರೂ ಸರಿಸಮಾನರು, ಎನ್ನುವ ಚಿಂತನೆ ಸಮನತೆಯನ್ನು ಗುರ್ತಿಸುತ್ತದೆ. ಚೆಂಬಸನು ನನ್ನನ್ನು ಮದುವೆಯಾಗ್ತಿಯಾ? ಎಂದು ಶಾರಿಯ ಕೇಳಿದಾಗ ಆಕೆ ನಾನು ದಲಿತಳು ಮೇಲಾಗಿ ದೇವದಾಸಿ ಎಂದಾಗ ಯಾವುದನ್ನು ಲೆಕ್ಕಿಸದೇ ಮುತ್ತು ಹರಿದು ಮದುವೆ ಆಗೋಣವೆಂದು ನಿಶ್ಚಯಿಸಿಕೊಂಡಿದ್ದರು ಈ ಸುದ್ದಿ ಊರಿಗೆ ಹಬ್ಬಿತ್ತು. ಈ ವೇಳೆ ಶಾರಿ ದೊಡ್ಡವಳಾಗಿದ್ದಳು.

ಬಾಗೀರ್ತಿ ಶಾರಿ ಮನೆಗೆ ಬಂದು ತುಂಗವ್ವನಲ್ಲಿ ಚರ್ಚೆಗೈಯುತ್ತಾಳೆ. ಆಗ ದೇವದಾಸಿ ಎನಿಸಿದ ಶಾರಿಯ ಮುತ್ತನ್ನು ಹರಿದು ಆಕೆಗೆ ಮದುವೆ ಮಾಡು ಎನ್ನುವ ಚೆಂಬಸನ ಮಾತು ತುಂಗವ್ವಳಿಗೆ ಹಿಡಿಸದಿದ್ದರೂ ಬಾಗಿರ್ತಿ ಅದನ್ನು ಒಪ್ಪಿದ್ದಳು. ಹಾಗೇ ಊರಲ್ಲಿ ದೇವದಾಸಿ ದೊಡ್ಡವಳಾದಾಗ ಆಕೆಯು ಊರಗೌಡನನ್ನು ಮುಟ್ಟಿಸಿಕೊಳ್ಳಬೇಕು ಮತ್ತು ಸೀರೆ ಕುಬುಸ ಕೊಳ್ಳಬೇಕೆಂಬ ಪದ್ಧತಿ ಇತ್ತು. ಇದನ್ನು ಬಾಗಿರ್ತಿ ವಿರೋಧಿಸಿದ್ದಳು. ಕೊನೆಗೆ ಶಾರಿಗೆ ತನ್ನ ಅಣ್ಣ ಚೆಂಬಸನಿಂದಲೇ ಸೀರೆ ಕುಬುಸ ಕೊಡಸಿದಳು. ಇದನ್ನು ಕಂಡ ನಮಶ್ಶಿವಾಯ ಸ್ವಾಮಿ ಬಾಗಿರ್ತಿಗೆ ಮೆಚುಗೆ ಸೂಚಿಸಿದ.

ಹೀಗಿರುವಾಗ ಕುಂಟೀರಪ್ಪ ಶಾರಿಯ ಮೇಲೆ ಕಣ್ಣು ಹಾಕಿದ್ದ. ಜೊತೆಗೆ ರಮೇಶಿಯು ಈತನಿಗೆ ಸಹಾಯಕನಾಗಿದ್ದ. ಒಂದು ಸಾರಿ ಯಾರೂ ಇಲ್ಲದ ವೇಳೆ ಆಕೆಯ ಮನೆಗೆ ಹೋಗಿ ಮದುವೆಯಾಗೆಂದು ಪೀಡಿಸಿದಾಗ ನಾನು ಚೆಂಬಸನಿಗೆ ಮೀಸಲು ಎಂದ್ಹೇಳಿದಳು ಇದನ್ನು ಕೇಳದೇ ಶಾರಿಯ ಮುಟ್ಟಬಂದಾಗ ಆಕೆಯಿಂದ ಹಲ್ಲು ಮುರಿಸಿಕೊಂಡು ಹೋದ. ಈ ಸುದ್ದಿ ತುಂಗವ್ವನಿಗೆ ಮೊದಲು ಗೊತ್ತಾಯ್ತು ಸುದ್ದಿ ಹಬ್ಬಿಸಲಿಲ್ಲ. ನಂತರ ಈ ವಿಷಯ ಗೌಡನಿಗೆ ಗೊತ್ತಾಗಿದ್ದರಿಂದ ಆತ ವಿಚಾರಿಸಿ ತನ್ನ ಮಗಳನ್ನು ಕುಂಟೀರಪ್ಪನಿಗೆ ಕೊಟ್ಟು ಮದುವೆ ಮಾಡಿದ. ಆದರೆ ಬಾಗಿರ್ತಿ ಒಲ್ಲದ ಮನಸ್ಸಿನಿಂದ ಕುತ್ತಿಗೆ ಚಾಚಿದ್ದಳು.

ಏಕೆಂದರೆ ಕುಂಟೀರಪ್ಪನ ನಡಾವಳಿಕೆ ಬಾಗಿರ್ತಿಗೆ ಗೊತ್ತಿತ್ತು. ಬಾಗಿರ್ತಿ ಮತ್ತು ಚೆಂಬಸ ಮಾತಾಡುತ್ತಿದ್ದರೆ ಅದನ್ನು ಸಹಿಸುತ್ತಿರಲಿಲ್ಲ ಈ ಕುಂಟೀರಪ್ಪ. ತಲಾಟಿ, ಡಿ.ಸಿ. ತಹಶಿಲ್ದಾರನನ್ನು ತನ್ನವರನ್ನಾಗಿಸಿಕೊಂಡಿದ್ದ. ತನ್ನ ಮಾವನನ್ನು ಚುನಾವಣೆಗೆ ಹುರಿದುಂಬಿಸಿದ. ಇದೇ ವೇಳೆ ಪಾರ್ವತಿ ಅನಾರೋಗ್ಯದಿಂದ ಬಳಲುತ್ತಾ ತೀರಿಕೊಂಡಳು ಅಳಿಯ-ಮಾವ ಇಬ್ಬರೂ ಬೆಂಗಳೂರಿನತ್ತ ಪಯಣ ಬೆಳಸಿದರು. ಇದು ಮೊದಲ ಭಾಗದಲ್ಲಿ ಬರುವ ಕಾದಂಬರಿಯ ಚಿತ್ರಣವಾಗಿದೆ. ಸ್ವಚ್ಛಂದವಾಗಿದ್ದ ಶಿವಾಪುರವು ಗೌಡನ ದುರಾಡಳಿತದಿಂದ, ಕುಂಟೀರಪ್ಪನ ಕುತಂತ್ರದಿಂದ ನಲಗುತ್ತಾ ಬರುತ್ತಿರುವುದನ್ನು, ಮತ್ತು ಚೆಂಬಸನ ಆತ್ಮಸ್ಥೈರ್ಯ, ಮುಂದಾಲೋಚನೆಯನ್ನು, ಮತ್ತು ಶಾರಿ-

ಚೆಂಬಸರ ಪ್ರೇಮಾಂಕುರ, ನಮ್ಮಶಿವಾಯನ ಮಾರ್ಗದರ್ಶನ ಈ ಎಲ್ಲ ಚಿತ್ರಣಗಳನ್ನು ಮೊದಲ ಭಾಗದಲ್ಲಿ ಕಾಣುತ್ತೇವೆ.

ಭಾಗ ಎರಡರಲ್ಲಿ ಶಿವಾಪುರದಲ್ಲಾಗುವ ಬದಲಾವಣೆಗಳನ್ನು ಕಾಣುತ್ತೇವೆ. ಚೆಂಬಸ ಊರಲ್ಲಿ ನಾಯಕನಾಗಿ ಬೆಳೆಯುತ್ತಿದ್ದ. ಬರಮೇಗೌಡನ ದುರಾಡಳಿತ ಹಾಗೇ ಮುಂದುವರಿದಿತ್ತು. ಇದೇ ವೇಳೆ ಉಳುವವನೇ ಭೂಮಿಯೊಡೆಯ ಕಾಯ್ದೆ ಬಂದಿತ್ತು. ಚೆಂಬಸ ಮತ್ತವನ ಮಾವ ರಾಜಪ್ಪಗೌಡನ ಅರವತ್ತೆಕೆರೆ ಜಮೀನು ಹೊರತುಪಡಿಸಿ ರೈತರಿಗೆ ಅವರವರು ಊಳುತ್ತಿದ್ದ ಭೂಮಿಯನ್ನು ಅವರಿಗೆ ಕೊಟ್ಟು ಪಹಣಿ ಕೂಡಾ ಮಾಡಿಸಿಕೊಟ್ಟು ನಾಯಕನೆನಿಸಿಕೊಂಡ ಆದರೆ ಬರಮೇಗೌಡ ತನಗೆ ಬೇಕಾದ ಇಬ್ಬರಿಗೆ ಕಲ್ಲು ಬಂಡೆಗಳಿಂದ ಕೂಡಿದ ಬೀಳುನೆಲವನ್ನು ಕೊಟ್ಟಂತೆ ಮಾಡಿ, ಉಳಿದವರು ರೈತರಲ್ಲಿ, ಕೂಲಿಕಾರರೆಂದು ದಾಖಲೆಗಳನ್ನು ತಿದ್ದಿಸಿ ಬದಲಿಸಿದ ಇದನ್ನು ಊರಿನ ಕೆಲ ದಲಿತ ಯುವಕರು ವಿರೋಧಿಸಿ ತಮಗೆ ಸಿಗಬೇಕಾದ ನ್ಯಾಯ ಮತ್ತು ಭೂಮಿ ತಮಗೆ ಬೇಕೆಂದು ಹೋರಾಟದ ರೂಪರೇಸೆ ಹಾಕಿದರು. ಬೆಳಗಾವಿಯಲ್ಲಿದ್ದ ಅಂಬೇಡ್ಕರ ಸಂಘದ ಮೊರೆ ಹೊಕ್ಕರು. ಅಲ್ಲದೇ ಚೆಂಬಸ ಮತ್ತು ನಮಶ್ಶಿವಾಯ ಊರಲ್ಲಿ ಪ್ರತಿದಿನ ಕಾರ್ಯಕ್ರಮ ನಡೆಸಿ ಭಾಷಣ ಮಾಡುತ್ತಾ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದರು.

ಕಾಲಕಳೆದಂತೆ ಚೆಂಬಸನ ಮದುವೆ ಪ್ರಸ್ತಾಪ ಬಂದಿತು. ಬಾಗಿರ್ತಿ, ತುಂಗವ್ವ ಮತ್ತು ರಾಜಪ್ಪಗೌಡನ ಹೆಂಡತಿ ಅಕ್ಕು ತಾಯಿ ಎಲ್ಲರೂ ಕೂಡಿ ಮದುವೆಗೆ ಚೆಂಬಸನ ಒಪ್ಪಿಗೆ ಕೇಳಿದಾಗ 'ನಾನು ಮದುವೆಯಾದ್ರ ಶಾರಿಯನ್ನ ಮದುವಿ ಆಗ್ತಿನಿ ಇಲ್ಲಂದ್ರ ಸನ್ಯಾಸಿ ಆಗ್ತಿನಿ" ಎಂದು ನಿಷ್ಠುರ ನುಡಿ ಆಡಿದ. ಆಗ ತುಂಗವ್ವ ಕೆಣಕಿ 'ಶಾರಿ ದೇವರಿಗೆ ಬಿಟ್ಟವಳು ಆಕಿನೆಂಗ ಮದುವಿ ಆಗ್ತಿ' ಎಂದಾಗ ವಯಸ್ಸಿಗೆ ಬಂದ ಮಗಳನ್ನು ಮದುವೀ ಮಾಡಬ್ಯಾಡ, ನನ್ನ ಹೆಸರಿಗೆ ಬಿಟ್ಟು ಸೂಳಿಯಾಗಿರಿಸು ಅಂತಾಳೇನು ಆ ನಿನ್ನ ದೇವಿ? ಎಂದು ತನ್ನ ಹಾಲುಣಿಸಿದ ತುಂಗವ್ವಳಲ್ಲಿ ಸಿಟ್ಟು ಮಾಡಿಕೊಂಡ ಇವನ ವಿಚಾರ ಧಾರೆ ಜಾತಿ ಸಂತರ ಮಾಡುವುದಾಗಿದೆ. ಇತ್ತ ಬಾಗಿರ್ತಿಗೆ ಆತಂಕ ಏಕೆಂದರೆ ಶಾರಿಯ ಮೇಲೆ ತನ್ನ ಗಂಡ ಕಣ್ಣು ಹಾಕಿದ್ದ. ಈಗ ಈತ ಮದುವೆಯಾದರೆ ಈತನನ್ನು ಕೊಲೆಗಿಲೆ ಮಾಡಿದರೆ ಹೇಗೆ? ಎಂದು ಚಿಂತಿಸುತ್ತಿದ್ದಳು. ಹಾಗೇನಾದ್ರು ಮಾಡಿದರೆ ಚೆಂಬಸನೂ ಕುಂಟೀರಪ್ಪನ ಇನ್ನೊಂದು ಕಾಲು ಮುರಿವನೆಂಬ ಬರವಸೆಯೂ ಇತ್ತು. ಹೀಗಿರುವಾಗ ಚೆಂಬಸ ಲಸಮನ ಮದುವೆಯನ್ನು ತಾನೇ ಮುಂದೆ ನಿಂತು ಮಾಡಿದನು. ನಂತರದಲ್ಲಿ ಶಾರಿ ಮನಿಗೆ ಬಂದು ಆಕೆಯ ತಾಯಿ ಹತ್ತಿರ "ನಾನು ಮತ್ತು ಶಾರಿ ರಿಜಿಸ್ಟರ್ ಮದವೀ ಮಾಡಿಕೋಳ್ತೇವಿ, ನಮ್ಮ ಜೋಡಿ ನಾಗಣ್ಣ, ಲಸಮ, ಸ್ವಾಮಿ ಬರ್ತಾರ ನೀನು ಬೆಳಗಾವಿಗೆ ಬಂದು ಸಾಕ್ಷಿ ಸಹಿ ಹಾಕು" ಎಂದನು.

ಶಿವಾಪುರಕ್ಕೆ ತಾರಾ ಮತ್ತು ಅಮೇರಿಕಾ ಕಂಪನಿ ಬಾಸ್ ಬಂದರು. ಇವರನ್ನು ಕುಂಟೀರಪ್ಪ ಮತ್ತು ಬರಮೇಗೌಡ ಕರೆತಂದಿದ್ದರು. ಕುಂಟೀರಪನು ಮಲ್ಲಿಮಡು ಪ್ರದೇಶ ತೋರಿಸಿದ. ಇಲ್ಲಿಂದ ಶಿವಾಪುರ ಚಿತ್ರಣ ಬದಲಿಸಿತು. ತಾರಾ ಮಾದಕ ಸೌಂದರ್ಯದವಳು ಎಲ್ಲರನ್ನೂ ಬುಟ್ಟಿಗೆ

ಹಾಕಿಕೊಳ್ಳುವ ಚತುರತೆ ಇತ್ತು. ಬಾಗಿರ್ತಿ ಮನ ಕರಿಗಿಸಲು ಲಿಪ್ಸ್ಟಿಕ್, ಸ್ನೋ ಪೌಡರ್, ಪ್ಯಾಶನ್ ಒಳಪಡು ಕಾಣಿಕೆಯಾಗಿ ನೀಡಿದಳು. ಇತ್ತ ಕಂಪನಿ ಬಾಸ್ ಡಿ.ಸಿ. ಕುಂಟೀರಪ್ಪ ಹೊಂಚುಹಾಕುತ್ತಿದ್ದರೆ ಗೌಡ ತಾರಾಳ ಮಾದಕ ಸೌಂದರ್ಯಕ್ಕೆ ಮಾರುಹೋಗಿ ಹುಚ್ಚನಂತಾಗಿದ್ದ. ಚರ್ಚೆ ಮುಂದುವರಿದು, ಚುನಾವಣೆ ಪ್ರಸ್ತಾಪ ಬಂತು. ಆಮೇಲೆ ಡಿ.ಸಿ. ಹೊಲಗದ್ದೆಗಳ ಕರಾರುವಕ್ಕಾದ ನಕ್ಷೆ ತಂದು ಮಲ್ಲಿಮಡು ಪ್ರದೇಶದಲ್ಲಿ ಕಂಪನಿಯಿಂದ ಶಿವಾಪುರದ ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು ಅಂದರೆ ಇಂಗ್ಲೀಷ್ ಸ್ಕೂಲು, ಪ್ರೌಢಶಾಲೆ, ಕಾಲೇಜು ಸ್ಥಾಪನೆ ಮಾಡುವುದೆಂದು ನಕ್ಷೆಗಳಲ್ಲಿ ನಮೂದಾಗಿತ್ತು. ಕುಡಿದ ಮತ್ತಿನಲ್ಲಿ ಗೌಡ ಎಲ್ಲಿ ಬೇಕೆಂದರಲ್ಲಿ ಪತ್ರದಲ್ಲಿ ಸಹಿ ಹಾಕುತ್ತಿದ್ದ. ಹೀಗೆ ತಾರಾ, ಕುಂಟೀರಪ ಮತ್ತು ಕಂಪನಿ ಬಾಸ್ ಹೊಂಚು ಹಾಕಿ ಮುನ್ನಡೆಯುತ್ತಿದ್ದರೂ ಗೌಡನಿಗೆ ಗೊತ್ತಾಗುತ್ತಿರಲಿಲ್ಲ.

ಬರಮೇಗೌಡ ಸ್ತ್ರೀಲೋಲ ಅಷ್ಟೇ ಆಗಿರಲಿಲ್ಲ. ಭೂಮಿ ವಿಷಯದಲ್ಲೂ ಲೋಭಿಯಾಗಿದ್ದ, ಯಾರದರೂ ಒಳ್ಳೆಯ ಭೂಮಿ ಇದ್ದರೆ ಅದನ್ನು ಮೋಸದಿಂದ, ಇಲ್ಲವೇ ಸಾಲ ಕೊಟ್ಟು ಕೊಡದಾದಾಗ ತನ್ನ ಹೆಸರಿಗೆ ಮಾಡಿಕೊಳ್ಳುತ್ತಿದ್ದ. ಜನ ಈತನನ್ನು ಗೌಡ ತನ್ನ ಮನೆಯನ್ನು ನೀರಿನಿಂದಲ್ಲ, ಬಡವರ ಕಣ್ಣೀರಿನಿಂದ ತೊಳೆಯುವನೆಂದು ಜನ ಆಡಿಕೊಳ್ಳುತ್ತಿದ್ದರು. ಉಳುವವ ಭೂಒಡೆಯ ಕಾಯ್ದೆ ಬಂದು ಸರಕಾರ ಪ್ರಾದೇಶಿಕ ಸಮಿತಿ ರಚಿಸಿದರೆ ಅಂತಲ್ಲಿ ತಾನೇ ಇದ್ದು ಸದಸ್ಯರ ಹಾದಿ ತಪ್ಪಿಸಿ ಭೂಮಿ ತನ್ನವಾಗಿಸಿಕೊಂಡಿದ್ದ. ಮಲ್ಲಿಮಡು ಪಕ್ಕದಲ್ಲಿ ಬಲವಂತನ ಇಪ್ಪತ್ತು ಗುಂಟೆ ಭೂಮಿಯನ್ನು ಸರಕಾರದ ಹೆಸರು ಹೇಳಿ ವಶಪಡಿಸಿಕೊಂಡು ಅಲ್ಲಿ ಕಂಪನಿ ಆಫೀಸು ಮಾಡಲು ನಿರ್ಧರಿಸಿದ ಇದೇ ವೇಳೆ ಬಲವಂತ ಬೆಳಗಾವಿಗೆ ಹೋಗಿರುವಾಗ ರಾಡಿರಮೇಶ ಮತ್ತು ಕುಂಟೀರಪನ ತಮ್ಮ ಗಣಪ ಬಲವಂತನ ಮಗಳು ನೀಲಗಂಗುವಿನ ಮೇಲೆ ಅತ್ಯಾಚಾರ ಮಾಡಿದರು. ಕೊನೆಗೆ ನೀಲಗಂಗು ಅಪಮಾನ ತಾಳದೇ ಜೀವಬಿಟ್ಟಳು. ಪೋಲಿಸರನ್ನು ಕರೆಸಿ ಗಣಪ ರಾಡಿರಮೇಶನನ್ನು ಹಿಡಿದುಕೊಟ್ಟರು. ಮರುದಿನವೇ ಬಲವಂತ ಅವಮಾನ ತಾಳಲಾರದೇ ಕೀಟನಾಶಕ ಕುಡಿದು ಸತ್ತುಬಿದ್ದಿದ್ದ. ಇದಕ್ಕೆಲ್ಲ ಕಾರಣ ಬರಮೇಗೌಡನ ದೌರ್ಜನ್ಯವೆಂದು ದಲಿತ ಸಂಘ ಇವನ ಮೇಲೆ ದೂರು ನೀಡಿದಾಗ ಪೋಲಿಸರು ಬಂದು ಬಂಧಿಸಿದರು ಮತ್ತೆ ಜಾಮಿನಿನ ಮೇಲೆ ಹೊರಬಂದ.

ಬೆಂಗಳೂರಿನಿಂದ ಕುಂಟೀರಪ ಮತ್ತೆ ಮಾವನ ಕೂಡಿಕೊಂಡು ನೀವು ಜೈಲು ಸೇರಲು ಕಾರಣ ಚೆಂಬಸ ಮತ್ತು ಆತ ಚುನಾವಣೆಗೆ ನಿಲ್ಲಬೇಕೆಂಬ ಲೆಕ್ಕ ಹಾಕ್ಯಾನ ಎಂದು ಇಲ್ಲ ಸಲ್ಲದ ಮಾತು ಹೇಳಿ ಗೌಡನ ತಲೆಕೆಡಿಸಲು ಮುಂದಾಗಿದ್ದ ಅದು ಸಾಧ್ಯವಾಗಲಿಲ್ಲ; ಮುಂದೆ ಚುನಾವಣಾ ಪ್ರಚಾರ ಸುರುವಾಯಿತು. ಇಂತಹ ಸಂದರ್ಭದಲ್ಲಿ ಬಾಗಿರ್ತಿ ಕೂಸೊಂದಕ್ಕೆ ಜನ್ಮ ನೀಡಿದಳು. ಅದು ವಿಕೃತ ಸಂತಾನವಾಗಿದ್ದು ಕೈಕಾಲು ಸಣಕಲಿದ್ದು ಮೈ ಮಾತ್ರ ದೊಡ್ಡದಿತ್ತು.

ಕಾಲ ಗತಿಸಿದಂತೆ ಕುಂಟೀರಪ್ಪ ಮತ್ತು ಬರಮೇಗೌಡರ ಕೆಡಕುತನ ಹೆಚ್ಚು ಹೆಚ್ಚಾಗುತ್ತಿತ್ತು. ಇದನ್ನು ಯಾರೂ ಎದುರಿಸಲು ಆಗುತ್ತಿರಲಿಲ್ಲ. ಬರಮೇಗೌಡನ ಚುನಾವಣಾ ಪ್ರಚಾರ ಭರದಿಂದ ಸಾಗಿತು. ಹೆಂಡ ಮತ್ತು ಬಾಡಿನ ಊಟ ಅಲ್ಲಲ್ಲಿ ಭರ್ಜರಿ ಇತ್ತು ವಿವಿಧ ಭರವಸೆಗಳನ್ನು ಕೊಡುತ್ತಾ ಶಾಲೆ, ಕಾಲೇಜು, ಆಸ್ಪತ್ರೆ, ಪೋಲೀಸ್ ಸ್ಟೇಷನ್ನು ಕಟ್ಟಿಸಿಕೊಡುವ ಭರವಸೆ ಸಾಗುತ್ತಲಿತ್ತು. ಕಬ್ಬಿನ

ಬೆಳೆಯ ಬೆನ್ನು ಹತ್ತಿ ರೈತರು ತಮಗೆ ಅಗತ್ಯವಿದ್ದ ಬೆಳೆಗಳನ್ನು ನಿರ್ಲಕ್ಷಿಸಿದ್ದ ಕಂಡು ತುಂಗವ್ವ ಲಸಮ, ನಾಗಣ್ಣರನ್ನು ಬೈಯುತ್ತಿದ್ದಳು, ದುಡ್ಡಿನಾಶೆಯಿಂದ ಶಿವಾಪುರ ರೈತರು ದಾರಿತಪ್ಪುತ್ತಿದ್ದರು. ಇದೇ ವೇಳೆ ತನ್ನ ಎಮ್ಮೆಯು ಆಸ್ಪಷ್ಟವಾದ ಅಂಗಾಂಗಗಳಿಂದ ಕೂಡಿದ ಹಿಂದೆ ಮುಂದೆ ಎರಡು ತಲೆಯಿಂದ ಕೂಡಿದ ಕರುವಿಗೆ ಜನ್ಮ ನೀಡಿತ್ತು ಆದರೆ ಅದು ಗರ್ಭದಲ್ಲೇ ಸತ್ತಿತ್ತು." ಇದನ್ನು ಕಂಡ ಜನ ಭಯ ಭೀತರಾಗಿ ಇದು ಅಪಶಕುನ, ಶುಭಲಕ್ಷಣವಲ್ಲವೆಂದು ತಮಗೆ ಅಪಾಯ ಆಗದಿರಲೆಂದು ಎಲ್ಲಮ್ಮನಿಗೆ ಹರಕೆ ಹೊತ್ತರು. ಇದೇ ವೇಳೆ ಬೆಳಗಾವಿಗೆ ಹೋಗಿ ಶಾರಿ ಚೆಂಬಸ ರಿಜಿಸ್ಟರ್ ಮದುವೆ ಆಗಿ ಬಂದರು. ನಂತರ ಗುಡ್ಡಕ್ಕೆ ಬಂದು ನಮ್ಮಶಿವಾಯನ ಆಶೀರ್ವಾದ ಪಡೆದು ನೇರಳೆ ಮರಕ್ಕೆ ಕರೆದೊಯ್ದು ನೋಡಿದರೆ ಎಲ್ಲಾ ಹಣ್ಣು ಕೊಳಿತು ಬಾಡಿದ್ದವು. ಅಲ್ಲದೇ ಹಣ್ಣಿನಲ್ಲಿ ರುಚಿ ಇರಲಿಲ್ಲ ರಸವೂ ಇರಲಿಲ್ಲ.

ಚುನಾವಣೆ ಕಾವು ತಾರಕೇರಿತು. "ನಾನು ನಿಮ್ಮವ ಸೇವೆ ಮಾಡಲು ನೀವು ದೊಡ್ಡ ಮನಸ್ಸು ಮಾಡಿ" ಎಂದು ಹೋದಲ್ಲೆಲ್ಲ ಬೊಗಳೇ ಭಾಷಣ ಬಿಡುತ್ತಿದ್ದ. ಮೇ ಎರಡನೇ ತಾರಿಖು ಚುನಾವಣೆ ನಡೆದು ಜೂನ್ ಹದಿನಾಲ್ಕರೆಂದು ಚುನಾವಣಾ ಫಲಿತಾಂಶ ಪ್ರಕಟವಾಗುವುದೆಂದು ಘೋಷಣೆಯಾದ ಮೇಲೆ ಬರಮೇಗೌಡ ಸಂತಸಗೊಂಡ. ಆದರೆ ಚುನಾವಣೆಗೆ ಶಿವಾಪುರ ಕ್ಷೇತದಿಂದ "ಜೈ ಜನ ಜ್ಯೋತಿ" ಪಕ್ಷದಿಂದ ಶಿವಾಪುರದ "ಇರಪಣ" ಗೌಡರಿಗೆ ಟಿಕೆಟ್ ಸಿಕ್ಕಿದೆಯೆಂದು ರೇಡಿಯೋದಲ್ಲಿ ಕೇಳಿ ಗೌಡ ಬೆಚ್ಚಿಬಿದ್ದ ಸ್ವತಃ ಮಾವನಿಗೆ ನಿಶೆ ಏರಿಸಿ ಆತನ ದುಡ್ಡಿನಿಂದ ತಾನೇ ಟಿಕೆಟ್ ಪಡೆದು ಕುಂಟೀರಪ್ಪ ಜಯಶಾಲಿಯಾಗಿಯೂ ಬಂದನು. ಅಲ್ಲದೇ ಬರಮೇಗೌಡನ ಸಂಪೂರ್ಣ ಆಸ್ತಿಯನ್ನು ಕುಂಟೀರಪ ಮೋಸದಿಂದ ಸಹಿ ಹಾಕಿಸಿಕೊಂಡು ತನ್ನ ಆಸ್ತಿಯಾಗಿ ಮಾಡಿಕೊಂಡಿದ್ದ. ಇನ್ನೊಬ್ಬರಿಗೆ ಮೋಸ ಮಾಡುವ ವ್ಯಕ್ತಿ ಮೋಸದಿಂದಲೇ ತನ್ನದನ್ನು ಕಳೆದುಕೊಳ್ಳುವ ಎಂಬ ಮಾತು ಇಲ್ಲಿ ಸತ್ಯ.

ಈಗ ಬರಮೇಗೌಡನು ತನಗೆ ಮೋಸ ಮಾಡಿದ ಕುಂಟೀರಪ್ಪನನ್ನು ನೆನದು ಆತ ಸಿಕ್ಕರೆ ಅವನನ್ನು ಬಿಡುವುದಿಲ್ಲ ಎಂದೆಲ್ಲ ಮನದೊಳಗೆ ತಳಮಳಗೊಳ್ಳುತ್ತಿದ್ದ. ಕೊನೆಗೆ ತಾನು ಈ ಕುಂಟೀರಪ್ಪ ನನ್ನದೆಲ್ಲವನ್ನು ತನ್ನ ವಶವಾಗಿ ಮಾಡಿಕೊಂಡು ನನ್ನನ್ನು ಕೇವಲನಾಗಿಸಿದವನಲ್ಲ" ಎಂದು ಚಿಂತಾ ಮಗ್ನವಾಗಿ ತನ್ನ ಮಗಳ ಜೀವನ ಹಾಳಾಯಿತು. ಇದಕ್ಕೆಲ್ಲಾ ನಾನೇ ಕಾರಣನೆಂದುಕೊಂಡು ಮನದಲ್ಲಿ ಕೊರಗಲು ಪ್ರಾರಂಭಿಸಿದನು. ತಾರಾಳ ಚಿತ್ರ ಆಗಾಗ ಕಣ್ಮುಂದೆ ಬಂದು ಹೋಗುತ್ತಿತ್ತು. ಆಕೆ ಮೋಸದಿಂದ ನನ್ನನ್ನು ವಂಚಿಸಿದಳೆಂದು ಹಿಂಸೆ ಪಟ್ಟುಕೊಂಡ.

ಹಾಗೆ ಕುಂಟೀರಪ್ಪ ಕುಂಟನಾದರೂ ದುರ್ಬಲನಲ್ಲ. ಅತೀ ವಿನಯ ಧೂರ್ತ ಲಕ್ಷಣವೆನ್ನುವಂತೆ ವರ್ತಿಸಿದವ ಈತ. "ಇಗೋ ನನ್ನ ಆಸ್ತಿ, ಇಗೋ ನನ್ನ ಮಗಳು, ಊರು, ಇಗೋ ನಂಬಿಕೆ, ಜೀವ, ಇಗೋ ಮನ, ಇಗೋ ಕೀರ್ತಿ" ಎಲ್ಲವನ್ನೂ ಒಶಪಡಿಸಿಕೊಂಡ ಎಂದು ಕೊರಗುತ್ತಿದ್ದ ಪರಿ ವಿಸ್ಮಯ. ಈತ ಮಾಡಿದ ತಪ್ಪಿಗೆ ತಕ್ಕ ಶಿಕ್ಷೆ ಸಿಕ್ಕಿತು. ಈಗ ಚೆಂಬಸನೆಂದರೆ ಇಲ್ಲದ ಪ್ರೀತಿ ಹುಟ್ಟಿತು. ಕೊನೆಗೆ ಕುಂಟೀರಪ್ಪ ಶಾಸಕನಾದ. ಮುಂದೆ ಬಿಗ್ ಬಾಸ್ ಕೃಪೆಯಿಂದ ' ಸಣ್ಣ

ನೀರಾವರಿ" ಮಂತ್ರಿಯೂ ಆದನು. ಪ್ರಮಾಣ ವಚನಕ್ಕೆ ಬಾಗಿರ್ತಿಯನ್ನು ಕರೆಸಿಕೊಂಡ.

ಇತ್ತ ಚೆಂಬಸ ಮತ್ತು ನಮ್ಯಶಿವಾಯ ಸ್ವಾಮಿ ಚಳುವಳಿರೂಪ ರೂಪರೇಷೆ ಹಾಕಿದರು. ನಂತರ ಬರಮೇಗೌಡನಲ್ಲಿಗೆ ಬಂದು ನಿಮ್ಮ ವಿರುದ್ಧ ನಾವು ಚಳುವಳಿ ಮಾಡೊರಿದ್ದೀವಿ ಎಂದು ಹೇಳಿ ಪತ್ರಿಕೆಯಲ್ಲಿ ಬಂದ ವಿಷಯ ಓದಲು ಕೊಟ್ಟರು. ಅದರಲ್ಲಿ ಊರಲ್ಲಿ ವಿಕೃತ ಸಂತಾನ, ರುಚಿಕೆಟ್ಟ ನೇರಳೆಹಣ್ಣು ಕುರಿತು ಬಂದ ಪತ್ರಿಕಾ ವಿಷಯ ಓದಿ ಚಕಿತನಾದ. ಅಲ್ಲದೇ ಇನ್ನೊಂದು ಪತ್ರದ ಲೇಖನದಲ್ಲಿ "ಶಿವಾಪುರದ ಸಮಗ್ರ ಅಭಿವೃದ್ಧಿ" ಎಂದು ಹೇಳಿ ಮಲ್ಲಿಮಡು ಪ್ರದೇಶದಲ್ಲಿ ಶಾಲೆ, ಕಾಲೇಜು, ಆಸ್ಪತ್ರೆ ಕಟ್ಟಿಸಲು ಇಚ್ಚಿಸಿ ಅಮೇರಿಕಾದ ಚಾರಿಟಿ ಸಂಸ್ಥೆಯಿಂದ ಹಣ ಕೊಡಿಸುವುದಾಗಿ ಡಿ.ಸಿ. ಹೇಳಿ ಇರಪನಗೌಡ ಮತ್ತು ಅಮೇರಿಕದ ಜಾಕ್ಸನ್ ಕಂಪನಿಗೆ ಒಪ್ಪಂದವಾಗಿ ವಿದೇಶಿ ಫ್ಯಾಕ್ಟರಿಯ ರಸಾಯನ ಗೊಬ್ಬರದ ತ್ಯಾಜ್ಯವನ್ನು ಮಲ್ಲಿಮಡುವಿಗೆ ತುಂಬಿದೆ. ಇದರಿಂದ ಊರಲ್ಲಿ ಏನೆಲ್ಲ ಸಂಗತಿಗಳು ಜರುಗಲು ಬರಮೇಗೌಡನೇ ಕಾರಣ ಎಂಬ ವಿಷಯ ಓದಿದ. ಆಗ ತನ್ನ ತಪ್ಪಿನ ಅರಿವಾಗಿ ಬರಮೇಗೌಡ ಇನ್ನು ಶಿವಾಪುರ ಸ್ಮಶಾನ ಆಗೋದನ್ನ ತಪ್ಪಿಸಬೇಕೆಂದು ಏನಾದ್ರು ದಾರಿ ಅದಾವೋ ಎಂದಾಗ ಶಾಲಾ ಕಾಲೇಜಿಗೆ ಬೇರೆ ಜಾಗತೊರಿಸಿದರೆ ಆಗ ಒಪ್ಪದಾದಾಗ ಒಪ್ಪಂದ ತಂತಾನೆ ಮುರಿತೈತಿ ಎಂದು ಸಲಹೆ ಕೊಟ್ಟರು.

ಅಮೇರಿಕಾದ ಜಾಕ್ಸನ್ ಕಂಪನಿ ವಿರುದ್ಧ ಚೆಂಬಸ ಮತ್ತು ನಮಶ್ಶಿವಾಯ ಸ್ವಾಮಿ ಚಳುವಳಿ ಆರಂಭಿಸಿ ಅಲ್ಲಲ್ಲಿ ಭಾಷಣದೊಂದಿಗೆ ಜನರನ್ನು ಎಚ್ಚರಿಸಿ ಮಲ್ಲಿಮಡುವಿನಲ್ಲಿ ತ್ಯಾಜ್ಯ ತುಂಬುವುದನ್ನು ನಿಲ್ಲಿಸಿ, ಬೇರೆ ಕಡೆ ಶಾಲಾ ಕಾಲೇಜು ಕಟ್ಟಬೇಕೆಂಬುದು ಇವರ ಚಳುವಳಿ ಉದ್ದೇಶವಾಗಿತ್ತು ಕುಂಟೀರಪ ಡಿ.ಸಿ. ಜೊತೆ ಸದಾ ಸಂಪರ್ಕದಲ್ಲಿದ್ದ. ಚಳುವಳಿ ಪ್ರಾರಂಭವಾಗಿ ಮಲ್ಲಿಮಡುವಿನತ್ತ ತೆರಳಿದರು. ತ್ಯಾಜ್ಯ ತುಂಬುವುದನ್ನು ನಿಲ್ಲಿಸಲು ಡಿ.ಸಿ. ಗೆ ಕರಪತ್ರ ತಯಾರು ಮಾಡಿದ್ದರು. ದಲಿತ ಸಂಘದವರು, ಪತ್ರ ಕರ್ತರು ಸೇರಿದ್ದರು. ಆಗ ಬೆಳಗಾವಿಯಿಂದ ಪೋಲಿಸರು ಬಂದು ಚೆಂಬಸನ ಹೊಡೆಯಲು ಮುಂದಾದಾಗ ಜನ ರೊಚ್ಚಿಗೆದ್ದು ಪೋಲಿಸ್‌ರನ್ನು ಹಿಡಿದು ಥಳಿಸಿ ಬಟ್ಟೆ ಕಳಚಿ ಚಡ್ಡಿಯಲ್ಲೇ ನಿಲ್ಲಿಸಿದರು. ನಂತರ ಪೋಲಿಸರು ಓಡಿ ಹೋದರು.

ರಾತ್ರಿ ವೇಳೆ ಶಾರಿ ಮನೆಗೆ ನುಗ್ಗಿ ಆಕೆಯನ್ನು ಹಿಂಸಿಸಿ ಬಲಾತ್ಕರಿಸಿದ್ದ ಪೋಲಿಸರು, ರಾಡಿ ರಮೇಶ, ಗಣಪ ಈ ಐವರು ಮರುದಿನ ಹೊಳೆಯಲ್ಲಿ ಹೆಣವಾಗಿ ತೇಲುತ್ತಿದ್ದರು. ಮರುದಿನ "ತೋಂಡಿ" ಪತ್ರಿಕೆಯಲ್ಲಿ ಬಿಸಿಬಿಸಿ ಸುದ್ದಿ ಇತ್ತು. ಬಾಗಿರ್ತಿ ಗಂಡನ ಪ್ರಮಾಣ ವಚನಕ್ಕೆಂದು ಬೆಂಗಳೂರಿಗೆ ಹೋಗಿದ್ದಳು. ಅಲ್ಲಿ ತಾರಾಳ ಮನೆಯಲ್ಲಿ ಪಾರ್ಟಿ ಏರ್ಪಟ್ಟಿತ್ತು. ಕುಂಟೀರಪನ ಹೇಳಿಕೆಯಂತೆ ಬಿಗ್‌ಬಾಸ್ ಬಾಗೀರ್ತಿಯನ್ನು ತಬ್ಬಿಕೊಳ್ಳಲು ಬಂದಾಗ ಬಾಗಿರ್ತಿ ಆತನ ಕಪಾಳಕ್ಕೆ ಹೊಡೆದು ಕಾಲಿನ ಚಪ್ಪಲಿ ತೆಗೆದು ತೋರಿಸಿದ್ದಳು. ಕೊನೆಗೆ ಸಾಕಾಗಿ ಶಿವಾಪುರಕ್ಕೆ ಬಂದಳು. ಇದೇ ವೇಳೆ ಗೌಡನಿಗೆ ಪಾರ್ಶ್ವವಾಯು ಆಗಿತ್ತು ಕೊನೆಗೆ ಸಾವನ್ನಪ್ಪಿದ. ಇದನ್ನೆಲ್ಲ ನೋಡಿದ

ಬಾಗೀರ್ತಿ ಸಕ್ಕರೆ ಕಾರ್ಖಾನೆಯಲ್ಲಿ ಇರಲು ತೀರ್ಮಾನಿಸಿದಾಗ ಜನ ತಡೆದು ಅಲ್ಲೇ ಉಳಿಸಿಕೊಂಡರು. ಹೀಗೆ ಶಿವಾಪುರ ಎನ್ನುವುದು ಕುಂಟೀರಪನ ಕುತಂತ್ರದಿಂದ ಶಿವಾಪುರ ಹಾಳಾದ ಬಗೆಯನ್ನು ಕಂಬಾರರು ಈ ಕಾದಂಬರಿಯ ಎರಡನೇ ಭಾಗದ ಮೂಲಕ ತಿಳಿಸಿಕೊಟ್ಟಿದ್ದಾರೆ.

ಮೂರನೇ ಭಾಗದಲ್ಲಿ ಶಿವಾಪುರದಲ್ಲಿ ಆದ ಘಟನೆಗಳಿಗೆ ಪರ್ಯಾಯವಾಗಿ ಕಂಡುಬಂದ ಅಂಶಗಳನ್ನು ಮತ್ತು ಹೊಸ ಶಿವಾಪುರ ಹೇಗೆ ನಿರ್ಮಿಸಲು ಸಾಧ್ಯ ಎನ್ನುವ ಚಿಂತನೆಯನ್ನು ಕಾಣುತ್ತೇವೆ.

ಚೆಂಬಸನು ಕೊಲೆ ಮಾಡಿದ್ದರಿಂದ ಸ್ವತಃ ತಾನೇ ಜೈಲು ವಾಸ ಅನುಭವಿಸುತ್ತಿದ್ದ, ಜೈಲಿನಲ್ಲಿ ಈ ಹಿಂದೆ ಎಲ್ಲ ಘಟನೆಗಳನ್ನು ಮತ್ತು ತನ್ನ ಹೆಂಡತಿಯ ಮಾನ ಕಳೆದ ಮೂರು ಜನ ಪೋಲಿಸರು ರಾಡಿ ರಮೇಶ ಮತ್ತು ಚಾಡೀ ಗಣಪನನ್ನು ಕೊಂದು ಹೊಳೆಗೆ ಬಿಸಾಕಿದ್ದು ಎಲ್ಲವನ್ನೂ ನೆನೆದುಕೊಂಡ ಇದಕ್ಕೆ ಕುಂಟೀರಪನೇ ಕಾರಣನೆಂದು ಮನದಲ್ಲಿ ಕಳವಳಗೊಳುತ್ತಿದ್ದ. ಜೈಲಿನಲ್ಲಿ ಈತನ ಕಂಡವರೆಲ್ಲ ಖಳನಾಗಿ ಗುರ್ತಿಸದೇ ವೀರನಾಗಿ, ಶೂರನನ್ನಾಗಿ ಕಂಡರು. ಹೀಗೆ ಈ ನಡೆಯಲು ಕುಂಟೀರಪನೇ ಕಾರಣನು. ಇದನ್ನು ಕನಸಿನಲ್ಲಿ ಮೂಡಿದ ಬಗೆ ಕಾದಂಬರಿಯಲ್ಲಿ ಸುಂದರವಾಗಿ ಹೆಣೆಯಲ್ಪಟ್ಟಿದೆ. ಕನಸಿನಲ್ಲಿ ನ್ಯಾಯಮೂರ್ತಿಗಳು ಬಂದರು ತಾನು ಕಟಕಟ್ಟೆಯಲ್ಲಿ ನಿಂತು ನಾನು ಸಾಯಿಸಿದವನಲ್ಲ ಶಿವಲಿಂಗ... ಎಂದು ಮತ್ತೇ ತಪ್ಪಿನ ಅರಿವಾಯ್ತು ಅಲ್ಲ! ಅಲ್ಲ! ತಪ್ಪಾಯ್ತು ಸ್ವಾಮಿ "ಕೊಲೆ ಮಾಡಿದವನು ನಾನು.. ನಾನೇ, ಮಾಡಿಸಿದವನು ಮಾತ್ರ ಶಿವಲಿಂಗ ದೇವರಲ್ಲ ಕುಂಟೀರಪ" ಎನ್ನುವಲ್ಲಿ ಊರನ್ನು ಹಾಳುಗೆಡುವಿದ ಕುಂಟೀರಪನ ನೆನೆದು ಕುಪಿತನಾದ.

ಮನುಷ್ಯ ಕೆಲವು ಸಾರಿ ಅಸಹಾಯಕನಾಗುತ್ತಾನೆ. ಸಮಾಜದಿಂದ ಕೆಲವು ಸಾರಿ ಒಳ್ಳೆಯವ ಕೆಟ್ಟವನಾಗುವ ಪರಿಸ್ಥಿತಿ ಬರುತ್ತದೆ. ಅದಕ್ಕೆ ಕಾರಣ ಸಮಯ ಸಂದರ್ಭ ಎಂಬುದನ್ನು ಕಂಬಾರರು ಚೆಂಬಸನ ಪಾತ್ರದ ಮೂಲಕ ತಿಳಿಪಡಿಸುತ್ತಾರೆ. ಶಿವಾಪುರ ಎನ್ನುವ ಊರಲ್ಲಿ ನಡೆಬಾರದ ಘಟನೆಗಳೆಲ್ಲ ಜರುಗಿಹೋದವು ಇತ್ತ ಶಾರವ್ವನ ಬದುಕು ಅಸ್ತವ್ಯಸ್ತವಾಗಿತ್ತು. ಚೆಂಬಸ ಈಕೆಯ ಹುಡುಕಾಟಕ್ಕೆ ಕಾತರನಾಗಿದ್ದ. ಶಾರವ್ವ ತನಗೆ ಪೋಲಿಸರಿಂದ ಆದ ಅಪಮಾನದಿಂದ ನಮಶ್ಶಿವಾಯ ಸ್ವಾಮಿ ಹತ್ತಿರ ಬಂದು ದುಃಖ ತೋಡಿಕೊಂಡಳು. ಈ ವೇಳೆ ಆಕೆ "ಹಕ್ಕಿಯ ಹಿಂಡಿನ ಸೊಕ್ಕಿದ ಗಾಳಿಗಿಡಾದ ಹೊಲದಂತೆ ಅಸ್ತವ್ಯಸ್ತವಾಗಿದ್ದಳು" ಈಕೆಯನ್ನು ಸುರಕ್ಷತೆಗಾಗಿ ಅನಾಥಾಶ್ರಮ ನಡೆಸುವ "ಮಾಣಿಕಮ್ಮ" ಎಂಬುವವಳಲ್ಲಿ ಸ್ವಾಮಿ ಕರೆತಂದು ಬಿಟ್ಟುಹೋದ.

ಮಾಣಿಕಮ್ಮಳು ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧಿ ಜೊತೆ ಭಾಗವಹಿಸಿದ ಅವರ ಅನುಯಾಯಿಗಳಲ್ಲಿ ಮಾಣಿಕಮ್ಮಳೂ ಒಬ್ಬಳಾಗಿದ್ದಳು. ಜೀವನುದುದ್ದಕ್ಕೂ ಹೋರಾಟದ ಬದುಕು ಸಾಗಿಸಿ ತನ್ನ ಅಳಿದುಳಿದ ಆಸ್ತಿಯಿಂದ "ಅನಾಥಾಶ್ರಮ" ನಡೆಸಿಕೊಂಡು ಹೋಗುತ್ತಿದ್ದಳು. ಈ ಅನಾಥಾಶ್ರಮಕ್ಕೆ "ಕಸ್ತೂರಬಾ ಅನಾಥಾಶ್ರಮ"ಎಂಬ ಹೆಸರನ್ನಿಟ್ಟು ಅನೇಕ ವರ್ಷದಿಂದ ಅನಾಥ ಮಕ್ಕಳಿಗೆ ಆಶ್ರಯ ನೀಡಿದ್ದಳು. ಅನಾಥಾಶ್ರಮದಲ್ಲಿ ಒಟ್ಟು ಹದಿನಾರು ಅನಾಥ ಮಕ್ಕಳಿದ್ದರು.

ನಾಲ್ಕು ಜನ ಅಂಗವಿಕಲರಿದ್ದರು. ಈಗ ಶಾರಿ ಕರೆತಂದಿದ್ದ "ಮಾದೇವಿ" ಎಂಬಾಕೆಯೂ ಐದನೇಯವಳಾಗಿ ಸೇರಿಕೊಂಡಳು. ಆದರೆ ಮುಂದೆ ಮಾದೇವಿ ಎಲ್ಲರಂತೆ ಬೆಳೆಯಲಿಲ್ಲ. ಅಂಗವಿಕಲಳಾಗಿದ್ದರೂ ತನಗೆ ಎದುರಾಗುವ ಎಲ್ಲಾ ಸಮಸ್ಯೆಗಳನ್ನು ತಾನೇ ಬಗೆಹರಿದಿಕೊಳ್ಳಲು ಮುಂದಾದಳು. ಇತ್ತ ಶಾರಿ ಹಿಂದಿನದೆಲ್ಲವನ್ನು ಆಗಾಗ ಮೆಲಕು ಹಾಕುತ್ತಿದ್ದಳು, ಚೆಂಬಸನಿಗಾಗಿ ಪ್ರತಿಕ್ಷಣ ಕಾಯುತ್ತಿದ್ದಳು. ಆದರೆ ಚೆಂಬಸನಿಗೆ ಶಾರಿಯು ಜೀವಂತವಾಗಿದ್ದಾಳೋ, ಸತ್ತಿದ್ದಾಳೋ ಒಂದೂ ತಿಳಿಯದೇ ಚಡಪಡಿಸುತ್ತಿದ್ದ.

ಒಂದು ಸಾರಿ ಚೆಂಬಸ ಜೈಲಿನಲ್ಲಿರಬೇಕಾದ ವೇಳೆ ಬಾಗಿರ್ತಿ ಬರಮೇಗೌಡ ಬರೆದಿದ್ದ ಪತ್ರ ತಂದು ಚೆಂಬಸನಿಗೆ ತೋರಿಸಿದಳು. ಆ ಪತ್ರದಲ್ಲಿ ಬರಮೇಗೌಡ ಲಸಮ ನನ್ನ ಮಗ, ಹೀಗಾಗಿ ಆತನಿಗೆ ಮತ್ತು ಬಾಗಿರ್ತಿಗೆ ನನ್ನ ಆಸ್ತಿ ಹಂಚಿ ರೈತರಿಗೆ ಸೇರಬೇಕಾದ ಭೂಮಿ ಅವರಿಗೆ ಕೊಡಿ, ಕುಂಟೀರಪ ಬಂದರೆ ಆತನ ಇನ್ನೊಂದು ಕಾಲು ಮುರಿಯಿರಿ" ಎಂದೆಲ್ಲ ಬರೆದಿದ್ದನ್ನು ಕಂಡು ಚೆಂಬಸನಿಗೆ ಸಂತಸವಾಯಿತು. ಮತ್ತು ಊರಲ್ಲಿ ರೈತರು ಕಬ್ಬು ಬೆಳೆಯುವುದನ್ನು ಬಿಟ್ಟಿದ್ದ ಕೇಳಿ ಇನ್ನೂ ಸಂತಸವಾಯಿತು. ಹೀಗೆ ಜೈಲಿನಲ್ಲಿ ಚೆಂಬಸ ಹಿಂದಿನ ಘಟನೆಗಳ ನೆನೆನೆನೆದು ಹುಚ್ಚನಂತಾಗಿದ್ದ.

ಒಂದು ಸಾರಿ ಮಾಣಿಕಮ್ಮ ಕುಂತಿ ಕತೆ ಹೇಳಿದ್ದಳು ಮರುದಿನ ಅದೇ ಕತಿ ಕೇಳಿದಾಗ ಮಾದೇವಿ ನನಗೆ ಈ ಕತಿ ಬ್ಯಾಡ ಎಂದಳು ಯಾಕೆಂದಾಗ "ಕುಂತಿ ಕೂಸನ್ನು ಹೋಳೀ ದಂಡ್ಯಾಗ ಬಿಟ್ಟು ಹೋದ್ಲು ಆಕೆ ನನಗೆಬ್ಯಾಡ"[1] ಎನ್ನುವ ಮಾತು ಅರ್ಥಪೂರ್ಣವಾಗಿದ್ದು ಇಂದು ಸಮಾಜದಲ್ಲಿ ಮಗುವನ್ನು ಹೆತ್ತು ಬೀದಿಗೆಸೆಯುವ ತಾಯಿ ತಾಯಿಯಲ್ಲ ಎನ್ನುವ ನೋವು ಆಕೆಯ ಮಾತಿನಲ್ಲಿ ಗುರ್ತಿಸುತ್ತೇವೆ.

ಕಾಲಕ್ರಮೇಣ ಮಾದೇವಿ ಬೆಳೆದ ರೀತಿ ವಿಸ್ಮಯ ನಂತರ ಐದು ವರ್ಷ ಕಳೆದು ಮೇಲೆ ಚೆಂಬಸ ಬಿಡುಗಡೆ ಹೊಂದಿದ. ನಮಶ್ಶಿವಾಯ ಸ್ವಾಮಿಯ ಒತ್ತಾಯದ ಮೇರೆಗೆ ಅಮ್ಮನ ಗುಡ್ಡದ ಗವಿಗೆ ಹೋದ. ಅಲ್ಲಿ ವಿಸ್ಮಯ ಕಂಡ. ಈ ಲೋಕ ಬೆಳಗು ಚೈತನ್ಯ ಶಕ್ತಿಯೆಂದು ಇದೆ ಎಂದು ಭಾಸವಾಯಿತು. ಅಲ್ಲಿ 'ಕರೀ ಅಯ್ಯ" ಇದ್ದ. ಆತನ ಭೇಟಿ ಹೊಸ ಪ್ರಪಂಚವನ್ನು ತೋರಿಸಿಕೊಟ್ಟಿತು. ಕರೀ ಅಯ್ಯ ಚೆಂಬಸನಿಗೆ ಕೊನೆಗೆ ನಾಲ್ಕು ಹೂಕೊಟ್ಟ, ಎತ್ತರದ ಧ್ವನಿಯಲ್ಲಿ ಕಾರಣಿಕ ನುಡಿ ಆಡಿದ. "ನಿಂತಲ್ಲಿ ಹೊಸ ಶಿವಾಪುರ ರಚಿಸೋ ಇಂತಿದು ಶಿವನ ಡಂಗುರವು"[2]. ಎಂಬ ಹೇಳಿಕೆ ಚೆಂಬಸನಿಗೆ ಸ್ಫೂರ್ತಿ ತಂದಿತು. ಅಂದರೆ ಹದಿಗೆಟ್ಟ ಶಿವಾಪುರವನ್ನು ಮಾದೇವಿಯಂತವಳನ್ನು ಮುಂದಿಟ್ಟು ಹೊಸ ಶಿವಾಪುರ ರಚಿಸಲು, ಕಟ್ಟಲು ಕರೀ ಅಯ್ಯನ ಕರೆ ಚೆಂಬಸನಿಗೆ ಬಂದಿತು.

ಒಂದು ಉತ್ತಮ ಸಮಾಜ ನಿರ್ಮಿಸಲು ಸಾಧು-ಸತ್ಪುರುಷರ ಸಲಹೆ ಅತಿಮುಖ್ಯ ಎನ್ನುವ ಮಾತು ಈ ಕಾದಂಬರಿಯಲ್ಲಿ ನಮಶ್ಶಿವಾಯನ ಪಾತ್ರ ತೋರಿಸಿಕೊಡುತ್ತದೆ.

ಮುಂದೆ ದೊಡಳ್ಳಿಗೆ ನಮಶ್ಶಿವಾಯ ಚೆಂಬಸನ ಕರೆದುಕೊಂಡು ಹೋದ, ಅಲ್ಲಿ ಆತನ ಶಾರಿ ಒಂದು ಮಗು ಮಾದೇವಿ ಇದ್ದರು. ಅದಕ್ಕೂ ಮೊದಲು ಬೆಳಗಾವಿಯ ನೆಹರೂ ಮೈದಾನದಲ್ಲಿ

ಅಂಗವಿಕಲ ಮಕ್ಕಳ ಓಟದ ಸ್ಪರ್ದೆ ನಡೆದಿತ್ತು. ಅಲ್ಲಿಗೆ ಕರೆದೊಯ್ದು ಈ ಓಟದ ಸ್ಪರ್ಧೆಯಲ್ಲಿ ಮಾದೇವಿ ಭಾಗವಹಿಸಿದ್ದಳು.

ಓಟದ ಸ್ಪರ್ಧೆಯಲ್ಲಿ ಮಾದೇವಿ ಎಲ್ಲರಿಗಿಂತ ಮುಂದಿದ್ದಳು. ಅಷ್ಟರಲ್ಲಿ ಕೊನೆಯಲ್ಲಿ ಒಂದು ಮಗು ಕಿಟಾರನೆ ಕಿರಿಚಿ ಎಡಗಾಲು ಹಿಡಕೊಂಡು ಒದ್ದಾಡುತ್ತಿತ್ತು. ಇದನ್ನು ಕಂಡ ಮಾದೇವಿ ಆ ಮಗುವಿನತ್ತ ಓಡಿ ಬಂದು ಮಗುವನ್ನು ಸಂತೈಸಿ ಮತ್ತು ಆಕೆಯನ್ನು ಕರೆದುಕೊಂಡು ಓಡಲು ಮುಂದಾದರು. ಸ್ಪರ್ಧೆಯಲ್ಲಿದ್ದ ಎಲ್ಲ ಮಕ್ಕಳು ಮಾದೇವಿ ಅನುಸರಿಸಿದಳು. ಬಿದ್ದ ಮಗುವಿಗೆ ಎಲ್ಲರೂ ಆಸರೆಯಾದರು. ಕೊನೆಗೆ ಏಕಕಾಲಕ್ಕೆ ಗುರಿ ತಲುಪಿ ಎಲ್ಲರೂ ಪ್ರಥಮ ಬಹುಮಾನ ಪಡೆದರು. ಈ ಘಟನೆ ಭಾರತದ ಆರ್ಥಿಕ ಸ್ಥಿತಿಗತಿ ತೋರಿಸುವುದಾಗಿದ್ದು ಬಿದ್ದವರ ಎತ್ತುವ ಚಿಂತನೆ ಒಳಗೊಂಡಿದೆ. ಸ್ಪರ್ಧೆಗೆ ಮಾದೇವಿ ತಂದೆ ಎನಿಸಿದ್ದ ಮಂತ್ರಿ ಕುಂಟೀರಪನೇ ಪ್ರಶಸ್ತಿ ವಿತರಿಸಿದ.

ಕೊನೆಗೆ ಅಗಲಿದ್ದ ಎಲ್ಲರೂ ಒಂದಾದರು. ಚೆಂಬಸವ ಈ ತನಕ ಕಳೆದುಕೊಂಡಿದ್ದ ಶಿವಾಪುರವ ನೆನೆದು ಶಿವಾಪುರದ ಕಡೆಗೆ ಪಯಣ ಬೆಳಸಿದ. ಶಿವಾಪುರ ಈಗ ಬದಲಾಗಿತ್ತು. ತೊರೆ ಬಂದು ಹೋದ ಸಮುದ್ರ ನೀರಾಗಿತ್ತು. ಚೆಂಬಸನ ಸೂಚನೆಯಂತೆ ಬಾಗಿರ್ತಿ ಗ್ರಾಮ ಪಂಚಾಯ್ತಿ ಅಧ್ಯಕ್ಷಳಾದಳು. ದಲಿತರಿಗೆ ನಿರು ಸೇದಲು ಅವಕಾಶ ಕಲ್ಪಿಸಲಾಗಿತ್ತು ಸ್ಮಶಾನದಲ್ಲಿ ಎಲ್ಲ ಜಾತಿಯವರು ಒಂದೇ ಕಡೆ ಶವಸಂಸ್ಕಾರ ಮಾಡುವಂತಾಯಿತು. ನಮಶ್ಶಿವಾಯನ ಆಜ್ಞೆಯಂತೆ ನಿರ್ವಾಣೆಪ್ಪನ ಗುಡಿಗೆ ಶಾರು ಮತ್ತು ಚೆಂಬಸ ಹೊರಟರು. ಅಷ್ಟರಲ್ಲಿ ಮಾದೇವಿ ಲಸಮನೊಂದಿಗೆ ಬಂದಳು. ಆಗ ನಮಶ್ಶಿವಾಯ ಸ್ವಾಮಿ ಮಾತು ಮುಂದುವರೆಸಿದ. ಇನ್ನು ಶಿವನ ಡಂಗುರ ಕೇಳು! ಎಂದು ಹೇಳುತ್ತಾ...

> ನಿನ್ನ ಭಾಗ್ಯದ ಮಗಳು ಬಾಗಿಲಲ್ಲಿ ನಿಂತಾಳು
> ನಿಂತಲ್ಲಿ ಹೊಸ ಶಿವಾಪುರವ ರಚಿಸೋ"[೮]

ಇದು ನಿನಗೆ ಶಿವನ ಡಂಗುರವೆಂದ. ಅಂದರೆ ಅಕ್ಕಮಾದೇವಿಯಂತ ಮಗಳು ಮನಿ ಬಾಗಿಲಿಗೆ ಬಂದಾಳ ಹೊಸ ಹೊಸ ಚಿಂತನೆಯುಳ್ಳವಳು ಆಕೆ. ನಿಂತಲ್ಲಿ ಹೊಸ ಶಿವಾಪುರ ಕಟ್ಟಿರಿ. ಭ್ರಷ್ಟಾಚಾರ, ಕೊಲೆ, ಸುಲಿಗೆ ಇದ್ಯಾವದೂ ಇಲ್ಲದ ಶಿವಾಪುರ ಕಟ್ರಿ ಎಂದು ಹಿಂದ ನಿನಗೆ ಗುಹೆಯಲ್ಲಿ ಸ್ವತಃ ಶಿವಲಿಂಗ ಸ್ವಾಮಿ ನಿನಗೆ ಹೇಳ್ಯಾನ ಇದೇ ನಿನಗೆ ಶಿವನಡಂಗುರ ಎಂದು ನಮಶ್ಶಿವಾಯ ಸ್ವಾಮಿ ಹೇಳಿದ.

ಕೊನೆಗೆ ತುಂಗವ್ವ ಮಾದೇವಿ ಬಂದ ಮೇಲೆ ಹೊಳ್ಯಾಗಿನ ಯಕ್ಷಿ ಅದು ಓಡಿ ಹೋಯ್ತು" ಎನ್ನುವ ಮಾತು ಈವರೆಗೆ ಶಿವಾಪುರಕ್ಕೆ ಅಂಟಿಕೊಂಡಿದ್ದ ಪೀಡೆಗಳು ಹೊರಟು ಹೋದವು ಎಂಬುದನ್ನು ಹೇಳಿದಳು. ಹೀಗೆ ಕಂಬಾರರ ಶಿವನ ಡಂಗುರವು ಭ್ರಷ್ಟಾಚಾರ, ಕೊಲೆ, ಸುಲಿಗಿ ಇದ್ಯಾವುದು ಇಲ್ಲದ ಶಿವಾಪುರ ಕಟ್ಟುವ ಕನಸನ್ನು ಈ ಕಾದಂಬರಿ ಮೂಲಕ ಕಟ್ಟಿಕೊಟ್ಟಿದ್ದಾರೆ.

ಇಲ್ಲಗಿ ಶಿವಶಿವ ಇಲ್ಲೀಗಿ ಹರಹರ

ಶಿವನ ಡಂಗುರ ಇಲ್ಲಿ ಸುರುವಾಗಲೋ"[೧೦]

ಎನ್ನುವಲ್ಲಿ ಕಾದಂಬರಿ ಅಂತ್ಯಗೊಳ್ಳುತ್ತದೆ. ಹೀಗೆ ಇದರ ಸಾರಾಂಶ ಗುರ್ತಿಸಬಹುದು ಹೀಗೆ ಚಂದ್ರಶೇಖರ ಕಂಬಾರರ ಶಿವನ ಡಂಗುರ ಕಾದಂಬರಿಯಲ್ಲಿ ಓದಿನ ಸುಖದ ಸಮೃದ್ಧಿಯೇ ಇದೆ. ಸುಮ್ಮನೆ ಓದಿದರೂ ಇಲ್ಲಿರುವ ಕಥನ ಶೈಲಿಗಳು ಮನಸನ್ನು ಸೆಳೆಯುತ್ತವೆ. ಓ.ಎಲ್. ನಾಗಭೂಷಣಸ್ವಾಮಿ ಅವರು ಹೇಳುವಂತೆ, "ಕಂಬಾರರ ಶಿವನ ಡಂಗುರದಲ್ಲಿ ಓದಿನ ಸುಖದ ಸಮೃದ್ಧಿ ಇದ್ದು ಚಕೋರಿ ನಂತರ ಅವರ ಮನಸ್ಸು ನುಡಿ ಬರೆದ ಉತ್ತಮ ಕಾದಂಬರಿ ಇದಾಗಿದೆ. ಕರಿಮಾಯಿಯ ಇನ್ನೊಂದು ಮಗ್ಗಲು 'ಸಿಂಗಾರೆವ್ವ ಮತ್ತು ಅರಮನೆಯ ಕಳ್ಳುಬಳ್ಳಿ ಸಂಬಂಧಿ 'ಶಿಖರ ಸೂರ್ಯನಿಗಿಂತ ಹೆಚ್ಚು ಸಹಜ ರೂಪ ಪಡೆದ ಕಾದಂಬರಿ ಇದು"[೧೧] ಎಂಬ ಹೇಳಿಕೆ ಅರ್ಥಪೂರ್ಣವಾದದ್ದು. ವಸಾಹತು ಮತ್ತು ಆಧುನಿಕತೆಯನ್ನು ವಿರೋಧಿಸಿ ದೇಶಿಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾದಂಬರಿ ಇದಾಗಿದೆ. ಪುಸ್ತಕದ ಮುಖಪುಟದಲ್ಲಿ ಆಧುನಿಕ ಪ್ರತೀಕವಾಗಿ ಪಾಶ್ಚಾತ್ಯ ವಾಹನ ಜೀಪು ಇದ್ದು ಇದನ್ನು ದೇಶಿಯ ಸಂಸ್ಕೃತಿಯ ಪ್ರತೀಕವಾದ ಗೂಳಿಯು ಗುದ್ದುತ್ತಿದ್ದು, ವಸಾಹತು ಪ್ರತೀಕವಾದ ಈ ವಾಹನವನ್ನು ವಿರೋಧಿಸುತ್ತಿರುವುದನ್ನು ಕಾಣಬಹುದಾಗಿದೆ.

ಕೊನೆ ಟಿಪ್ಪಣಿಗಳು

೧. ಪ್ರಜಾವಾಣಿ ದಿನಪತ್ರಿಕೆ: ಮುಕ್ತಛಂದ ವಿಭಾಗ, ದಿ ೩೦, ಆಗಸ್ಟ್ ೨೦೧೫, ಪುಟ-೩

೨. ಚಂದ್ರಶೇಖರ ಕಂಬಾರ: ಶಿವನ ಡಂಗುರ ಕಾದಂಬರಿ, ಅಂಕಿತ ಪ್ರಕಾಶನ ಬೆಂಗಳೂರು, ೨೦೧೫. ಪುಟ-೪೦

೩. ಅದೇ ಪುಟ-೭೭

೪. ಅದೇ ಪುಟ-೨೧೯

೫. ಅದೇ ಪುಟ-೨೨೧

೬. ಅದೇ ಪುಟ-೨೨೪

೭.ಅದೇ ಪುಟ-೨೫೧

೮.ಅದೇ ಪುಟ-೨೭೦

೯. ಅದೇ ಪುಟ-೨೭೧

೧೦.ಅದೇ ಪುಟ-೨೭೧

೧೧.ನಾಗಭೂಷಣ ಸ್ವಾಮಿ. ಓ.ಎಲ್. ಬಗೆ ಬಗೆಯ ಡಿಸೈನುಗಳ ಕಥೆಯ ನೇಯ್ಗೆ, ಪ್ರಜಾವಾಣಿ ದಿನಪತ್ರಿಕೆ, ಮುಕ್ತಛಂದ ವಿಭಾಗ- ಪುಟ. - ೪

ಅಧ್ಯಾಯ- ೪

ಗ್ರಾಮೀಣ ಬದುಕಿನ ಮೇಲೆ ಆಧುನಿಕತೆ ಉಂಟುಮಾಡಿದ ಪರಿಣಾಮಗಳು

ಅಧ್ಯಾಯ- ೪

ಗ್ರಾಮೀಣ ಬದುಕಿನ ಮೇಲೆ ಆಧುನಿಕತೆ ಉಂಟುಮಾಡಿದ ಪರಿಣಾಮಗಳು

ಆಧುನಿಕತೆ ಎಂಬುದು ಹೊಸತನ ಎಂಬ ಅರ್ಥ ಕೊಡುವಂತದ್ದಾಗಿದ್ದು ಇಂದು ಎಲ್ಲ ಕ್ಷೇತ್ರಗಳಲ್ಲಿ, ಎಲ್ಲ ಭಾಷೆ, ಸಮಾಜ, ಸಂಸ್ಕೃತಿಗಳಲ್ಲಿ ಈ ಆಧುನಿಕತೆ ಹಾಸು ಹೊಕ್ಕಾಗಿರುವುದನ್ನು ಕಾಣುತ್ತೇವೆ. ಪಾಶ್ಚಾತ್ಯರ ಪ್ರಭಾವದಿಂದಾಗಿ ಭಾರತದಲ್ಲಿಯೂ ಇದು ತನ್ನ ಪ್ರಭಾವವನ್ನು ಬೀರಿದೆ. ಆಧುನಿಕತೆಯ ಪ್ರಭಾವದಿಂದಾಗಿ ನಮ್ಮದೆನ್ನುವ ಕಲೆ, ಸಾಹಿತ್ಯ, ಸಂಸ್ಕೃತಿ, ಸಮಾಜ ಮತ್ತು ಗ್ರಾಮೀಣ ಬದುಕನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಎಂಬುದು ಗೊತ್ತಿದ್ದರೂ ನಾವು ಅನಿವಾರ್ಯವಾಗಿ ಈ ಆಧುನಿಕತೆಗೆ ಅಂಟಿಕೊಳ್ಳುತ್ತಿದ್ದೇವೆ. "ಆಧುನಿಕತೆ ಅಥವಾ ಆಧುನಿಕ ದೃಷ್ಟಿಕೋನವೆಂಬುದು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ೧೮ನೆಯ ಶತಮಾನದಿಂದ ಪ್ರಾರಂಭವಾದ ನಗರೀಕರಣ, ಔದ್ಯೋಗಿಕರಣ, ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಾದ ಅಸಾಧರಣ ಪ್ರಗತಿ ಇವುಗಳ ರೂಪಿಸಿದ ದೃಷ್ಟಿಕೋನವಾಗಿದೆ"[೧] ಆಧುನಿಕತೆಯು ಬ್ರಿಟಿಷರ ವಸಾಹತು ಪ್ರಭಾವದಿಂದ ಭಾರತಕ್ಕೆ ಕಾಲಿಟ್ಟರುವುದನ್ನು ಕಾಣುತ್ತೇವೆ. ಆಧುನಿಕತೆ ಎಂಬುದನ್ನು ಇಂಗ್ಲೀಷನಲ್ಲಿ "I Modernity " ಎಂದು ಕನ್ನಡದಲ್ಲಿ ಹೊಸತನ ನವೀನತೆ"[೨] ಗುರ್ತಿಸುತ್ತೇವೆ.

ಈ ಆಧುನಿಕತೆ ಎಂಬುದು ಗ್ರಾಮೀಣ ಬದುಕಿನ ಮೇಲೆ ಅನೇಕ ಪರಿಣಾಮಗಳನ್ನು ಬೀರುತ್ತಿದೆ. ಕೆಲವು ಒಳಿತನ್ನು ಉಂಟುಮಾಡಿದರೆ ಹೆಚ್ಚಾಗಿ ಕೆಡಕನ್ನು ಉಂಟುಮಾಡುವುದನ್ನು ಕಾಣಬಹುದು, ಜಾತಿ ವಿರುದ್ಧ ಧ್ವನಿ, ಅಂತರ್ಜಾತಿ ವಿವಾಹದಂತ ಒಳ್ಳೆಯ ಚಿಂತನೆಗಳಿದ್ದರೆ ಮತ್ತು ಪ್ರಭುತ್ವದ ವಿರುದ್ಧ ಧ್ವನಿಗಳು ಸಮಾಜದಲ್ಲಿ ಬದಲಾವಣೆಯ ಚಿಂತನೆಗಳು ಮಾಡುತ್ತಿವೆ. ಆದರೆ ಇದೇ ಆಧುನಿಕತೆಯಿಂದ ಶಿಕ್ಷಣದಲ್ಲಿ ಮತ್ತು ದೇಶಿಯ ಚಿಂತನೆಗೆ ಪೆಟ್ಟನ್ನು ಕೊಡುತ್ತಿರುವುದನ್ನು ಕಾಣುತ್ತೇವೆ. ಸ್ವಚ್ಛಂದವಾಗಿರುವ ಹಳ್ಳಿಯ ಸಂಸ್ಕೃತಿಗಳು ಆಧುನಿಕತೆಯಿಂದಾಗಿ ಅನೇಕ ದುಷ್ಪರಿಣಾಮಗಳನ್ನು ಎದುರಿಸುತ್ತಿವೆ. ಈ ಕುರಿತ ಅಂಶಗಳನ್ನು ನಾವು ಚಂದ್ರಶೇಖರ ಕಂಬಾರರ 'ಶಿವನ ಡಂಗುರ' ಕಾದಂಬರಿಯಲ್ಲಿ ಕಾಣಬಹುದು.

ಕಂಬಾರರ ಬರಹದ ಮುಖ್ಯ ಕೇಂದ್ರ ಗ್ರಾಮೀಣ ಬದುಕು ಮತ್ತು ದೇಶಿ ಚಿಂತನೆ ಯಾಗಿದ್ದರೆ ಇನ್ನೊಂದೆಡೆ ನಗರವಾಗಿದೆ. ಈ ನಗರದ ಜೀವಾಳ ಆಧುನಿಕತೆಯೇ ಆಗಿದ್ದ ಇದು ದುರಂತದ ಕಡೆ ಕರೆದುಕೊಂಡು ಹೋಗುತ್ತಿರುವ ಸಾಧನ ಕೂಡಾ ಆಗಿದೆ. ಎಂಬುದನ್ನು ನಾವು ಕಂಬಾರರ ಬರಹದ ಮೂಲಕ ಗುರ್ತಿಸಬೇಕು. ಆಧುನಿಕತೆ ಚಿತ್ರಣವು ಚಿದ್ರ ವ್ಯಕ್ತಿಗಳ ಒಡೆದ ಕನಸುಗಳ ತಾಣವಾಗಿದೆ. ಶಿವಾಪುರ ಚಿತ್ರಣ ಕೊಡುವಾಗ ಕಂಬಾರರ ಬರವಣಿಗೆ ಎಷ್ಟು ಉತ್ಸಾಹ ತಾಳುತ್ತದೆಯೋ ಈ ಆಧುನಿಕತೆ ಕುರಿತು ಹೇಳುವಾಗ ಅಷ್ಟೇ ವಿಷಾದಗೊಳ್ಳುತ್ತದೆ. ಅಂದರೆ ಗ್ರಾಮೀಣ ಬದುಕಿನ ಮೇಲೆ ಆಧುನಿಕತೆ ತನ್ನ ಪ್ರಭಾವ ಬೀರುತ್ತಿರುವುದನ್ನು ಈ ಆಧುನಿಕತೆಯಿಂದ ನಾವು ಎದುರಿಸುವ ಸವಾಲುಗಳೇನು? ಮತ್ತು ನಮ್ಮ ಗ್ರಾಮೀಣ ಬದುಕಿನ ಮೇಲೆ ಯಾವ ರೀತಿ ಪರಿಣಾಮಬೀರುತ್ತಿದೆ?

ಎಂಬುದನ್ನು ಕಂಬಾರರು 'ಶಿವನ ಡಂಗುರ' ಕಾದಂಬರಿಯನ್ನು ಮುಂದಿಟ್ಟುಕೊಂಡು ಹೇಳ ಹೊರಟಿರುವುದನ್ನು ಕಾಣುತ್ತೇವೆ. ಶಿವಾಪುರ ಎನ್ನುವ ಹಳ್ಳಿಯೊಂದು ಆಧುನಿಕತೆಗೆ ಮೈದೆರೆದುಕೊಳ್ಳುವಾಗಿನ ಆತಂಕಗಳನ್ನು ಈ ಕಾದಂಬರಿ ಮೂಲಕ ಚಿತ್ರಿಸಿರುವುದನ್ನು ಕಾಣಬಹುದು.

"ಆಧುನಿಕತೆಯ ಮುಖ್ಯ ಸ್ವಭಾವ ವಾಸ್ತವವನ್ನು ಮಾತ್ರ ನಂಬುವುದು, ಆದರೆ ಕಂಬಾರರ ಕಾವ್ಯದಲ್ಲಿ ಬರವಣಿಗೆಯಲ್ಲಿ ನಂಬುಗೆಯ ಹಾದಿ ನಿರ್ಮಾಣಗೊಂಡಿದ್ದು ಪುರಾಣ ಕನಸು ಕಲ್ಪನೆಗಳಿಂದ"[೩] ಎಂಬುದು ವಿಕ್ರಂ ವಿಸಾಜಿಯವರ ಮಾತಾಗಿದ್ದು ಈ ಮಾತು ಕಂಬಾರರ ಶಿವನ ಡಂಗುರ ಕಾದಂಬರಿಗೂ ಅನ್ವಯವಾಗುತ್ತದೆ. ಏಕೆಂದರೆ ಕಂಬಾರರ ಕಾವ್ಯ, ನಾಟಕ, ಕಾದಂಬರಿಗಳು ಪ್ರಾರಂಭವಾಗುವುದು ಈ ಪುರಾಣ ಕತೆಗಳಿಂದ. ಇಂತಹ ಅಂಶಗಳು ಆಧುನಿಕತೆಯನ್ನು ವಿರೋಧಿಸುವುದನ್ನು ಕಾಣಬಹುದು. ಕಂಬಾರರು ಕಾದಂಬರಿ ಮೊದಲಿಗೆ ಹೇಳುವಂತೆ ಶಿವಾಪುರಕ್ಕೆ ಚರಿತ್ರೆ ಇರಲಿಲ್ಲ, ಇದ್ದದ್ದು ಪುರಾಣ ಮಾತ್ರ ಎಂಬ ಹೇಳಿಕೆ ಮೇಲಿನ ಮಾತುಗಳಿಗೆ ಪುಷ್ಟಿ ಕೊಡುತ್ತದೆ. ಜೋಗ್ತಿಯರ ಹಾಡಿನಲ್ಲಿ ಬರುವ 'ಆಲದ ಮರ' ಹಳ್ಳಿಯ ಗತ ವೈಭವವನ್ನು ತಿಳಿಸುತ್ತದೆ. ಜೋಗತಿ ಹಾಡಿನಲ್ಲಿ "ಶಿವದೇವರು ಮತ್ತು ಪಾರ್ವತಿದೇವಿಯರಿಂದ ದೇವಲೋಕ ನಿರ್ಮಾಣವಾಗಿ, ನಂತರ ಸೂರ್ಯ-ಚಂದ್ರರು ಹುಟ್ಟಿ ಆರುಮೂರು ಮೂಲೆಯ ಭೂಲೋಕ ನಿರ್ಮಾಣವಾಯಿತೆನ್ನುವ" ಬಗೆ ಹಾಗೂ ವಿಶ್ವಕರ್ಮರಿಂದ ನಿರ್ಮಾಣವಾಗುವ ಜಾನಪದ ಕಲ್ಪನೆ ಮೂಲಕ ಶಿವಾಪುರವನ್ನು ಕಟ್ಟಿಕೊಡುತ್ತಿದ್ದು, ಇಂತಹ ಸ್ವಚ್ಛಂದ ಹಳ್ಳಿ ಅಮೇರಿಕ ಜಾಕ್ಸನ್ ಕಂಪನಿ ಮತ್ತು ಕುಂಟೀರಪ್ಪನಂತಹ ಶಿವಾಪುರದವರಲ್ಲರಿಂದ ಮಲೀನವಾದ ಬಗೆ ಆಧುನಿಕತೆಯು ಗ್ರಾಮೀಣ ಬದುಕಿನ ಮೇಲೆ ಉಂಟುಮಾಡಿದ ಪರಿಣಾಮವನ್ನು ತಿಳಿಸಿಕೊಡುತ್ತದೆ.

ಕಾದಂಬರಿಯಲ್ಲಿ ಬರುವ 'ಮಲ್ಲಿಮಡು' ಪ್ರದೇಶ ತಗ್ಗುದಿಣ್ಣೆಗಳಿಂದ ಕೂಡಿದ್ದು ಜವುಗು ಪ್ರದೇಶವಾಗಿತ್ತು. ಪೂರ್ತಿ ಒಣಗಿಸಿ ಇದರ ಮೇಲ ಇಂಗ್ಲೀಷ್ ಸ್ಕೂಲು, ಕಾಲೇಜು ಕಟ್ಟಬಹುದಲ್ಲಾ ಎಂಬ ದುರಾಲೋಚನೆ ಹೊಳೆದದ್ದು ಬರಮೇಗೌಡನಿಗೆ. ಅದಕ್ಕಾಗಿ ನೀರು ಹೀರುವ ನಿಲಗಿರಿ ಬೀಜ ಚೆಲ್ಲದ. ಇವು ದೈತ್ಯಾಕಾರವಾಗಿ ಬೆಳೆದು ಭಯಾನಕ ಭೂತಗಳಾಗಿ ನಿಂತಂತೆ ಕಾಣುವ ಕಂಬಾರರ ಕಲ್ಪನೆ ಆಧುನಿಕತೆ ಎನ್ನುವುದೇ ಅವರಿಗೆ ಭೂತವಾಗಿ ಕಾಡಿದ್ದು, ಇದನ್ನು ಹೇಗೆ ಹೊಡೆದೋಡಿಸಬೇಕು ಎಂಬ ಚಿಂತನೆಯಲ್ಲಿ ಅವರ ಬರಹ ಸಾಗಿ ಬಂದಿರುವುದನ್ನು ಕಾಣಬಹುದು. ಶಿವನ ಡಂಗುರ ಕಾದಂಬರಿಯಲ್ಲಿ ಇಂತಹ ಹತ್ತು ಹಲವು ಅಂಶಗಳು ಕಂಡು ಬರುತ್ತಿದ್ದು ಒಲವು ಗ್ರಾಮೀಣ ಬದುಕನ್ನು ನಾಶಗೊಳಿಸುತ್ತಿರುವ ಚಿತ್ರಣವನ್ನು ಕಂಬಾರರು ಈ ಕಾದಂಬರಿ ಮೂಲಕ ತಿಳಿಪಡಿಸಲು ಮುಂದಾದ ಬಗೆಯನ್ನು ಈ ಮುಂದಿನ ಚರ್ಚೆ ವಿಶ್ಲೇಷಣೆಗಳ ಮೂಲಕ ಗುರ್ತಿಸಬಹುದು.

ಪುರಾಣವಾಗಿದ್ದ ಶಿವಾಪುರ ಇತಿಹಾಸವಾಗಿದ್ದು, ಬರಮೇಗೌಡನು ಶಿವಾಪುರದಲ್ಲದ ವರನ್ನು ಒರಮಾಡಿಕೊಂಡಾಗಿನಿಂದ ಮಲ್ಲಿಮಡುವಿನಲ್ಲಿ ತ್ಯಾಜ್ಯ ತುಂಬಿದ್ದು ತ್ಯಾಜ್ಯ ಎಲ್ಲೆಡೆ ಹರಡಿ ರೋಗ, ರುಜೀನು ಮತ್ತು ವಿಕೃತ ಸಂತಾನಗಳು ಹುಟ್ಟಿಕೊಂಡಿದ್ದು ಶಿವಾಪುರದಲ್ಲಿ ಬರಮೇಗೌಡನ ಭ್ರಷ್ಟ

ಆಡಳಿತದಿಂದ ಭ್ರಷ್ಟರು ಹುಟ್ಟಿಕೊಂಡು ಕೊಲೆಸುಲಿಗೆ ನಡೆಸಿದ್ದು, ಹಾಗೆ ಕುಂಟೀರಪನಂತ ಮತ್ತು ತಾರಾ, ಬಿಗ್‌ಬಾಸ್‌ನಂತವರು ಊರಿಗೆ ಕಾಲಿಟ್ಟಿದ್ದು ಇದೆಲ್ಲ ಅಂಶಗಳು ಆಧುನಿಕತೆಯಿಂದ ಒಂದು ಹಳ್ಳಿಯನ್ನು ಹೇಗೆ ನಾಶ ಮಾಡುತ್ತಿವೆ ಎಂಬ ಅಂಶಗಳನ್ನು ಕಾದಂಬರಿ ಮೂಲಕ ವಿಶ್ಲೇಷಣೆಗೈಯಬಹುದು.

"ಬ್ರೀಟಿಷರು ಶಿವಾಪುರಕ್ಕೆ ಕಾಲಿಡುವ ಮೊದಲು ಜನರ ಬದುಕು ಅಂದಚೆಂದವಾಗಿತ್ತು. ಕೃಷಿ ಚಟುವಟಿಕೆ ಭರದಿಂದ ಸಾಗುತ್ತಿದ್ದವು. ಆಗಿನ ಜನರಿಗೆ ದೇವರು, ದೈವ ಅಂತ ಭಯ ಇತ್ತು. ಎಲ್ಲರ ಬದುಕಿನಲ್ಲಿ ತೃಪ್ತಿ ಅಂತ ಇತ್ತು. ಭೂಮಿ ಈ ಜನಗಳ ತಾಯಿಯಾಗಿತ್ತು. ಜೀವನ ಮುನ್ನಡೆಸಬಲ್ಲ ಮೌಲ್ಯಗಳು ಮತ್ತು ಅವುಗಳನ್ನು ಉಳಿಸಿಕೊಳ್ಳಬಲ್ಲ ಜನ ಅಲ್ಲಿದ್ದರು. ಆದರೆ ಶಿವಾಪುರದ ಜೀವನ ಲಯ ತಪ್ಪಿದೆ. ಸೊಕ್ಕಿ ಹರಿಯುತ್ತಿದ್ದ ನದಿ, ತೆರೆಗಳೀಗ ಇಲ್ಲ. ಮೇಲಾಗಿ ಶಿವಾಪುರದ ದೇವರುಗಳು ಕೂಡಾ ಮಳೆಬೆಳೆ ವಿಚಾರವಾಗಿ ಮಾತನಾಡದೆ ಚುನಾವಣೆಗಳ ಭವಿಷ್ಯ ನುಡಿಯುತ್ತಿವೆ. ಪಕ್ಕದೂರಿನಲ್ಲಿ ಪೋಲೀಸ್ ಠಾಣೆ ಬಂದಿದೆ"[೪] ಎಂಬ ಹೇಳಿಕೆ ಕಾದಂಬರಿಯಲ್ಲಿದ್ದು ಇದು ಶಿವಾಪುರದ ಗತವೈಭವ ಮೊದಲು ಹೇಳಿ ನಂತರ ಅದು ಆಧುನಿಕತೆಯಿಂದ ಒದಲಾಗುತ್ತಾ ಬರುವ ಚಿತ್ರಣವನ್ನು ಕಂಬಾರರು ಕೊಡುವ ಪ್ರಯತ್ನ ಮಾಡಿದ್ದಾರೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪುರಾಣ ಪ್ರಸಿದ್ದವಾದ ಒಂದು ಹಳ್ಳಿ ವಸಾಹತುವಿನಿಂದ ಮತ್ತು ಆಧುನಿಕತೆಯಿಂದ ಹೇಗೆ ನಲುಗುತ್ತಿದೆ. ಪೋಲೀಸ್ ಠಾಣೆ ಈಗ ಬಂದಿದೆ ಎಂದರೆ ಅಲ್ಲಿ ಈಗ ಮೋಸ, ವಂಚನೆ, ಕೊಲೆಸುಲಿಗೆಗಳು ನಡೆಯುತ್ತಿವೆ. ಹಿಂದೆ ಇವು ಸ್ವಲ್ಪ ಇದ್ದರೂ ಇವನ್ನು ತೊಡೆದು ಹಾಕುವ ಶಕ್ತಿ ಆ ಊರಿಗೆ ಇತ್ತು ಈಗಿಲ್ಲ ಕಾರಣ ಆಧುನಿಕತೆಯಿಂದ ತನ್ನ ಎಲ್ಲೇ ಮೀರಿದೆ ಎಂದೇ ಅರ್ಥವಾಗುತ್ತದೆ. "ಶಿವಾಪುರಕ್ಕೆ ಆಗಮಿಸುತ್ತಿರುವ ಹೊಸತು ಸುಮ್ಮನೆ, ಬರುತ್ತಿಲ್ಲ. ಊರಿನ ಸಾಂಪ್ರದಾಯಕತೆಯನ್ನು ಅಳಿಸುತ್ತ ಬರುತ್ತಿದೆ. ಶಿವಾಪುರದಂತ ಹಳ್ಳಿಯ ಸಂಸ್ಕೃತಿಗೆ ಈ ಆಧುನಿಕತೆಯಿಂದ ಅತಂತ್ರ ಸ್ಥಿತಿ ಒದಗಿದೆ"[೫] ಎಂಬ ವಿಕ್ರಂ ವಿಸಾಜಿಯವರ ಮಾತು ಇಲ್ಲಿ ಸತ್ಯವೆನಿಸುತ್ತದೆ.

ಬರಮೇಗೌಡ ಶಿವಾಪುರದ ಒಡೆತನ ನಡೆಸುತ್ತಿದ್ದ. ಆತನದು ದುರಾಡಳಿತವಾಗಿತ್ತು. ಈತನ ತಮ್ಮ ಈಸುರಗೌಡ ದೇಶಕ್ಕಾಗಿ ಹೊರಾಡುತ್ತಿದ್ದ. ಹುದಲಿಯಿಂದ ಯರಗಟ್ಟಿ ಮತ್ತು ಉತ್ತರಕ್ಕೆ ಅಥಣಿ ನಿಪ್ಪಾಣಿವರೆಗಿನ ಸೀಮೆಯಲ್ಲಿ ಬ್ರಿಟಿಷ್ ಸೈನ್ಯಕ್ಕೆ ಅಸಾಧ್ಯ ತಲೆನೋವಾಗಿದ್ದ ಸಣ್ಣ ಚಳುವಳಿಗಾರರ ಒಂದಿನ ನಾಯಕನಾಗಿದ್ದ ಕೊನೆಗೆ ಬ್ರಿಟೀಷರಿಂದ ಸಾವಿಗಿಡಾದ. ಇಲ್ಲಿ ಎರಡೂ ಪಾತ್ರಗಳನ್ನು ಪರಾಮರ್ಶಿಸಿದರೆ ದೇಶದ ಸಂಪತ್ತಿನ ರಕ್ಷಣೆಗೆ ನಿಂತವ ಈಸುರಗೌಡನಾದರೆ ಅದೇ ಆತನ ಅಣ್ಣ ಬರಮೇಗೌಡ ಅಭಿವೃದ್ಧಿಯ ಹೆಸರಿನಲ್ಲಿ ದೇಶಕ್ಕೆ ಕಾಲಿಟ್ಟ ಭ್ರಷ್ಟರಿಗೆ (ತಾರಾ ಮತ್ತು ಬಿಗ್‌ಬಾಸ್) ಸಹಾಯಕನಾಗಿ ನಿಂತವ. ಅಂದರೆ ಆಧುನಿಕತೆಯನ್ನು ಸ್ವಾಗತ ಮಾಡಿಕೊಳ್ಳುವ ಬರಮೇಗೌಡ ತನ್ನದನ್ನು ಕಳೆದುಕೊಳ್ಳುತ್ತಿದ್ದೇನೆ ಎಂಬ ಅರಿವು ಇಲ್ಲದೇ ಊರನ್ನು ಸ್ಮಶಾನ ಮಾಡಹೊರಟ ಚಿತ್ರಣ ಆಧುನಿಕತೆಯ ಪ್ರಭಾವವನ್ನು ಚಿತ್ರಿಸುತ್ತದೆ.

ಮದುವೆ ವಿಚಾರವಾಗಿ ಬರಮೇಗೌಡ ಪಟ್ಟಭದ್ರ ಹಿತಾಸಕ್ತಿ ಮತ್ತು ಆಧುನಿಕತೆಯಿಂದ ತಾನು ಮೋಹಿಸಿದ ತುಂಗಿಯನ್ನು ಮದುವೆಯಾಗದೇ ಹೊರಕೆರಿಯಲಿಟ್ಟ. ಆದರೆ ಅದೇ ಆತನ ತಮ್ಮನ ಮಗನಾದ ಚೆಂಬಸ ಪ್ರಗತಿಪರ ಚಿಂತನೆಗೈದು ಆಧುನಿಕೋತ್ತರ ಚಿಂತನೆಗೈದು ಶಾರಿ ಎನ್ನುವ ಹೆಣ್ಣನ್ನು ಪ್ರೀತಿಸಿದ, ಕೊನೆಗೆ ಆಕೆಯನ್ನು ಮದುವೆಯಾದ ಬರಮೇಗೌಡನ ಪಾತ್ರ ಆಧುನಿಕತೆ ಗುರ್ತಿಸಿದರೆ ಚೆಂಬಸನ ಪಾತ್ರ ಆಧುನಿಕತೆ ಮತ್ತು ಮೌಢ್ಯತೆ ಮೆಟ್ಟಿ ನಿಂತು ಪ್ರಗತಿಪರ ಚಿಂತನೆಗೆ ಒಳಪಡುತ್ತದೆ. ಈ ಪ್ರಗತಿಪರ ಚಿಂತನೆಯೇ ಆಧುನಿಕತೆಯನ್ನು ಮೆಟ್ಟಿನಿಲ್ಲಲು ಸಾಧ್ಯ ಎಂಬುದು ಕಂಬಾರರ ಚಿಂತನೆಯಾಗಿದೆ.

ಬರಮೇಗೌಡ ಶಿವಾಪುರದಲ್ಲಿ ತನ್ನ ದುರಾಡಳಿತ ಮತ್ತು ದುರ್ವ್ಯಸನದಿಂದ ಕಾಲ ಕಳೆಯುತ್ತಿರಬೇಕಾದರೆ ಕುಂಟೀರಪನೆಂಬುವವನು ಬರಮೇಗೌಡನ ಅಳಿಯನಾಗಿ (ಬಾಗಿರ್ತಿ ಗಂಡನಾಗಿ) ಊರಿಗೆ ಕಾಲಿಟ್ಟು ಊರನ್ನು ಸ್ಮಶಾನ ಮಾಡ ಹೊರಟ ಅಂದರೆ ಯಾವಾಗಲೂ ಕುತಂತ್ರ ಬುದ್ಧಿ ಹೊಂದಿದ್ದ ಈತ ತನ್ನ ಮಾವನ ತಲೆ ಕೆಡಸಿದ ಜೊತೆಗೆ ಡಿ.ಸಿ. ತಹಶಿಲ್ದಾರರಂತವರನ್ನು, ರಾಡಿರಮೇಶ ನಂತವವರನ್ನು ತನ್ನವರನ್ನಾಗಿ ಮಾಡಿಕೊಂಡು ಊರನ್ನು ಸ್ಮಶಾನ ಮಾಡಹೊರಟ.

ಕುಂಟೀರಪ ಶಾರಿ ಎನ್ನುವವಳನ್ನು ಕಂಡು ಮೋಹಗೊಂಡಿದ್ದ. ಒಂದು ಸಾರಿ ಆಕೆಯ ಮನೆಗೆ ಬಂದು ತನ್ನ ಕಾಮದ ನುಡಿ ಆಡಿದ ಶಾರಿ ಇದು ಚೆಂಬಸನಿಗೆ ಮಾತ್ರ ಮೀಸಲು ಎಂದಾಗ ಒತ್ತಾಯ ಮಾಡಿದ 'ನಾಲಾಯಕ್ ಭಾಡ್ಯಾ' ಎಂದು ಆತನನ್ನು ಗುದ್ದಿ ಹಲ್ಲು ಮುರಿದಳು. ಕೊನೆಗೆ ನಿರಾಶ್ರಿತನಾಗಿ ಓಡಿಹೋದ. ಬರಮೇಗೌಡನಿಗೆ ಕುಂಟೀರಪನ ಕುರಿತು ಎಲ್ಲ ವಿಷಯ ಗೊತ್ತಾದರೂ ತನ್ನ ಮಗಳ ಜೊತೆ ಮದುವೆ ಮಾಡಿದ. ನಂತರ ಊರ ತಲಾಟಿ ಹಿಡಿದುಕೊಂಡು ಮಲ್ಲಿಮಡು ಪ್ರದೇಶ ಸುತ್ತಣ ಜಾಗವನ್ನು ಬರಮೇಗೌಡ ಒಡೆತನಕ್ಕೆ ಒಳಪಡಿಸಲು ಮುಂದಾದ. ಮುಂದೆ ಇಲ್ಲಿಗೇನೇ ಅಮೆರಿಕಾ ಜಾಕ್ಸನ್ ಕಂಪನಿಯನ್ನು ಕರೆಸಿಕೊಂಡು ಈ ಪ್ರದೇಶದಲ್ಲಿ ತ್ಯಾಜ್ಯ ತುಂಬಿಸಿ ಊರನ್ನು ಸ್ಮಶಾನ ಮಾಡಲು ಕಾರಣಿಭೂತನಾದನು. ಹೀಗೆ ಬರಮೇಗೌಡನ ದುರಾಡಳಿತ ಮತ್ತು ಕುಂಟೀರಪ್ಪನ ಕುತಂತ್ರ ಮತ್ತು ದುಷ್ಟ ಚಿಂತನೆಗಳಿಂದ ಸುಂದರ ಪ್ರಕೃತಿಯಿಂದ ಶಿವಾಪುರದಲ್ಲಿ ಲಯ ತಪ್ಪಿ ಹೋಯಿತು. ಊರಿಗೆ ಪೋಲೀಸರು ಬಂದು ಶಾರಿಯನ್ನು ಅತ್ಯಾಚಾರಕ್ಕೊಳಪಡಿಸಿದರು. ಚೆಂಬಸನನ್ನು ಬಂಧಿಸಿ ಜೈಲಿಗೆ ಕಳಿಸಿದರು. ಗೌಡನ ದುರಾಡಳಿತ ಕಂಡರೂ ಆತನ ದುಡ್ಡಿನ ಅಶೆಗೆ ಕೈಚಾಚಿ ಆತನ ಚೇಲಾಗಳಾದರು. ಇವೆಲ್ಲ ಘಟನೆಗಳು ಜರುಗಿದ್ದು ಊರಿಗೆ ಆಧುನಿಕತೆ ಆವರಿಸಿದ್ದರಿಂದ ಪರಿಣಾಮ ಊರಲ್ಲಿ ಅನ್ಯಾಕ್ರಮಣ, ಅತ್ಯಾಚಾರದಂತ ಏನೆಲ್ಲ ಘಟನೆಗಳು ಜರುಗಿಹೋದವು.

ಹೀಗೆ "ಉಂಡ ಮನೆಗೆ ಎರಡು ಬಗೆಯುವ ವಸಾಹತಿ ಗುಣ. ಮೂಲ ಸಂಸ್ಕೃತಿಯನ್ನೇ ಜಡವಾಗಿಸಿಬಿಟ್ಟಿದೆ"[೬] ಎಂಬ ವೀರೇಶ ಬಡಿಗೇರ ಅವರ ಮಾತು ಇಲ್ಲಿ ಸತ್ಯವೆನಿಸುತ್ತದೆ. ಕುಂಟೀರಪ ವಸಾಹತುವನ್ನು ಊರಿಗೆ ತಂದು ಊರಿನ ಚಿತ್ರಣ ಬದಲಿಸಿ ಕೊನೆಗೆ ಊರಲ್ಲಿ ನಡೆಯೋ ಅನ್ಯಾಯ, ಅಕ್ರಮಗಳಿಗೆ ಈತನೇ ಕಾರಣನಾದ. ಹಾಗೆ 'ಜಿಗ್ ಬಾಸ್'ನ ಆಗಮನಕ್ಕೂ ಈತನೇ

ಕಾರಣನಾದ ಶಿವಾಪುರನಲ್ಲದವನಾದ ಕುಂಟೀರಪ, ಶಿವಾಪುರವನ್ನು ವಸಾಹತುವಿನೊಂದಿಗೆ ಸಂಬಂಧ ಬೆಳೆಸಿ (ಅಂದರೆ ಅಮೇರಿಕಾ ಕಂಪನಿ) ರಾಜಕಾರಣದಿಂದ, ದುರಾಡಳಿತ ನಡೆಸಿ ಊರಿನ ಚಿತ್ರಣ ಬದಲಿಸಿದ ರೀತಿ ಗ್ರಾಮೀಣ ಬದುಕಿನ ಮೇಲೆ ಆಧುನಿಕತೆಯ ವಸಾಹತು ಪರಿಣಾಮ ಹೇಗೆ ಬೀರಿದೆ? ಎಂಬುದನ್ನು ಚಿತ್ರಿಸುತ್ತದೆ.

ಆಧುನಿಕತೆ ಹಳ್ಳಿಗೆ ಆವರಿಸಿದ್ದರಿಂದ ಬರಮೇಗೌಡ ತನ್ನದಲ್ಲದ ಎಷ್ಟೋ ಭೂಮಿಯನ್ನು ಆಕ್ರಮಣ ಮಾಡಿಕೊಂಡು ತನ್ನ ಹೆಸರಿಗೆ ನೊಂದಣಿ ಮಾಡಿಸಿಕೊಂಡಿದ್ದ. ಈತನಿಗೆ ತಹಶಿಲ್ದಾರ, ತಲಾಟೆ ಡಿ.ಸಿ.ವರೆಗೂ ಬೆಂಬಲವಿದ್ದಿದ್ದರಿಂದ ಈ ತರಹದ ಕೃತ್ಯಕ್ಕೆ ಕೈಹಾಕಿದ್ದ. ಆದರೆ ಈತನ ದೌರ್ಜನ್ಯಕ್ಕೆ ದಲಿತರು ನಲುಗಿದ್ದರೂ ಆ ದಲಿತರ ಕೆಲ ಮಕ್ಕಳು ತಮಗಾಗುವ ಅನ್ಯಾಯ ಗುರ್ತಿಸಿ ಬಂಡೇಳಲು ಮುಂದಾಗಿದ್ದರು. ಅಧಿಕಾರದ ಮದದಲ್ಲಿ ಬರಮೇಗೌಡ ಕುಲವಂತರ ಗುಂಪನ್ನು ಒಂದು ಗೂಡಿಸಿದ್ದ ಶ್ರೀಮಂತಿಕೆ, ದುಡ್ಡು, ಜಮೀನು ಎಲ್ಲವೂ ಅವರದೇ ಆಗಿದ್ದವು. ಈ ವೇಳೆ ಧೀರ ದಲಿತ ಯುವಕರು ಬೆಳಗಾವಿಯ ಅಂಬೇಡ್ಕರ ಸಂಘಕ್ಕೆ ಮೊರೆ ಹೊಕ್ಕರು. ಬೆಳಗಾವಿಯಿಂದ ಈ ಸಂಘ ಶಿವಾಪುರಕ್ಕೆ ಬಂದು ಅಂಬೇಡ್ಕರ ಚಿಂತನೆ ಸಾಧನೆ ಕುರಿತು ಮತ್ತು ದಲಿತರ ನೂವು-ನಲಿವುಗಳನ್ನು ತಿಳಿಪಡಿಸಲು ಮುಂದಾದರು. ಇದರಲ್ಲಿ ನಮಶ್ಶಿವಾಯ ಸ್ವಾಮಿ ಮತ್ತು ಚೆಂಬಸ ಭಾಗಿಯಾಗಿದ್ದರು. ಇವೆಲ್ಲ ಘಟನೆಗಳು ಕುಂಟೀರಪ ಮತ್ತು ಬರಮೇಗೌಡನ ಕೆಂಗಣ್ಣಿಗೆ ಗುರಿಯಾಗಿದ್ದವು.

ಇದೇ ವೇಳೆ ಶಿವಾಪುರದ ಗುಡ್ಡದಲ್ಲಿ ಸಂಚರಿಸುತ್ತಿದ್ದಾಗ ದೊಡ್ಡ ಮಳೆ-ಗಾಳಿಬೀಸಿ ರಬಸದ ಮಳೆಯಾಗಿ ಹಳ್ಳ-ಕೊಳ್ಳವೆಲ್ಲಾ ತುಂಬಿಹೋದವು. ನಮಶ್ಶಿವಾಯ ಸ್ವಾಮಿ ಇದು "ಊರಿಗೆ ಹಿತವಂತೂ ತರದು" ಎಂದು ತಿಳಿಸಿದ್ದ, ಅದರಂತೆ ಕುಂಟೀರಪ ಮತ್ತು ಬರಮೇಗೌಡ ಕೂಡಿ ತಾರಾ ಮತ್ತು ಜಾಕ್ಸನ್ ಕಂಪನಿಯ ಬಿಗ್‌ಬಾಸನನ್ನು ಊರಿಗೆ ಕರೆತಂದಿದ್ದರು. ಶಿವಾಪುರದ ಬದುಕಿನಲ್ಲಿ ಇವರ ಆಗಮನ ಶಿವಾಪುರದ ಇತಿಹಾಸ ಮಗ್ಗಲು ಬದಲಿಸಿದ ದಿನವಾಯ್ತು. ಸ್ಥಳ ಪರಿಶೀಲನೆ ಮಾಡಿ 'ಮಲ್ಲಿಮಡು'ವಿನ ಮೂಲಕ ವಸಾಹತು ಯೋಜನೆರೂಪಿಸಲು ಹೊಂಚು ಹಾಕಿದರು. ಬರಮೇಗೌಡ ತಾರಾಳ ಮಾದಕ ಸೌಂದರ್ಯಕ್ಕೆ ಆಶೆ ಬಿದ್ದರೆ ಕುಂಟೀರಪ ಬಿಗ್‌ಬಾಸ್ ಊರಿನ ಚಿತ್ರಣ ಬದಲಿಸಲು ಯೋಜನೆ ರೂಪಿಸಲು ಮುಂದಾದರು ಇವರ ಜೊತೆ ಡಿ.ಸಿ. ಕೂಡಾ ಶಾಮಿಲಾಗಿದ್ದ.

ಬರಮೇಗೌಡ ಸ್ತ್ರೀಯರ ಬಗ್ಗೆ ಎಷ್ಟು ಆಶೆ ಬುರುಕನೋ ಅಷ್ಟೇ ಭೂಮಿಯ ಬಗ್ಗೆ ಕೂಡಾ ಆಶೆ ಹೊಂದಿದ್ದ ಬಡವರ ಎಷ್ಟೋ ಭೂಮಿಗಳನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದ ಮೇಲಾಗಿ ತನ್ನ ಸಾಹುಕಾರ ಸ್ನೇಹಿತರೊಂದಿಗೆ ಸೇರಿ ಸಕ್ಕರೆ ಕಾರಖಾನೆ ಸ್ಥಾಪಿಸಿದ.

ಇದರಿಂದಾಗಿ ರೈತರು ದುಡ್ಡಿನ ಹಪ ಹಪಿಯಿಂದ ದುಡ್ಡಿನ ಬೆಳೆಗೆ ಅಂದರೆ ಕಬ್ಬು ಬೆಳೆಗೆ ಗಂಟು ಬಿದ್ದರು. ಕಬ್ಬಿಗೆ ವರ್ಷವಿಡೀ ನೀರು ಬೇಕು. ಮಳೆ ಕಡಿಮೆಯಾದಾಗ 'ಪೈಪಲೈನ್' ಹಾಕಿಸಿ ಸರಕಾರಿ ಗೊಬ್ಬರ, ಕೀಟನಾಶಕ ಸಿಂಪಡಿಸಿ ನಾಲ್ಕು ವರ್ಷ ಒಳ್ಳೆಯ ಬೆಳೆ ಏನೋ ತೆಗೆದರು.

ಆದರೆ ಶಿವಾಪುರದ ರೈತರ ಜೀವನಶೈಲಿ ರಂಗು ರಂಗಾಯಿತು. ತಾವು ಈವರೆಗಿನ ಕೃಷಿ ಪದ್ಧತಿ ಮರೆತು ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಬಳಸುತ್ತಿರುವುದು ಬದಲಾವಣೆಯ ಸಂಕೇತವಾಯಿತು. ಇದೂ ಆಧುನಿಕತೆಗೆ ಹಳ್ಳಿಯೊಂದು ನಲುಗಿದ ಅಂಶವನ್ನು ಪ್ರಸ್ತುತಪಡಿಸುತ್ತದೆ.

"ಉಳುವವನೇ ಭೂ ಒಡೆಯ" ಕಾಯ್ದೆ ಬಂದರೂ ಅದಕ್ಕಾಗಿ ನೇಮಿಸಿದ್ದ ಸಮೀತಿಯನ್ನು ತನ್ನಂತೆ ಮಾಡಿಕೊಂಡು ಭೂಮಿಯನ್ನು ತನ್ನದಾಗಿಯೇ ಉಳಿಸಿಕೊಂಡ ಬರಮೇಗೌಡ ಬಡವರ ಕಣ್ಣಲ್ಲಿ ರಕ್ತ ಹರಿಸಿದ 'ಮಲ್ಲಿಮಡು' ಪ್ರದೇಶಕ್ಕೆ ಅಂಟಿಕೊಂಡು 'ಬಲವಂತ' ಎಂಬ ದಲಿತ ರೈತನ ಇಪ್ಪತ್ತು ಗುಂಟೆ ಭೂಮಿಯಷ್ಟೇ ಆತನಿಗೆ ಆಧಾರವಾಗಿತ್ತು. ಆದರೆ ಬಿಗ್‌ಬಾಸ್ ಮತ್ತು ಕುಂಟೀರಪರ ಕಣ್ಣು ಇದರ ಮೇಲೆ ಬಿದ್ದಿತು. ಬರಮೇಗೌಡನ ಮೂಲಕ ಆ ಭೂಮಿಯನ್ನು ವಶಪಡಿಸಿಕೊಂಡು ಬಲವಂತನನ್ನು ಮಲ್ಲಿಮಡುವಿಗೆ ತಳ್ಳಿದರು. ಮುಂದೆ ಕುಂಟೀರಪನ ತಮ್ಮ ಗಣಪ ಮತ್ತು ರಾಡಿರಮೇಶ ಸೇರಿ ಬಲವಂತನ ಮಗಳ ಮೆಲೆ ಅತ್ಯಾಚಾರವೆಸಗಿದ್ದರು. ಈ ವೇಳೆ ನೀಲಗಂಗು ತೀರಿಕೊಂಡಳು. ಮರುದಿನ ಬಲವಂತನೂ ಅಪಮಾನ ತಾಳಲಾರದೇ ಮತ್ತು ನಿರಾಶನಾಗಿ 'ಕೀಟನಾಶಕ' ಕುಡಿದು ಪ್ರಾಣಬಿಟ್ಟ ಈ ವೇಳೆ ದಲಿತ ಸಂಘ ಬರಮೇಗೌಡನ ಮೇಲ ದೂರು ನೀಡಿತು ಪೋಲೀಸರು ಬಂದು ಬರಮೇಗೌಡ, ರಾಡಿರಮೇಶ ಮತ್ತು ಗಣಪರನ್ನು ಬಂಧಿಸಿದರು ಇವೆಲ್ಲ ಚಿತ್ರಣಗಳು ಬದಲಾಗಿದ್ದು ಆಧುನಿಕತೆ ಹಳ್ಳಿಗೆ ಆವರಿಸಿದ್ದರಿಂದ ಅಂದರೆ ಅನ್ಯಾಯ, ಅತ್ಯಾಚಾರ ನಡೆದಾಗ ಮೊದಲು ಊರಲ್ಲಿ ಶಿಕ್ಷೆ ಇರುತ್ತಿತ್ತು. ಈಗ ದುಡ್ಡಿನಾಶೆಗಾಗಿ ಅಧಿಕಾರಿಗಳು ಬರಮೇಗೌಡನಿಗೆ ಶರಣಾಗತರಾಗಿದ್ದರು. ಈ ದೆಸೆಯಿಂದ ಊರಲ್ಲಿ ಈ ಘಟನೆಗಳು ಜರುಗಲು ಕಾರಣವಾಯ್ತು. ಬರಮೇಗೌಡ ಬಂಧಿತನಾಗಿದ್ದರೂ ಡಿ.ಸಿ.ಯಿಂದ ಜಾಮೀನಿನ ಮೇಲೆ ಮತ್ತೆ ಬಿಡುಗಡೆ ಪಡೆದ.

"ನಿಜಕ್ಕೂ ಸಮಸ್ಯೆಯ ಮೂಲ ಎಲ್ಲಿದೆ? ಇದು ಇರುವುದು ಆಧುನಿಕತೆಯ ಭೋಗಲಾಲಸೆ ಮತ್ತು ಸ್ಥಳೀಯ ಅಸಮಾನತೆಯ ನೆಲೆಗಳಲ್ಲಿ"[೭] ಎಂಬ ವಿಸಾಜಿಯ ಮಾತು ಇಲ್ಲಿ ಅನ್ವಯವಾಗುತ್ತದೆ ಅಂದರೆ ಬರಮೇಗೌಡ ಹುಟ್ಟು ಹಾಕಿದ ಅಸಮಾನತೆಗಳು ಮತ್ತು ಆಧುನಿಕತೆಯ ಭೋಗಲಾಲಸೆಗಳು ಹೇಗೆ ಒಂದು ಹಳ್ಳಿಯ ಜನರನ್ನು ನಲುಗಿಸಿವೆ ಎಂಬುದನ್ನೂ ಡಿ.ಸಿ. ಬರಮೇಗೌಡರ ದುರಾಡಳಿತ ಮತ್ತು ದಲಿತರ ಮೇಲೆ ದೈಹಿಕ, ಮಾನಸಿಕವಾಗಿ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರಗಳನ್ನು ಶಿವಾಪುರದಲ್ಲಿ ಬದಲಾವಣೆಗಳಿಂದ ಗುರ್ತಿಸಬಹುದು.

ಕಂಬಾರರ ಬರಹದಲ್ಲಿ ಮಾತನಾಡುವುದು ಇಡೀ ಒಂದು ಸಮುದಾಯ. ನೋವು-ನಲಿವಿಗೆ ಒಳಗಾದ ಅಂಚಿನ ಸಮುದಾಯದ ಜೊತೆಗೆ ವಸಾಹತುಶಾಹಿ ಮತ್ತು ಆಧುನಿಕತೆಯನ್ನು ತೀವ್ರವಾಗಿ ವಿರೋಧಿಸಿ ಪರ್ಯಾಯ ಬದುಕನ್ನು ಕಟ್ಟಿಕೊಡಲು ಕಂಬಾರರು ಪ್ರಯತ್ನಿಸಿರುವುದನ್ನು ಮೇಲಿನ ಅಂಶಗಳಿಂದ ಗುರ್ತಿಸಬಹುದಾಗಿದೆ.

ಬರಮೇಗೌಡ ಜೈಲಿಗೆ ಹೋಗಿ ಬಂದ ಮೇಲೆ ಕುಂಟೀರಪ ಬಂದು ಇದಕ್ಕೆಲ್ಲ ಕಾರಣ ನಿಮ್ಮ ಚೆಂಬಸನೆಂದು ಹೇಳ ಹೊರಟ. ಆದರೆ ಬರಮೇಗೌಡ ಒಪ್ಪಲಿಲ್ಲ ಹಾಗೋ ಹಿಗೋ ಮನ

ಒಲಿಸಿ ಚುನಾವಣೆಗೆ ನೀವು ನಿಲ್ಲಬೇಕಂತ ಪುಸಲಾಯಿಸತೊಡಗಿದ. ನಂತರ ಬಲವಂತನ ಹೊಲದಲ್ಲಿ ಆಫೀಸು ಸ್ಥಾಪಿಸಿ, ಚುನಾವಣಾ ಪ್ರಚಾರ ಮಾಡುವ ಚಿಂತನೆ ಕೈಕೊಂಡರು. ಇದೇ ವೇಳೆ ಬಾಗಿರ್ತಿ ವಿಕೃತ ಸಂತಾನಕ್ಕೆ ಜನ್ಮ ನೀಡಿದಳು. ಕೊನೆಗೆ ಬಾಗಿರ್ತಿಯ ಆರೈಕೆಗೆ ಬಂದಿದ್ದ ನರ್ಸು 'ಈ ಏರಿಯಾದಲ್ಲಿ ಇಂತಹ ವಿಚಿತ್ರ ಜನನಗಳು ದಿನಗಳ್ಲಲೂ ಇವೆ' ಎಂದು ಹೇಳಿದಳು. ಇವೆಲ್ಲ ಶಿವಾಪುರದ ಹಳ್ಳಿಯಲ್ಲಿ ತ್ಯಾಜ್ಯ ತುಂಬಿದ್ದರಿಂದ ರೋಗ ರುಜಿನುಗಳು ಮತ್ತು ವಿಕೃತ ಸಂತಾನಗಳು ಹುಟ್ಟಿ ಶಿವಾಪುರವನ್ನು ನಲುಗಿಸಿಬಿಟ್ಟವು.

ಚುನಾವಣೆಯಂತ ಆಧುನಿಕ ನೀತಿಗಳು ಹಳ್ಳಿಯಲ್ಲಿ ಹುಟ್ಟಿಕೊಂಡಿದ್ದರಿಂದ ಊರಿನ ಚಿತ್ರಣ ಇನ್ನೂ ಬದಲಾಗುತ್ತಾ ಬಂದಿತು. ಇಲ್ಲದ ಭರವಸೆಗಳನ್ನು ಕೊಡುವುದು, ಜನರಿಗೆ ಹೆಂಡ-ಮಾಂಸ ಕೊಡುವುದು ಸರ್ವೆ ಸಾಮಾನ್ಯವಾಯಿತು. ಬರಮೇಗೌಡ ಇದೇ ವೇಳೆ ಸಕ್ಕರೆ ಕಾರಖಾನೆ ಸ್ಥಾಪಿಸಿದ್ದ. ಇದರಿಂದ ಜನ ದುಡ್ಡಿನ ಹಾಹಕ್ಕೆ ಗಂಟು ಬಿದ್ದಿದ್ದರು. ಈ ವೇಳೆ ತುಂಗವ್ವ ಹೇಳುವ ಮಾತಿನಲ್ಲಿ ಆಧುನಿಕತೆಯನ್ನು ವಿರೋಧಿಸುವ ಅಂಶವನ್ನು ಗುರ್ತಿಸಬಹುದು. "ಉಣ್ಣೂ ಅನ್ನ ಬಿಟ್ಟು, ಕಬ್ಬಿಗಿ ಗಂಟ ಬಿದ್ದಾವು. ರೊಕ್ಕದ ಬೆಳಿ ಅಂತ ಇದ್ದ ಬಿದ್ದ ಬಿದ್ದ ಹೊಲ ಎಲ್ಲಾ ಇವರ ಕಬ್ಬಿಗಿ ಸಾಲವ್ಯೊಲ್ದು, ಸಾಲ ತಂದ ತಂದ ಹೊಲದಾಗ ಸುರವಾಕ ಹತ್ಯಾರು? ಇವರು ಬೆಳೆದ ಬೆಳಿಗೆ ಯಾರೋ ದರಾ ಕಟ್ಟವರಂತೆ, ಯಾರೋ ಕೊಳ್ಳವರಂತ! ನಿನ್ನ ಮಠದಾಗ ಕೂಡ್ರಿಸಿಕೊಂಡ ಒಂದಿಟ್ಟ ಬುದ್ಧಿ ಹೇಳಬಾರದೆ? ಯಾಕೋ ಏನೋ ಮಲ್ಲಿಮಡು ಹೊಲಸ ನಾರತೈತಿ,"[೮] ಎಂದು ನಮಶ್ಶಿವಾಯ ಸ್ವಾಮಿಗೆ ಹೇಳುವ ಆಕೆಯ ಮಾತಿನಲ್ಲಿ ಗಾಢವಾದ ಚಿಂತನೆ ಅಡಗಿದೆ. ಇದೆಲ್ಲ ಆಗುತ್ತಿರುವುದು ಆಧುನಿಕತೆಯ ಛಾಯೆಯಿಂದ ಎಂಬುದನ್ನು ಗುರ್ತಿಸಬೇಕಾಗಿದೆ.

ಕುಂಟೀರಪ ಚುನಾವಣೆಯಲ್ಲಿ ತನ್ನ ಮಾವ ಬರಮೇಗೌಡನನ್ನು ನಿಲ್ಲಿಸಿದಂತೆ ನಟನ ಮಾಡಿ ತಾನೇ ಚುನಾವಣೆ ಟಿಕೇಟ ಪಡೆದಿದ್ದ. ಇದೆಲ್ಲ ಕುತಂತ್ರದಿಂದ ನಡೆಸಿ ಚುನಾವಣೆಗೆ ತನ್ನ ಮಾವನ ದುಡ್ಡಿನಲ್ಲಿ ಪ್ರಚಾರಪಡೆದುಕೊಂಡ. ಬಿಗ್‌ಬಾಸ್, ತಾರಾ ಮತ್ತು ಕುಂಟೀರಪ ಕೂಡಿಕೊಂಡು ಬರಬರುತ್ತಾ ಊರನ್ನೆಲ್ಲ ರಾಡಿ ಮಾಡಿದರು. ಬರಮೇಗೌಡನ ಎಲ್ಲ ಆಸ್ತಿಯನ್ನು ಕುಂಟೀರಪ ತನ್ನಂತೆ ಮಾಡಿಕೊಂಡಿದ್ದ ದುಷ್ಟವ್ಯಸನಿಯಾಗಿದ್ದ ಗೌಡನಿಗೆ ತನ್ನ ಅಳಿಯನಿಂದಲೇ ತಕ್ಕಶಾಸ್ತಿಯಾಗಿತ್ತು. ಅಷ್ಟಕ್ಕೆ ಬಿಡದೆ ತ್ಯಾಜ್ಯ ತುಂಬಲು ಕುಂಟೀರಪ ಅವಕಾಶ ಒದಗಿಸಲು ಮುಂದಾಗಿ ಊರನ್ನೆಲ್ಲ ಕೊಳಕು ಮಾಡಲು ಹೊರಟಿದ್ದ. ಕೊನೆಗೆ ಬರಮೇಗೌಡನಿಗೆ ತನ್ನ ತಪ್ಪಿನ ಅರಿವಾಗಿತ್ತು. ಶಿವಾಪುರದಲ್ಲದವನಾದ ಕುಂಟೀರಪ "ಆಸ್ತಿ, ಮಗಳು, ಊರು, ಕೀರ್ತಿ, ನಂಬಿಕೆ, ಮಾನ"[೯] ಎಲ್ಲವನ್ನು ಕಸಿದುಕೊಂಡ. ಎನ್ನುವಲ್ಲಿ ಆಧುನಿಕತೆ ಉಂಟು ಮಾಡಿದ ಮತ್ತು ಮುಂದೆ ಮಾಡಬಹುದಾದ ಅಂಶವನ್ನು ಈ ಮೇಲಿನ ಅಂಶಗಳಿಂದ ಗುರ್ತಿಸಬಹುದು. ಕುಂಟೀರ ಇಲ್ಲಿ ಆಧುನಿಕತೆ ಪ್ರತೀಕನಾಗಿ ಎಲ್ಲವನ್ನೂ ಕಬಳಿಸಲು ಮುಂದಾದ ಬಗೆ ಕಾಣಬಹುದು. ಕುಂಟೀರಪ, ತಾರಾ, ಬಿಗ್‌ಬಾಸ್ ಕೂಡಿಕೊಂಡು "ಶಿವಾಪುರದ ಸಮಗ್ರ ಅಭಿವೃದ್ಧಿ" ಹೆಸರಿನಲ್ಲಿ ಮಲ್ಲಿಮಡು ಪ್ರದೇಶವನ್ನು ಸಮ ಮಾಡಲು ಹೊರಟಿದ್ದು, ಆ ಪ್ರದೇಶ ಕಲ್ಲು ಮಣ್ಣಿನಿಂದ ಸಮ ಮಾಡದೇ ವಿದೇಶಿ ಫ್ಯಾಕ್ಟರಿಯ

ರಸಾಯನ ಗೊಬ್ಬರದ ತ್ಯಾಜ್ಯವನ್ನು ಅರ್ಥಾತ್ ವಿಷವನ್ನು ತುಂಬಲು ಹೊರಟಿದ್ದರು. ಜೊತೆಗೆ ಶಿವಾಪುರಕ್ಕೆ ಇಂಗ್ಲೀಷ್ ಶಾಲೆ, ಆಸ್ಪತ್ರೆ ಕಾಲೇಜು ಬೇಕೆಂದು ಬರಮೇಗೌಡ ಇಚ್ಛಿಸಿದ್ದ. ಇದು ಊರನ್ನು ಉದ್ಧಾರ ಮಾಡುವ ಕೆಲಸವಲ್ಲ ಅದು ಊರನ್ನು ಸ್ಮಶಾನ ಮಾಡುವ ಶಿಸ್ತುಬದ್ಧ ಯೋಜನೆ ಮತ್ತು ಹಗಲು ದರೋಡೆ ನಡೆಯುತ್ತಿತ್ತು. ಇದನ್ನೆಲ್ಲ ಚೆಂಬಸ ಮತ್ತು ನಮಶ್ಶಿವಾಯ ಸ್ವಾಮಿ ವಿರೋಧ ಒಡ್ಡಿ ತಡೆಯಲು ಮುಂದಾದರು. ಕೊನೆಗೆ ತನ್ನ ತಪ್ಪಿನ ಅರಿವು ಮಾಡಿಕೊಂಡ ಬರಮೇಗೌಡ ಇದಕ್ಕೆ ತನ್ನ ಬೆಂಬಲ ಸೂಚಿಸಿದ. ತ್ಯಾಜ್ಯ ತುಂಬಿದ್ದರಿಂದ ವಿಕೃತ ಸಂತಾನವಾಗಿತ್ತು ಮತ್ತು ಮಲ್ಲಿಮಡು ಪಕ್ಕದ ಗುಡ್ಡದಲ್ಲಿದ್ದ ನೇರಳೆ ಹಣ್ಣು ರುಚಿ ಕಳೆದುಕೊಂಡಿದ್ದವು. ಚೆಂಬಸ ಇದನ್ನು ತಪ್ಪಿಸಲು ಮುಂದಾಗಿ ಬರಮೇಗೌಡ ಒಪ್ಪಂದ ಮಾಡಿಕೊಂಡಿದ್ದಲ್ಲಿ ಶಾಲೆ ಕಾಲೇಜು ಸ್ಥಾಪನೆಗೆ ಜಾಗ ಕೊಡುವ ಒಪ್ಪಂದ ನಡೆದಿತ್ತು. ಈ ಮಲ್ಲಿಮಡು ಪ್ರದೇಶ ಬಿಟ್ಟು ಬೇರೆ ಜಾಗ ತೋರಿಸಿದರೆ ಒಪ್ಪಂದ ಬಿದ್ದು ಸಮಸ್ಯೆ ಬಗೆ ಹರಿಯುವುದು ಎಂಬ ಸಲಹೆ ನೀಡಿದ. ಹೀಗೆ ಕುಂಟೀರಪ್ಪನ ಕುತಂತ್ರ ಮತ್ತು ಬರಮೇಗೌಡನ ದುರಾಡಳಿತದಿಂದ ಜಾಕ್ಸನ್ ಕಂಪನಿ ಆಗಮಿಸಿ ಶಿವಾಪುರ ನಲಗುವಂತೆ ಮಾಡಿದ್ದವು ಇದೆಲ್ಲ ಶಿವಾಪುರದ ಮೇಲೆ ಆಧುನಿಕತೆ ಉಂಟು ಮಾಡಿದ ಪರಿಣಾಮವೇ ಆಗಿದೆ.

ಮುಂದೆ ಶಿವಾಪುರದಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಬಂಡೇಳಲು ಚೆಂಬಸ ಮತ್ತು ನಮಶ್ಶಿವಾಯರ ಮುಖಂಡತ್ವದಲ್ಲಿ ಚಳುವಳಿ ನಡೆಯಲು ಮುಂದಾದವು. ಮಲ್ಲಿಮಡು ಪ್ರದೇಶದ ಬದಲಾಗಿ ನಾವು ತೋರುವ ಜಾಗದಲ್ಲಿ ಶಾಲಾ-ಕಾಲೇಜು ಕಟ್ಟಿಕೊಡಬೇಕೆಂದು, ಮಲ್ಲಿಮಡುವಿನಲ್ಲಿ ತುಂಬುತ್ತಿರುವ ತ್ಯಾಜ್ಯವನ್ನು ನಿಲ್ಲಿಸಬೇಕೆಂಬ ಮನವಿಯನ್ನು ಡಿ.ಸಿ.ಗೆ ಬರೆದಿದ್ದರು. ಬೆಳಗಾವಿಯಿಂದ ಬಂದ ಪೋಲೀಸರು ಚಳುವಳಿಗಾರರ ಮೇಲೆ ದಾಳಿಮಾಡಿದರು ದಾಳಿ ಮಾಡಿಸಿದ್ದು ಕುಂಟೀರಪನೇ ಆಗಿದ್ದ ಅದೇ ದಿನ ರಾತ್ರಿ ಶಾರಿಯ ಮೇಲೆ ಮೂರುಜನ ಪೋಲಿಸರು ಮತ್ತು ರಾಡಿರಮೇಶ, ಗಣಪರು ಅತ್ಯಾಚಾರವೆಸಗಿದ ದುಷ್ಟರನ್ನು ಚೆಂಬಸ ಕೊಂದು ಹೊಳೆಗೆ ಎಸೆದು ತಾನೇ ಪೋಲಿಸರಿಗೆ ಶರಣಾಗಿ ವೀರನಾಗಿ ಗುರ್ತಿಸಿಕೊಂಡ ಇವೆಲ್ಲ ಬದಲಾವಣೆ ಜರುಗಿದವು.

ಒಟ್ಟಾರೆ ಸ್ವಚ್ಚಂದವಾಗಿದ್ದ ಶಿವಾಪುರ ಎನ್ನುವ ಹಳ್ಳಿಗೆ ಬರಮೇಗೌಡನ ದುರಾಡಳಿತ, ಕುಂಟೀರಪನ ಕುತಂತ್ರ ತಾರಾಳ ಹೇಸಿತನ ಮತ್ತು ಅಮೇರಿಕಾ ಜಾಕ್ಸನ್ ಕಂಪನಿಯ ಬಿಗ್‌ಬಾಸ್‌ರ ಆಗಮನದಿಂದ ಉಂಟಾದ ಪರಿಣಾಮಗಳೆಲ್ಲ ಆಧುನಿಕಯು ಒಂದು ಹಳ್ಳಿಯ ಮೇಲೆ ಹೇಗೆ ಪರಿಣಾಮ ಬೀರಿದೆ ಎಂಬ ಅಂಶವನ್ನು ಮೇಲಿನ ಅಂಶಗಳಿಂದ ಅರಿಯಬಹುದು. ಅಭಿವೃದ್ಧಿಯ ಹೆಸರಿನ ಮೇಲೆ ಹಳ್ಳಿಯಲ್ಲಿ ಆಧುನಿಕತೆ ಉಂಟುಮಾಡುತ್ತಿರುವ ಪರಿಣಾಮಗಳನ್ನು ಈ ಮೇಲಿನ ಎಲ್ಲಾ ಅಂಶಗಳಿಂದ ವಿಶ್ಲೇಷಣೆಗೈಯಬಹುದಾಗಿದೆ. ಹೀಗೆ ಆಧುನಿಕತೆ ವಸಾಹತುಶಾಹಿಯ ಕೊಡುಗೆ ಇದು ವಸಾಹತುಶಾಹಿಯ ಮನೋಭಾವಕ್ಕೆ ಅನುಗುಣವಾಗಿ ರೂಪಗೊಂಡಿದ್ದು ತನ್ನ ಅನುಕೂಲಕ್ಕೆ ತಕ್ಕ ಆಧುನಿಕತೆಯನ್ನು ವಸಾಹತು ಪ್ರದೇಶಗಳ ಮೇಲೆ ಹೇರುವ ಚಿತ್ರಣವನ್ನು ಕಾದಂಬರಿ ಚಿತ್ರಿಸುತ್ತದೆ. ಕಾದಂಬರಿಯ ಕೊನೆಗೆ ನಮಶ್ಶಿವಾಯ ಸ್ವಾಮಿ 'ಶಿವಲಿಂಗ' ಅಜ್ಜಿಯೆನ್ನುವಂತೆ

ಚೆಂಬಸನಿಗೆ ಕೊಡುವ ಸಂದೇಶಗಳ ಮೂಲಕ ಆಧುನಿಕತೆಯಿಂದ ನಲುಗಿದ ಶಿವಾಪುರವನ್ನು ಮರಳಿ ಕಟ್ಟುವ ಬಗೆಯನ್ನು ಹೇಳುವಲ್ಲಿ "ಹೊಸ ಶಿವಾಪುರ" ಕಲ್ಪನೆಗಳಿರುವುದನ್ನು ಮತ್ತು ಆಧುನಿಕರಣ ಮೆಟ್ಟುವ ಚಿಂತನೆಇರುವುದನ್ನು ಕಾಣಬಹುದು.

ಶಿವಾಪುರ ಜಾಗತೀಕ ಪ್ರಭಾವಕ್ಕೆ ಒಳಗಾಗಿ ನಲಗುತ್ತಿದ್ದು. ಇದು "ಇತಿಹಾಸದ ನೇರನಡೆ ಪ್ರಗತಿಶೀಲ ಗಮನ ಇತ್ಯಾದಿ ಮಾತುಗಾರಿಕೆಯ ಮಾಯೆಯನ್ನು ಅಲ್ಲಗಳೆದು ನಮ್ಮ ಈ ಮೂರನೇ ಜಗತ್ತಿನ ಸಣ್ಣ-ಪುಟ್ಟ ಹಳ್ಳಿಗಳಲ್ಲಿ ಜಾಗತೀಕರಣ ಹೊಸ-ವಸಾಹತುಶಾಹಿ ಹೇಗೆ ಪರಿಣಾಮ ಬೀರ ಹೊರಟಿದೆ ಎನ್ನುವ ಕಹಿ ಸತ್ಯವನ್ನು ಕಾದಂಬರಿ ತೋರಿಸುತ್ತಿದೆ"[೧೦] "ಹಳ್ಳಿಯೊಂದರ ಬದುಕನ್ನು ಚಿತ್ರಿಸುತ್ತ ಜಾಗತಿಕ (ಆಧುನಿಕತೆ) ಅಪಾಯ, ನಗರ ಕೇಂದ್ರಿತ ಪ್ರಗತಿ ಪರಿಕಲ್ಪನೆ ಜನಪದ ಆತ್ಮನಾಶ, ಅನ್ಯಾಕ್ರಮಣ ನಮ್ಮ ಸೃಜನಶೀಲತೆಯನ್ನೇ ಕೊಲ್ಲುತ್ತಿರುವ ದುರಂತ, ಅಭಿವೃದ್ಧಿ ಹೆಸರಿನಲ್ಲಿ ಈ ನೆಲದ ಅಂತಃಸ್ವತಃವನ್ನೇ ಹೀರುತ್ತಿರುವ ಆಮದುಯೋಜನೆ ದುಷ್ಪರಿಣಾಯನ್ನು 'ಶಿವನ ಡಂಗುರ' ಕಾದಂಬರಿ ಚಿತ್ರಿಸುತ್ತದೆ.

ಕೊನೆ ಟಿಪ್ಪಣಿಗಳು

೧. ರಾಮಚಂದ್ರನ್ ಸಿ.ಎನ್ : ವಸಾಹತೋತ್ತರ ಚಿಂತನೆ, ಪ್ರಕಾಶನ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೨೦೦೦ ಪುಟ – ೨

೨. ಸಂಕ್ಷಿಪ್ತ ಕನ್ನಡ ನಿಘಂಟು (ಪರಿಸ್ಕೃತ) ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು–೨೦೦೧ ಪುಟ– ೧೦೧

೩. ವಿಕ್ರಂ ವಿಸಾಜಿ : ನಾದಗಳು ನುಡಿಯಾಗಲೇ (ಸಂಶೋಧನಾ ಪ್ರಭಂದ) ಪಲ್ಲವ ಪ್ರಕಾಶನ, ಚೆನ್ನಪಟ್ಟಣ ಬಳ್ಳಾರಿ, ೨೦೦೮. ಪುಟ–೧೩೪

೪. ಚೆಂದ್ರಶೇಖರ ಕಂಬಾರ : ಶಿವನ ಡಂಗುರ, ಅಂಕಿತ ಪ್ರಕಾಶನ, ಬೆಂಗಳೂರು–೨೦೧೫ ಪುಟ–೨೭

೫. ವಿಕ್ರಂ ವಿಸಾಜಿ : ನಾದಗಳು ನುಡಿಯಾಗಲೇ, ಪಲ್ಲವ ಪ್ರಕಾಶನ ಚೆನ್ನಪಟ್ಟಣ, ಬಳ್ಳಾರಿ, ೨೦೦೪, ಪುಟ–೨೩

೬. ವಿರೇಶ ಬಡಿಗೇರ : ನಾಡೋಜ ಚಂದ್ರಶೇಖರ ಕಂಬಾರ, ಪ್ರಸಾರಂಗ ಕನ್ನಡ ವಿ.ವಿ ಹಂಪಿ–೨೦೧೧. ಪುಟ–೪೩

೭. ವಿಕ್ರಂ ವಿಸಾಜಿ : ನಾದಗಳು ನುಡಿಯಾಗಲೇ, ಪಲ್ಲವ ಪ್ರಕಾಶನ ಚೆನ್ನಪಟ್ಟಣ, ಬಳ್ಳಾರಿ, ೨೦೦೪, ಪುಟ–೧೪೩

೮.ಚಂದ್ರಶೇಖರ ಕಂಬಾರ : ಶಿವನ ಡಂಗುರ, ಅಂಕಿತ ಪ್ರಕಾಶನ, ಬೆಂಗಳೂರು–೨೦೧೫ ಪುಟ–೧೫೪

೯. ಅದೇ ಪುಟ–೧೭೧

೧೦. ಕೃಷ್ಣ ಮನಹಳ್ಳಿ : ಕಂಬಾರರ ಶಿವಾಪುರದಲ್ಲಿ ಮೊಳಗಿದ ಶಿವನ ಡಂಗುರ, ಕನ್ನಡ ಪ್ರಭ ದಿನಪತ್ರಿಕೆ, ಭಾನುಪ್ರಭಾ ವಿಭಾಗ ಪುಟ–೦೩, ದಿನಾಂಕ– ೬–೧೨–೨೦೧೫ರ ಪ್ರಕಟಣೆ.

ಅಧ್ಯಾಯ-೫

ಶಿವಾಪುರ ಪರಿಸರದ ಸುತ್ತ-ಮುತ್ತ

ಅಧ್ಯಾಯ- ೫

ಶಿವಾಪುರ ಪರಿಸರದ ಸುತ್ತ-ಮುತ್ತ

ಚಂದ್ರಶೇಖರ ಕಂಬಾರರ 'ಶಿವಾಪುರ' ಕಲ್ಪನೆ ಅತ್ಯಂತ ವೈಶಿಷ್ಟ್ಯವಾಗಿದ್ದು ಅವರ ಬಹುತೇಕ ಬರಹಗಳು ಶಿವಾಪುರದ ಪರಿಸರದಿಂದಲೇ ಪ್ರಾರಂಭವಾಗುತ್ತವೆ. ಅವರ ಕಾವ್ಯ, ನಾಟಕ ಮತ್ತು ಕಾದಂಬರಿಗಳು ಹೆಚ್ಚಾಗಿ ಶಿವಾಪುರದಿಂದ ಆರಂಭಗೊಳ್ಳುವುದು ಸಹಜ, ಹಾಗಾದರೆ ಏನಿದು ಶಿವಾಪುರ? ಎಲ್ಲಿದೆ ಶಿವಾಪುರ? ಎಂದು ಹುಡುಕ ಹೋದರೆ ಅದು ನಕ್ಷೆಯಲ್ಲಿ ಸಿಗುವುದಿಲ್ಲ. ಈ ಮೊದಲು ಬಸವಾದಿ ಶಿವಶರಣರು ಕಂಡ ಕಲ್ಯಾಣ ರಾಜ್ಯ, ಗಾಂಧಿ ಕಂಡ 'ಆದರ್ಶ ರಾಮರಾಜ್ಯ' ಕಲ್ಪನೆಗಳಂತೆ ಕಂಬಾರರು ಕಂಡ ಆದರ್ಶ ಸಮಾಜವೇ ಈ ಶಿವಾಪುರದವಾಗಿದೆ.

ಶಿವಾಪುರ ಕಂಬಾರರ ಸಾಹಿತ್ಯದ ಕೇಂದ್ರ, ಪೌರಾಣಿಕವಾಗಲಿ, ಸಮಾಜವಾಗಲಿ, ಇತಿಹಾಸವಾಗಲಿ ಎಲ್ಲ ಕತೆಗಳು ಪ್ರಾರಂಭವಾಗುವುದು ಇದೇ ಶಿವಾಪುರದಲ್ಲಿ. ಶಿವಾಪುರಕ್ಕೆ ತನ್ನದೇ ಆದ ಇತಿಹಾಸವಿದೆ ಪುರಾಣವಿದೆ. ಸಾಮಾಜಿಕ ಕಳಕಳಿ ಇದೆ. ಶಿವಾಪುರದಲ್ಲಿ ಬಾಳುವ ಮಂದಿಗೆ ಅರಿವಿದೆ. ಅಲ್ಲಿ ನಾಯಕ ಪ್ರತಿನಾಯಕರಿದ್ದಾರೆ. ಖಳ ಖೂಳರೂ ಇದ್ದಾರೆ. ಕೆಲಬಾರಿ ಕನಸುಗಳು ಪಾತ್ರಗಳಾಗಿ ಕತೆ ಹೇಳುವುದು ಉಂಟು. ಪುರಾಣದಲ್ಲಿ ದೇವರ ಪವಾಡ ಈಗಲೂ ನಡೆಯುತ್ತದೆ ಮತ್ತು ಇದನ್ನು ನಂಬಿದ ಸುಭಿಕ್ಷ ಜನಸಮೂಹವೂ ಇದೆ. ಹೀಗೆ ಕಂಬಾರರ ಅನೇಕ ಕೃತಿಗಳಲ್ಲಿ ಶಿವಾಪುರದ ಈ ಅಂಶಗಳು ಇರುವುದನ್ನು ಕಾಣುತ್ತೇವೆ. ಕಂಬಾರರ ಶಿವಾಪುರದಲ್ಲಿ ದೇಶಿಯ ಅಂತಃಸತ್ವವನ್ನು ಇನ್ನೂ ಜೀವಂತವಾಗಿ ಹಿಡಿದಿಟ್ಟು ಮತ್ತು ಅದನ್ನು ಮುನ್ನಡೆಸುವ ಜವಾಬ್ದಾರಿಯನ್ನು ತಿಳಿಸಿಕೊಡುವುದಾಗಿದೆ ಮತ್ತು ಪಶ್ಚಿಮ ಮಾರ್ಗದಿಂದ ಬರುವ ದುಷ್ಟ ಶಕ್ತಿಗಳನ್ನು ತಡೆಯುವ ಶಕ್ತಿ ಈ ಶಿವಾಪುರಕ್ಕಿರುವುದನ್ನು ಅವರ ಕಾದಂಬರಿಗಳಲ್ಲಿ, ಕಾವ್ಯ, ನಾಟಕಗಳಲ್ಲಿ ಇರುವುದನ್ನು ಕಾಣಬಹುದಾಗಿದೆ.

ಕಂಬಾರರ ನಾಟಕ, ಕಾದಂಬರಿ, ಕಾವ್ಯ ಭಾಗಗಳು ಪ್ರಾರಂಭವಾಗುವುದನ್ನು ಅವರ ಕೆಲವು ಕೃತಿಗಳ ಮೂಲಕ ಹೀಗೆ ಅರಿಯಬಹುದು.

೧. ಕಾದಂಬರಿಗಳಲ್ಲಿ

೧. 'ಜಯಜಯ ಶಿವಪೂರಿಗೆ

ಹಸಿರಿನ ತವರೂರಿಗೆ

ಹಾಡು ಬೆಳೆವ ಕಾಡಿಗೆ

ನಮ್ಮ ಛಳಿಗೆ ಬಿಸಿಯಾಗುವ

ಕಣ್ಣುಗಳಿಗೆ ಕನಸು ಕೊಡುವ

ಯೌವನವನು ಕಾಪಾಡುವ

ಮುಳ್ಳಿನಲ್ಲೂ ಹೂಹೂಗಳ ನಗೆಯ ನಗುವ ಸೀಮೆಗೆ

ಜಯಜಯ ಶಿವಪೂರಿಗೆ”[೧] (ಈವರೆಗೂ ಹೇಳತೇನ ಶಿವಾಪುರ ಕಾವ್ಯ)

೨. ಜಂಬೂದ್ವೀಪದ ಪೈಕಿ ಮ್ಯಾಗಡೆ ಮಲೆನಾಡ

ಸೂಸಿ ಹರಿದಾಳಲ್ಲಿ ಘಟಪ್ರಭಾ

ಆ ದಂಡಿ ಆರ್‍ಯಾಣ ಈ ದಂಡಿ ಶಿವಾಪುರ

ಕೆಂಪು ಹಂಚಿನ ಊರು ಬಲುಶೋಭಾ”[೨] (ಹೆಳತೇನ ಕೇಳ)

೩. ಸಣ್ಣ ಹಳ್ಳಿ ಅದು, ಹೆಸರು ಶಿವಾಪುರ

ನೀವು ಕೇಳೇ ಇಲ್ಲ

ನಿಮ್ಮ ನಕಾಶೆಯ ಯಾವ ಮೂಲೆಯಲ್ಲೂ

ನಮ್ಮ ಊರು ಇಲ್ಲ.[೩] (ಎಲ್ಲಿದೆ ಶಿವಾಪುರ)

೨. ನಾಟಕಗಳಲ್ಲಿ ಶಿವಾಪುರ ಚಿತ್ರಣ:

೧. ಧರೆಯ ಮೇಗಡೆ ಮರೆವ ಶಿವಾಪುರ

ದರಸು ನಾಗರರಾಯ ತೀರಲು

ಅರಸಿ ಮಾಯಾವತಿಯು ಧರ್ಮದಿ ರಾಜ್ಯವಾಳಿರಲು”[೪] (ಸಿರಿಸಂಪಿಗೆ ನಾಟಕ)

೨. ಒಂದಾನೊಂದು ಕಾಲದಲ್ಲಿ ಜಂಬೂದ್ವೀಪದ ದಕ್ಷಿಣ ಕ್ಷೇತ್ರದಲ್ಲಿ ಸಹಾದ್ರಿ ಕಾಡು, ಸದಾ ತುಂಬಿಹರಿವ ನದಿ ಕಾಡಿನ ಮೂಗುತಿ ಹಾಗೆ ಅಲ್ಲಿ ನೋಡ್ರಿ ಒಂದು ಪಟ್ಟಣ ಅದು ಶಿವಾಪುರ................"[೫] (ಪುಷ್ಪರಾಣಿ–ನಾಟಕ)

೩. ಕಾದಂಬರಿಗಳಲ್ಲಿ:

ಶಿವಾಪುರ ಚರಿತ್ರೆ ಆರಂಭ ಆಗೋದು ಪುರಾಣ ಜನಪದ ಹಿನ್ನಲೆಯಲ್ಲಿ. ಪುರಾಣದ ಮೂಲ ಆಲದ ಮರ, ಈಗಲೂ ಇದೆ. ಊರನ್ನು ಇಬ್ಭಾಗಿಸಿ ದಕ್ಷಿಣೋತ್ತರವಾಗಿ ಹಬ್ಬಿರುವ ರಸ್ತೆಯ ಎಡಬದಿಗೆ ಅಂದರೆ ದಲಿತರ ಕೇರಿಗೆ ಅಂಟಿಕೊಂಡ ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಜೋಗತಿ ಹಾಡಿನಲ್ಲಿ ಓಂ ಪ್ರಥಮದಲ್ಲಿ "ಶಿವದೇವರು ತಮ್ಮ ಭೋಗಭಾಗ್ಯದ ಹೆಣ್ಣು ಪಾರ್ವತೀ ದೇವಿಯ ಕೂಡಿ, ಮ್ಯಾಲೆ ಮಿರಿಲೋಕವ ಸೃಷ್ಟಿಸಿ ದೆವಾನುದೇವತೆಗಳ ಹುಟ್ಟಿಸಿದರು ಕೆಳಗೆ ಆರು ಮೂರು ಮೂಲೆಯ ಭೂಲೋಕವ ನಿರ್ಮಿಸಿದರು. ಮತ್ತೇ ಒಬ್ಬರಾದ ಮೇಲೊಬ್ಬರು ಬೆಳಕು ಮಾಡಿರೆಂದು ಸೂರ್ಯಚಂದ್ರಾಮರು ಸೃಷ್ಟಿಯಾದರು....."[೬] ಹೀಗೆ ಕಂಬಾರರ ಶಿವನ ಡಂಗುರ ಕಾದಂಬರಿಯ ಕೇಂದ್ರ ಶಿವಾಪುರವೇ ಆಗಿರುವುದನ್ನು ಕಾಣುತ್ತೇವೆ, ಈ ಕಾದಂಬರಿ ಶಿವಾಪುರದ ಸುತ್ತ–ಮುತ್ತ ನಡೆದ ಘಟನೆಗಳು ಯಾವುವು? ಎಂಬುದನ್ನು ಕಂಬಾರ ಬರಹದ ಚಿಂತನೆಗಳ ಹಿನ್ನೆಲೆಯಲ್ಲಿ ಈ ಮುಂದಿನಂತೆ ಗುರ್ತಿಸಬಹುದು.

ಕಂಬಾರರು ಮೊದಲು ಶಿವಾಪುರದ ಗತವೈಭವವನ್ನು ತಿಳಿಸಿ ಅದಕ್ಕೆ ವಸಾಹತು ಪ್ರಭಾವ ಹೇಗೇ ಉಂಟಾಗುತ್ತದೆ ಮತ್ತು ಅದಕ್ಕೆ ಪರ್ಯಾಯ ಮಾರ್ಗಗಳೇನು? ಎಂಬುದನ್ನು ಶಿವನ ಡಂಗುರ ಕಾದಂಬರಿ ತಿಳಿಸಿಕೊಡುತ್ತದೆ.

ಶಿವಾಪುರವನ್ನು ಕಟ್ಟಿಕೊಡುವ ಅವರ ಜೋಗತಿ ಹಾಡು, ಕುರುಬರ ಹಾಡು ಮತ್ತು ಪುರಾಣ ಕತೆಗಳು ದೇಶಿಯ ಮಹತ್ವವನ್ನು ಬಿಂಬಿಸುತ್ತವೆ. ಭಾರತೀಯ ಸಂಸ್ಕೃತಿಗಳಲ್ಲಿ ದೈವಿಕ ಕಲ್ಪನೆಗೆ ಮಹತ್ವವಿದ್ದುದ್ದನ್ನು ಅವರು ಕಟ್ಟಿಕೊಡುವ ದೇಶಿಯ ಚಿಂತನೆಯಲ್ಲಿ ಕಾಣುತ್ತೇವೆ. ಮಲ್ಲಿಮಡು ಎನ್ನುವ ಪ್ರದೇಶ ಅತೀ ಪುರಾತನ ಸ್ಥಳ ಇಂತಹ ಸ್ಥಳದಲ್ಲೆ ವಸಾಹತು ತನ್ನ ಪ್ರಭುತ್ವ ಮೆರೆಯಲು ಮುಂದಾದ ಬಗೆಯನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಬೆಟ್ಟಗುಡ್ಡ, ನದಿ, ಹಳ್ಳಕೊಳ್ಳ ದಟ್ಟನೆಯ ಕಾಡು ಇವೆಲ್ಲವುಗಳನ್ನು ಸುತ್ತವರಿದಿರುವಂತದ್ದು ಶಿವಾಪುರ.

ಇಂತಹ ಶಿವಾಪುರದಲ್ಲಿ ಬರಮೇಗೌಡ ಎಂಬ ದುಷ್ಟನದೇ ಅಹಂಕಾರದ, ದರ್ಪದ ಆಡಳಿತ ನಡೆಸುವವನಾಗಿದ್ದಾನೆ. ಈತಗೆ ಕಾಮ ನೆತ್ತಿಗೆದಿ ಹೆಣ್ಣು ಒಂದು ಭೋಗದ ವಸ್ತುವಾಗಿ ಗುರ್ತಿಸಿದವನು. ಜೊತೆಗೆ ತಾನು ಅತೀ ಮೋಹಿಸಿದ ತುಂಗಿಯನ್ನು ಕಾಮಿಸಿ ಮದುವೆಯಾಗದೇ ಆಕೆಯನ್ನು ಸೂಳಿಯಾಗಿ ಮತ್ತು ದಲಿತಳಾದ ಆಕೆಯನ್ನು ದಲಿತಳನ್ನಾಗಿಯೇ ಇಡುವ ಆತನದು ದುಷ್ಟ ಚಿಂತನೆಯಾಗಿದೆ. ಊರಿನಲ್ಲಿನ ಫಲವತ್ತಾದ ಭೂಮಿಯನ್ನು ತನ್ನದಾಗಿಸಿಕೊಳ್ಳುವುದು, ಆ ದುರ್ಮಾರ್ಗಕ್ಕಾಗಿ ಡಿ.ಸಿ. ತಹಶೀಲ್ದಾರರಂತವರನ್ನು ದುಡ್ಡು ಕೊಟ್ಟು ತನ್ನವನ್ನಾಗಿಸುವುದು ಪ್ರಭುತ್ವದ

ಯಜಮಾನ್ನಿಕೆಯನ್ನು ತೋರಿಸುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಇಂತಹ ವ್ಯೆಸನಿಗೆ ಕೊನೆಗೆ ಕುಂಟೀರಪನೆಂಬ ವ್ಯಕ್ತಿಯಿಂದಲೇ ಶಿಕ್ಷೆ ಸಹಜವಾದದ್ದು ಎಂಬ ಅಂಶವನ್ನು ಶಿವಾಪುರದಲ್ಲಿ ಬೆಳೆದ ಬರಮೇಗೌಡನ ಪಾತ್ರ ತಿಳಿಸುವುದು.

ಕಾದಂಬರಿಯಲ್ಲಿ ಪುರಾಣವಾಗಿದ್ದ ಶಿವಾಪುರ ಇತಿಹಾಸ ರೂಪ ಪಡೆಯುವುದು ಈ ಗೌಡಮನೆತನ ಆಳ್ವಿಕೆಯಿಂದ. ಈ ಗೌಡ ಮನೆತನದ ಏಳನೇ ತಲೆಮಾರಿನವನೇ ಈ ಬರಮೇಗೌಡ ಪಾರ್ವತಿ ಎನ್ನುವ ಹೆಂಡತಿ ಇದ್ದರೂ ದೇವದಾಸಿ ತುಂಗವ್ವಳ ಮೇಲೆ ವಕ್ರದೃಷ್ಟಿ ಹರಿಸಿದವನು. ಕೊನೆಗೆ ಕುತಂತ್ರದ ಬುದ್ಧಿ ಹೊಂದಿದ್ದ ಕುಂಟೀರಪನನ್ನು ಅಳಿಯನನ್ನಾಗಿಸಿಕೊಂಡು ಊರಲ್ಲಿ ಮಾಡಬಾರದ ಕೆಲಸಗಳನ್ನೆಲ್ಲ ಮಾಡಿಸುತ್ತಾನೆ.

ಶಾಲೆ, ಆಸ್ಪತ್ರೆ ತರುವ ದುರುದ್ದೇಶದಲ್ಲಿ ವಸಾಹತುವನ್ನು, ಕೈಮಾಡಿ ಕರೆದು ಶಿವಾಪುರವನ್ನು ಅವನತಿಯತ್ತ ದೂಡಿದ ಕೊನೆಗೆ ತಾನು ಮಾಡಿದ ತಪ್ಪಿನ ಅರಿವಾಗಿ ಕೊರಗಿ ಕೊರಗಿ ಸಾಯುತ್ತಾನೆ. ಈ ಪಾತ್ರ ವಸಾಹತುವನ್ನು ನಾವು ಒಳಗೆ ತಂದರೆ ಕೊನೆಗೆ ಅದೇ ನಮ್ಮನ್ನು ನುಂಗಿಹಾಕುವುದು. ಇದಕ್ಕೆ ಪರ್ಯಾಯವಾಗಿ ಚೆಂಬಸ ಮತ್ತು ನಮಶ್ಶಿವಾಯ ಸ್ವಾಮಿಯಂತವರು ಈ ವಸಾಹತು ಆಗಮನ ತಡೆದು ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವುದನ್ನು ಕಾದಂಬರಿ ಚಿತ್ರಿಸುತ್ತದೆ.

ಶಿವಾಪುರ ಎನ್ನುವುದು ಎಷ್ಟೇ ಹದಿಗೆಡುತ್ತಿದ್ದರೂ ಅದನ್ನು ಮತ್ತೆ ಸರಿಪಡಿಸುವ ವ್ಯಕ್ತಿಯನ್ನು ಯಾವುದೇ ಒಂದು ಶಕ್ತಿ ಸತ್ಯದ ಮಾರ್ಗದಲ್ಲಿ ಇದೆ ಎನ್ನುವುದಕ್ಕೆ ಶಿವಾಪುರದ ಗುಡ್ಡದಲ್ಲಿ ನಮಶ್ಶಿವಾಯ ಸ್ವಾಮಿ ಸಾಕ್ಷಿಯಾಗಿ ನಿಲ್ಲುತ್ತಾನೆ. ಚೆಂಬಸನೆಂಬ ವ್ಯಕ್ತಿಯಲ್ಲಿ ಶಕ್ತಿ ತುಂಬಿ ಅನ್ಯಾಯ ತಡೆಗಟ್ಟುವ ಸ್ಫೂರ್ತಿತುಂಬಿ ದೇಶಿಯ ಸತ್ವ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಾನೆ.

"ಸ್ವಚ್ಛಂದವಾದ ಶಿವಾಪುರದಲ್ಲಿ ಯಾವುದೇ ಕೊಲೆ ಸುಲಿಗೆಗಳು ಇರಲಿಲ್ಲ. ಎಲ್ಲ ಜಾತಿಯ ಜನರು ತಮ್ಮ ತಮ್ಮ ವೃತ್ತಿಯಲ್ಲಿ ತೊಡಗಿಕೊಂಡಿದ್ದರು. ಆದರೆ ಇತಿಹಾಸ ಸೃಷ್ಟಿಯಾದ ಮೇಲೆ ಊರಲ್ಲಿ ವ್ಯಾಜ್ಯಗಳು ಹುಟ್ಟಿಕೊಂಡವು, ಕೊಲೆ ಸುಲಿಗೆಗಳು ಉಂಟಾದವು. ಇದಕ್ಕೆ ಪರ್ಯಾಯವಾಗಿ ಪಕ್ಕದ ಗ್ರಾಮ 'ಯಮಕನ ಮರಡಿಯಲ್ಲಿ' ಪೋಲಿಸ್ ಸ್ಟೇಷನ್ ಬಂದಿತು, ಮತ್ತು ದೇವರುಗಳು ಕೂಡಾ ಮಳೆಬೆಳೆ ವಿಷಯವಾಗಿ ಮಾತನಾಡದೆ ಚುನಾವಣೆಗಳ ಭವಿಷ್ಯ ನುಡಿಯುತ್ತಿವೆ"[2] ಎಂಬ ಮಾತಿನಲ್ಲಿ ಶಿವಾಪುರ ಎನ್ನುವ ಊರಿನಲ್ಲಿ ಜನರ ಜೀವನದ ಲಯ ತಪ್ಪಿದೆ ಎಂಬ ಅಂಶವು ಆಧುನಿಕತೆ ಉಂಟುಮಾಡಿದ ಪರಿಣಾಮವನ್ನು ತಿಳಿಪಡಿಸುತ್ತದೆ. ಸೊಕ್ಕಿ ಹರಿಯುತ್ತಿದ್ದ ಹರೆಯದ ನದಿ ತೆರೆಗಳೀಗ ಸುಕ್ಕಿನ ತೆರೆಗಳಾಗಿವೆ ಹೀಗೆ ಇವೆಲ್ಲ ಹೇಳಿಕೆಗಳು ಶಿವಾಪುರ ಚಿತ್ರಣ ಬದಲಾದ ಬಗೆಯನ್ನು ಚಿತ್ರಿಸುತ್ತದೆ. ಇದಕ್ಕೆ ಪರ್ಯಾಯ ಮಾರ್ಗವೇನು? ಎಂಬುದಕ್ಕೆ ಉತ್ತರ ಕಂಡುಕೊಳ್ಳುವಲ್ಲಿ ಕಾದಂಬರಿಯ ಹುಡುಕಾಟ ತುಂಬಿದೆ.

ಅಂದು ತುಂಬಿ ಹರಿಯುತ್ತಿದ್ದ ಮಲ್ಲಿಮಡು ಈ ಹೊತ್ತು ಬತ್ತಿ ಒಣಗಿದ ಹಳ್ಳವಾಗಿದೆ. ಊರಿಗೆ ಗೌಡ 'ಪ್ರಗತಿ' ತರುವ ಅವಸರದಲ್ಲಿ ಇಂಗ್ಲೀಷ್ ಸ್ಕೂಲ್ ಕಟ್ಟಲು ಈ ಮಲ್ಲಿಮಡು

ಪ್ರದೇಶವನ್ನೇ ಆಯ್ಕೆ ಮಾಡಿಕೊಂಡಾಗ ಎರಡು ನೀಲಗಿರಿ ಮರ ನೆಟ್ಟಾಗ ಆ ಮರಗಳು ನೆಲದ ನೀರನ್ನೆಲ್ಲಾ ಹೀರಿ ಜೋಡಿ ದೆವ್ವಗಳಂತೆ ತೂಗಾಡುತ್ತಾ ನಿಂತಿವೆ ಎಂಬ ಹೇಳಿಕೆಗಳು ಕಾದಂಬರಿಯಲ್ಲಿ ಇದ್ದು, ಹೊರಗಿನಿನಿಂದ ಬಂದ ಕುಂಟೀರಪ ಮತ್ತು ಬಿಗ್‌ಬಾಸ್‌ರು ನೀಲಗಿರಿ ಮರಗಳೇ ಆಗಿದ್ದಾರೆ. ಇವರು ಶಿವಾಪುರದ ಅಂತಃ ಸತ್ವ ಹೀರ ತೊಡಗಿದರು. ತ್ಯಾಜ್ಯ ತುಂಬಿ ರೋಗರುಜಿನುಗಳು ಉಂಟಾಗುವಂತೆ ಮಾಡಿದರು. ಇದರಿಂದಾಗಿ ಶಿವಾಪುರದಲ್ಲಿ ರೋಗರುಜಿನುಗಳು ಉಂಟಾಗಿದ್ದಲ್ಲದೇ, ಶಾರಿ ಮತ್ತು ಬಲವಂತನ ಮಗಳ ಮೇಲೆ ಅತ್ಯಾಚಾರ ನಡೆದವು. ಇದಕ್ಕೆಲ್ಲಾ ಬೆಂಬಲವಾಗಿ ಕುಂಟೀರಪ್ಪನಂತ ಕುತಂತ್ರ ವ್ಯಕ್ತಿ ಇದ್ದ. ಇನ್ನು ಶಿವಾಪುರಕ್ಕೆ ಅಮೇರಿಕಾ ಜಾಕ್ಸನ್ ಕಂಪನಿ ಕಾಲಿಟ್ಟಿದ್ದರಿಂದ ಊರಿನ ಲಯ ತಪ್ಪಿ ಹೋಯಿತು. ಜಾಗತೀಕರಣದ ಸುಳಿಗೆ ಸಿಕ್ಕ ಶಿವಾಪುರ ಸಮುದಾಯ ತತ್ತರಿಸಿ ಹೋಯಿತು. ಹೀಗೆ ಜಾಗತೀಕರಣ ಮತ್ತು ಹೊಸ ವಸಾಹತುಶಾಹಿ ಹೇಗೆ ಹರಡುತ್ತಾ ಹೊರಟಿದೆ ಎಂಬ ಕಹಿ ಸತ್ಯವನ್ನು ಕಾದಂಬರಿ ಶಿವಾಪುರದ ಮೂಲಕ ಚಿತ್ರಿಸುತ್ತದೆ.

ಶಿವಾಪುರದಲ್ಲಿನ ನಾಯಕನಾಗಿ ಗುರ್ತಿಸಿಕೊಂಡವ ಚೆಂಬಸ. ಈತ ಮಣ್ಣಿನ ಅಂತ:ಸತ್ವ ಅರಿತನು. ಒಳಿತು ಕೆಡಕನ್ನು ಗುರ್ತಿಸುವ ಮತ್ತು ಅನ್ಯಾಯ ತಡೆಗಟ್ಟುವವನಾಗಿದ್ದು ಕೊನೆಗೆ ನಮಶ್ಶಿವಾಯ ಸ್ವಾಮಿ ಮತ್ತು ಶಿವಲಿಂಗನ ಆಜ್ಞೆಯಂತೆ ಈ ಚೆಂಬಸನಿಂದ "ಹೊಸ ಶಿವಾಪುರ" ಕಟ್ಟುವ ಶಿವನ ಡಂಗುರ ಸಾರುವ ಅಂಶವನ್ನು ಶಿವಾಪುರದ ಸುತ್ತಮುತ್ತಲಿನ ಅಂಶವಾಗಿ ಗುರ್ತಿಸಬಹುದು. ಹಾಗಾದರೆ ಕಾದಂಬರಿ ಮೂಲಕ, ಶಿವಾಪುರದ ಚಿತ್ರಣದ ಮೂಲಕ ಕಂಬಾರರು ಜಾಗತೀಕರಣವನ್ನು ತಡೆಗಟ್ಟಿ ದೇಶಿಯ ಅಂತಃಸತ್ವವನ್ನು ಕಾಪಾಡುವ ಬಗೆಯನ್ನು ಮತ್ತು ದ್ವೇಷ ಸಿಟ್ಟು, ಕೊಲೆ ಸುಲಿಗೆಗಳಿಲ್ಲದ, ಪ್ರೀತಿ ವಾತ್ಸಲ್ಯ ಮಮತೆ ಸಮಾನತೆ ತುಂಬಿದ ಆದರ್ಶ ಶಿವಾಪುರದ ಕನಸನ್ನು ಈ ಕಾದಂಬರಿಯಲ್ಲಿ ತೋರ್ಪಡಿಸಿದ್ದಾರೆ. ಕಂಬಾರರು ಅನ್ಯಾಕ್ರಮಣದಿಂದ ತನ್ನ ತನದ ಜೀವಚೈತನ್ಯವನ್ನು ಕಂಬಾರರು ಕಳೆದುಕೊಳ್ಳಲಿಲ್ಲ ಎಂಬುದಕ್ಕೆ ಅವರ ಶಿವಾಪುರ ಕಲ್ಪನೆ ಸಾಕ್ಷಿಯಾಗಿ ನಿಲ್ಲುತ್ತದೆ.

ಗಾಂಧಿ, ಬಸವಣ್ಣನಂತಹವರು ಕಂಡುಕೊಂಡಂತೆ ಆದರ್ಶ ರಾಜ್ಯದ ಕನಸನ್ನು ಕಂಬಾರರು "ಶಿವಾಪುರ" ಎನ್ನುವ ಆದರ್ಶ ಸಮಾಜದಲ್ಲಿ ಕಂಡುಕೊಂಡರು. ಶಿವಾಪುರ ಕಲ್ಪನೆ ಕುರಿತಾಗಿ ಅವರು ಒಂದೆಡೆ ಈ ರೀತಿ ಹೇಳುವರು "ಗಾಂಧೀಜಿ ಗುರ್ತಿಸಿದ ರಾಮ ರಾಜ್ಯದಂತೆ ಶಿವಾಪುರವನ್ನು ಗುರ್ತಿಸಿದ್ದಾರೆ. ಈ ಬಗೆಗೆ ನಾವು ಮತ್ತೇ ಹೋರಾಟ ಮಾಡಬೇಕಾಗುತ್ತೆ. ಶಿವಾಪುರದ ಕನಸು ಕಾರ್ಯರೂಪಕ್ಕೆ ಬರಲೇಬೇಕು ಅದು ಸಾಕ್ಷಾತ್ಕಾರ ಆಗಲೇಬೇಕು, ಶಿವಾಪುರದ ಕನಸು ನನಸಾಗಲಿಕ್ಕೆ ನಾವು ಕಾಯಬೇಕು"[೮]

ಶಿವಾಪುರ ಚಿತ್ರಣ ಹೀಗಿದೆ. ಘಟಪ್ರಭಾ ನದಿಯ 'ದಕ್ಷಿಣ ದಂಡೆಯ ಮೇಲೆ ನೀರಲ್ಲಿ ಕಾಲಿಳಿಬಿಟ್ಟಂತೆ ಕೂತಿರುವ ಶಿವಾಪುರದಲ್ಲಿ ಬರಮೇಗೌಡನದ್ದೇ ಒಡೆತನ ಹೆಂಡತಿ ಪಾರ್ವತಿಯನ್ನು ನಿರ್ಲಕ್ಷಿಸಿ, ದಲಿತಳು, ದೇವದಾಸಿಯಾಗಿದ್ದ ತುಂಗಿಯನ್ನು ತನ್ನವಳಾಗಿ ಮಾಡಿಕೊಂಡ. ಬರಮೇಗೌಡನ ತಮ್ಮನ ಮಗ ಚೆಂಬಸ ಈತನ ವಿರುದ್ಧ ದೆಸೆಯಲ್ಲಿ ಈಸುತ್ತಾನೆ. ಈತನ ಎಲ್ಲ ಚಟುವಟಿಕೆಗಳಿಗೆ

ವಿರೋಧ ಒಡ್ಡುತ್ತಾನೆ. ನಂತರ ಚೆಂಬಸ ತುಂಗಿಯ ಎದೆಹಾಲು ಕುಡಿದು ಬೆಳೆಯುತ್ತಾಳೆ, ದಲಿತ, ಸ್ತ್ರೀ ಮತ್ತು ದೇವದಾಸಿಯಾಗಿದ್ದ ಶಾರಿಯನ್ನು ಮದುವೆಯಾಗಿ ಜಾತಿ ಸಂಕರ ಮಾಡಿ ಸಮಾನತೆ ತರುವಲ್ಲಿ ಮುಂದಾಗುತ್ತಾನೆ. ಕುಂಟೀರಪನ ಕುತಂತ್ರಗಳಿಗೆ ವಿರೋಧ ಒಡ್ಡಿ ತನ್ನ ಹೆಂಡತಿ ಮನ ಕಳೆದ ಪೋಲಿಸರನ್ನು ರಾಡಿರಮೇಶ ಗಣಪರನ್ನು ಕೊಂದುಜೈಲಿಗೆ ಹೋಗಿ ವೀರನೆನಸಿ ಮರಳಿ ಶಿವಾಪುರಕ್ಕೆ ಕಾಲಿಡುತ್ತಾನೆ. ಕೊನೆಗೆ ಅಬಿವೃದ್ಧಿಯ ಆಶೆಯಿಂದ ಗೌಡ ಶಿವಾಪುರಕ್ಕೆ ಅಮೇರಿಕಾ ಜಾಕ್ಸನ್ ಕಂಪನಿಯನ್ನು ಬರಮಾಡಿಕೊಂಡ. ಕುಂಟೀರಪ್ಪನಿಗೆ ಊರಲ್ಲಿ ಬೆಳೆಯಲು ಬಿಟ್ಟ., ಹಾಗೇ ಊರಲ್ಲಿ ಕೊಲೆ ಸುಲಿಗೆ, ಅನ್ಯಾಯ ಅತ್ಯಾಚಾರ ನಡೆದರೆ ಬೆಂಬಲವಾಗಿ ನಿಲ್ಲುತ್ತಾನೆ. ಇವನ್ನೆಲ್ಲಾ ಮೆಟ್ಟಿ ಚೆಂಬಸವ ನಾಯಕನಾಗಿ ನಿಲ್ಲುತ್ತಾನೆ. ನಮಶ್ಶಿವಾಯ ಸ್ವಾಮಿ ಚೆಂಬಸನಿಗೆ ಮಾದೇವಿಯ ಮುಂದಿಟ್ಟುಕೊಂಡು ಹೊಸ ಶಿವಾಪುರ ಕಟ್ಟಬೇಕೆಂದು ಕರೆ ಹೀಗೆ ಕೊಡುತ್ತಾನೆ..

“ ಇದು ಸತ್ಯದ ಗುಡ್ಡ ನೀವು ಸತ್ಯದ ಶಿಷ್ಯರು

ಸತ್ಯದ ಶಿಷ್ಯರಿಗೆ ಬೇರೆ ಸತ್ಯವಿಲ್ಲವೋ ॥

ಇಲ್ಲಿ ಬರುವವರು ಸತ್ಯವಲ್ಲದೇ ಇನ್ನೊಂದನ್ನಾಡಬಾರದೋ।

ನಂಬಬಾರದು ನಡೆಯಬಾರದು ॥

ಸತ್ಯದ ನಾಮವ ನೆನೆದಲ್ಲಿ ಸಾನಿದ್ಯವಪ್ಪುದು

ಸಾನಿಧ್ಯದಲಿ ಸಕಲ ಪರಿಣಾಮವೋ ॥

ನಿನ್ನ ಭಾಗ್ಯದ ಮಗಳು ಬಾಗಿಲಲಿ ನಿಂತಾಳು

ನಿಂತಲ್ಲಿ ಹೊಸ ಶಿವಾಪುರ ರಚಿಸೋ ॥

ಇಂತಿದು ಶಿವನ ಡಂಗುರವೂ ॥”[೯]

ಎಂದು ಹೇಳುವಲ್ಲಿ ಕಂಬಾರರ ಕನಸಿನ ಆದರ್ಶ ಶಿವಾಪುರ ಕಲ್ಪನೆ ತುಂಬಿದೆ. ಇಲ್ಲಿ ತನಕಾ ಸಾಕಷ್ಟು ಅನುಭವಿಸಿದ್ದಾಯಿತು. ಇನ್ನು ಅದನ್ನೆಲ್ಲಾ ಮರೆತು ಸಮಾನತೆ ತರುವಂತ ಮಾದೆವಿಯ, ಮತ್ತು ಆಕೆಯ ಚಿಂತನೆಗಳನ್ನು ಮುಂದಿಟ್ಟುಕೊಂಡು ಈಗಿರೋ ಭ್ರಸ್ಟಾಚಾರ, ಕೊಲೆ, ಸುಲಿಗೆ ಇದ್ಯಾವುದೂ ಇಲ್ಲದ ಹೊಸ ಶಿವಾಪುರ ಕಟ್ಟಿ ಎನ್ನುವ ನಮಶ್ಶಿವಾಯನ ಮಾತಿನಲ್ಲಿ ಆಧುನಿಕತೆ ಮೆಟ್ಟಿ ನಿಲ್ಲುವ ಪರಂಪರೆಯನ್ನು ಉಳಿಸಿಕೊಳ್ಳುವ ವಿಚಾರಗಳಿರುವುದನ್ನು ಕಾಣಬಹುದು. “ಮಾದೇವಿಯ ಕಂಡು ಹೊಳ್ಯಾಗಿದ್ದ ಯಕ್ಷಿ ಓಡಿ ಹೋಯ್ತು”[೧೦] ಎಂದು ತುಂಗವ್ವ ಹೇಳುವ ಮಾತಿನಲ್ಲಿ ನೈಜತೆ ಇದೆ. ಇಲ್ಲಿ ಯಕ್ಷಿ ಎಂದರೆ ವಸಾಹತು, ಆಧುನಿಕತೆ ಎಂದು ಅರ್ಥವಾಗುತ್ತದೆ.

ಕಂಬಾರರು ಈ ಕಾದಂಬರಿಯಲ್ಲಿ ಸಮಕಾಲಿನ ಬದುಕನ್ನು ಮುಖಾಮುಖಿ ಮಾಡಿದ್ದಾರೆ. ಒಂದು ಕಾಲದ ಶಿವಾಪುರದ ಬದುಕಿನಲ್ಲಿ ಭೂಮಿ ಜನಗಳ ತಾಯಿಯಾಗಿತ್ತು. ಎಂತಹ ಅಪಾಯದ ಸ್ಥಿತಿಯಲ್ಲೂ ಕಾಪಾಡುವ ಜೀವನ ಮೌಲ್ಯಗಳಿದ್ದವು. ಅವನ್ನು ಉಳಿಸಿಕೊಳ್ಳಬಲ್ಲ ಜನರಿದ್ದರು. ಇಂಥ ಶಿವಾಪುರದ ಬದುಕಿನಲ್ಲಿ ಲಯ ತಪ್ಪಿ ಹೋಗಿದೆ. ಯಾಕೆ ಹೀಗಾಯಿತು? ಇದರ ಹುಡುಕಾಟವೇ ಶಿವನ ಡಂಗುರ ಕಾದಂಬರಿಯಾಗಿದೆ.

ಶಿವಾಪುರ ಎನ್ನುವ ಹಳ್ಳಿಯೊಂದರ ಬದುಕನ್ನು ಚಿತ್ರಿಸುತ್ತ ಜಾಗತೀಕರಣದ ಅಪಾಯ, ವಿನಾಶದ ನಗರಕೇಂದ್ರಿತ ಪರಿಕಲ್ಪನೆ , ಜನಪರ ಆತ್ಮನಾಶ, ಅನ್ಯಾಕ್ರಮ ನಮ್ಮ ಸೃಜನಶೀಲತೆಯನ್ನೇ ಕೊಲ್ಲುತ್ತಿರುವ ದುರಂತವನ್ನು, ಅಭಿವೃದ್ಧಿಯ ಹೆಸರಿನಲ್ಲಿ ಈ ನೆಲದ ಅಂತಃಸತ್ವವನ್ನೇ ಹಿರುತ್ತಿರುವ ಆಮದು ಯೋಜನೆಗಳ ದುಷ್ಪಾರಿಣಾಮ ಈ ಎಲ್ಲ ಅಂಶಗಳನ್ನು ಕಾದಂಬರಿಯಲ್ಲಿ ಗುರ್ತಿಸಬಹುದಾಗಿದೆ ಮತ್ತು ಪರ್ಯಾಯ ಮಾರ್ಗಗಳನ್ನು ತೋರಿಸಿಕೊಡಲಾಗಿದೆ. ಇಲ್ಲಿ ಪರ್ಯಾಯ ಮಾರ್ಗಗಳೆಂದರೆ ದೇಶಿಯತೆಯನ್ನು ಉಳಿಸಿಕೊಳ್ಳುವ ಸತ್ಯ ಸಮಾನತೆಯ ಮಾರ್ಗಗಳಾಗಿವೆ. ಚಂದ್ರಶೇಖರ ಕಂಬಾರರ ಶಿವಾಪುರ ಕಲ್ಪನೆಯಲ್ಲಿ ಸತ್ಯ, ನ್ಯಾಯ, ನೀತಿ, ಧರ್ಮಕ್ಕೆ ಬೆಲೆ ಕೊಟ್ಟು ಬಾಳುವ ಆದರ್ಶ ಸಮಾಜ ನಿರ್ಮಾಣವಾಗಬೇಕೆಂಬುದು ಬಸವಣ್ಣನವರ ಚಿಂತನೆಯನ್ನು ನೆನೆಪಿಗೆ ತರುತ್ತದೆ. ಅಂದರೆ ಬಸವಣ್ಣನವರು ತಮ್ಮ ಒಂದು ವಚನದಲ್ಲಿ....

"ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ

ಮುನಿಯಬೇಡ ಅನ್ಯಾರಿಗೆ ಅಸಹ್ಯ ಪಡಬೇಡ

ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ

ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ

ಇದೇ ನಮ್ಮ ಕೂಡಲಸಂಗಮ ದೇವರ ಒಲಿಸುವ ಪರಿ"[೧೧]

ಹೀಗೆ ಒಂದು ಆದರ್ಶ ಸಮಾಜ, ರಾಜ್ಯ ನಿರ್ಮಾಣವಾಗಬೇಕಾದರೆ ಕೊಲೆ ಸುಲಿಗೆ ಅನ್ಯಾಯ, ಅಕ್ರಮ, ಹುಸಿ, ನುಡಿ, ಸಿಟ್ಟು, ಅಸಹ್ಯ, ನಿಂದನೆ, ಇವ್ಯಾವು ಇಲ್ಲದ ವ್ಯಕ್ತಿಯಲ್ಲಿ ಶುದ್ಧತೆ ಇದ್ದು ಆದರ್ಶ ಚಿಂತನೆಗಳು ತುಂಬಿರುತ್ತವೆ. ಈ ಆದರ್ಶ ಚಿಂತನೆಗಳಲ್ಲಿ ಕಂಬಾರರ ಆದರ್ಶ ಸಮಾಜದ ಶಿವಾಪುರವನ್ನು ಗುರ್ತಿಸಬಹುದು.

ಒಟ್ಟಾರೆ ಕಂಬಾರರ ಕಟ್ಟ ಹೊರಟ ಹೊಸ ಶಿವಾಪುರವನ್ನು ಶಿವನ ಡಂಗುರ ಕಾದಂಬರಿ ಮೂಲಕ ಈ ಕೆಳಕಂಡಂತೆ ಗುರ್ತಿಸಬಹುದು. ಸ್ವಚ್ಚಂದ ಗಾಳಿ, ಮಳೆಯಿಂದ ಕೂಡಿದ , ಸಮಾನತೆ, ಸಹಕಾರ, ಸಹೋದರತೆಯನ್ನು ಹೊಂದಿರುವ, ಕೊಲೆ, ಸುಲಿಗೆ, ಅನ್ಯಾಯ,

ಅಕ್ರಮಗಳಿಲ್ಲದ ಎಲ್ಲರೂ ಸರಿಸಮಾನರಾಗಿ ದುಡಿದು ಜಿದ್ದರ ಎತ್ತಿ ಹಿಡಿದು ಒಂದಾಗಿ ಮುನ್ನಡೆಯುವ ಆದರ್ಶ ಸಮಾಜ ಕಟ್ಟಬೇಕೆಂಬುದು ಮತ್ತು ಮಾತ್ರ ಸಂಸ್ಕೃತಿಯನ್ನು, ಸೃಜನಶೀಲ ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳಸುವ ಚಿಂತನೆ ಒಳಗೊಂಡ ಶಿವಾಪುರ ಕಟ್ಟಬೇಕೆಂಬ ಕಂಬಾರರ ಕನಸನ್ನು ಶಿವನ ಡಂಗುರ ಕಾದಂಬರಿಯಲ್ಲಿ ಕಾಣಬಹುದಾಗಿದೆ.

ಕೊನೆ ಟಿಪ್ಪಣಿಗಳು

೧. ಚಂದ್ರಶೇಖರ ಕಂಬಾರ ಈವರೆಗಿನ ಹೇಳ್ತಿನ ಕೇಳಾ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ-೧೯೯೪ ಪುಟ- ೧೦೦

೨. ಸುಬ್ಬಣ್ಣ ಕೆ.ವಿ : ಮೊದಲು ಓದು, ಪುಸ್ತಕ ಮಾಲೆ (ಚಂದ್ರಶೇಖರ ಕಂಬಾರರ ಆಯ್ದ ಕವಿತೆಗಳು), ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ-೨೦೦೬ ಪುಟ- ೧೦

೩. ಚಂದ್ರಶೇಖರ ಕಂಬಾರ : ಎಲ್ಲಿದೆ ಶಿವಾಪುರ? ಕವನ ಸಂಕಲನ, ಪ್ರಕಾಶನ ಅಭಿನವ ಮಾರೇನಹಳ್ಳಿ ವಿಜಯನಗರ, ಬೆಂಗಳೂರು ೨೦೦೯. ಪುಟ- ೦೭

೪. ತಿಪ್ಪೇಸ್ವಾಮಿ ಎನ್: ನೆಲಸಂಪಿಗೆ, ಪ್ರಕಾಶನ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೪, ಪುಟ- ೨೬೩

೫. ಅದೇ ಪುಟ- ೬೮೭

೬. ಚಂದ್ರಶೇಖರ ಕಂಬಾರ: ಶಿವನ ಡಂಗುರ, ಅಂಕಿತ ಪ್ರಕಾಶನ ಬೆಂಗಳೂರು ೨೦೧೫, ಪುಟ- ೨೧

೭. ಅದೇ ಪುಟ ಸಂಖ್ಯೆ-೨೭

೮. ಎಲ್ಲಿದೆ ಶಿವಾಪುರ? : ಸಾಪ್ತಾಹಿಕ ಪ್ರಭ, ಕನ್ನಡ ಪ್ರಭ ದಿನಪತ್ರಿಕೆ ದಿ: ೨೮ನೇ ಅಕ್ಟೋಬರ ೨೦೧೨ ಪುಟ- ೦೧

೯. ಚಂದ್ರಶೇಖರ ಕಂಬಾರ: ಶಿವನ ಡಂಗುರ, ಅಂಕಿತ ಪ್ರಕಾಶನ ಬೆಂಗಳೂರು ೨೦೧೫, ಪುಟ- ೨೭೦

೧೦. ಅದೇ ಪುಟ ಸಂಖ್ಯೆ-೨೭೧

೧೧. ನಾಗಭೂಷಣಸ್ವಾಮಿ ಓ. ಎಲ್. (ಸಂ): ವಚನ ಸಾವಿರ, ಪ್ರಸಾರಂಗ ಕನ್ನಡ ವಿ.ವಿ ಹಂಪಿ ೨೦೦೪, ಪುಟ- ೧೧೨

ಅಧ್ಯಾಯ– ೬

ಅಂತರ್ಜಾತಿ ವಿವಾಹ

ಅಧ್ಯಾಯ- ೬

ಅಂತರ್ಜಾತಿ ವಿವಾಹ

ಭಾರತದಲ್ಲಿ 'ಜಾತಿ' ವ್ಯವಸ್ಥೆ ನಿರ್ಮೂಲನೆ ಆಗಬೇಕಾದರೆ ಅಂತರ್ಜಾತಿ ವಿವಾಹದಿಂದ ಸಾಧ್ಯವಾಗುತ್ತದೆ ಎಂಬುದು ಬಸವಾದಿ ಶಿವಶರಣರ ಕಲ್ಪನೆಯಾಗಿತ್ತು. ಅಂತೆಯೇ ಅವರು ಮಾದರ ಹರಳಯ್ಯನ ಮಗನಿಗೆ ಬ್ರಾಹಣ ಜಾತಿಯ ಮಧುವರಸನ ಮಗಳನ್ನು ಮದುವೆ ಮಾಡಲು ಮುಂದಾದರು. ಹಾಗೇ ಜ್ಯಾತಿ ವ್ಯವಸ್ಥೆ ಅಳಿಸಲು ಗಾಂಧಿ, ಅಂಬೇಡ್ಕರಂತವರು ಈ ಕುರಿತಾಗಿ ಚಿಂತನೆಯನ್ನು ಮಾಡಿದ್ದಾರೆ. ಆದರೆ ಇಂದಿಗೂ ಜಾತಿಯನ್ನು ಪೋಷಿಸುವ ಪಟ್ಟಬದ್ರ ಹಿತಾಸಕ್ತಿಗಳು ಸಮಾಜದಲ್ಲಿ ಇನ್ನೂ ತುಂಬಿವೆ. ಜಾತಿ ಎಂಬುದನ್ನು ಇಲ್ಲಿನ ಸಮಾಜವೇ ಹುಟ್ಟಿ ಹಾಕಿಕೊಂಡಿದ್ದಾಗಿದೆ. **ಶರಣರು, ದಾಸರು, ಗಾಂಧಿ, ಅಂಬೇಡ್ಕರ, ಲೋಹಿಯಾರ**ಂತಹ ಅನೇಕ ಸಮಾಜ ಚಿಂತಕರು ಈ ಜಾತಿಯನ್ನು ಮೆಟ್ಟಿ ನಿಲ್ಲಲು ಹರಸಾಹಸ ಗೈದಿದ್ದಾರೆ. "ಸಮಾಜ ಚಿಂತಕರು, ಹುಟ್ಟು ಹೋರಾಟಗಾರರಾದ **ಇಂಚಗೇರಿ ಆಧ್ಯಾತ್ಮ ಸಾಂಪ್ರದಾಯದ ಶ್ರೀ ಮಹಾದೇವರು** ಜಾತಿ ವ್ಯೆವಸ್ಥೆಯನ್ನು ಹೊಡೆದೋಡಿಸಲೆಂದು ತಮ್ಮ ಜೀವಿತಾವಾದಿಯಲ್ಲಿ ಸಾವಿರಾರು ಅಂತರ್ಜಾತಿ ವಿವಾಹ ಮಾಡಿದರು"[೧]. ಹಾಗೇ ಇಂದಿಗೂ ಸಮಾಜದಲ್ಲಿ ಜಾತಿ ವಿರುದ್ಧದ ಧ್ವನಿಗಳು ಕೇಳಿಬರುತ್ತಿವೆ. ಇಂತಹ ವ್ಯವಸ್ಥೆಯನ್ನು ವಿರೋಧಿಸಿದ್ದು ನವ್ಯ ಸಾಹಿತ್ಯವಾಗಿದೆ. "ಹಲವು ಅಪವಾದಗಳ ನಡುವೆಯೂ ನವ್ಯರು ಬದುಕನ್ನು ಹೊಸ ಚಿಂತನೆಗಳ ಮೂಲಕ ನೋಡಿ ಅರ್ಥೈಸುವ ವಿಧಾನ ರೂಪಿಸಿದರು. ಸಂಸ್ಕೃತಿಯ ಅನೇಕ ಬೇರುಗಳನ್ನು ಪರಿಷ್ಕರಿಸಿ ಮೌಲ್ಯಗಳನ್ನು ಪರೀಕ್ಷೆಗೊಳಪಡಿಸುವ, ತನ್ಮೂಲಕ ಪಾಶ್ಚಾತ್ಯ ವಿಚಾರಗಳ ಮುಖೇನ ನಮ್ಮನ್ನು ನೋಡಿಕೊಳ್ಳುವ ನವೀನ ಉಪಕ್ರಮವೊಂದನ್ನು ನಿರ್ಮಿಸಿದರು, ಬರಹದ ಮೂಲಕ ಅವರು ಸೃಷ್ಟಿಸಿದ ನವೀನ ವಿಚಾರಧಾರೆಗಳು ಆ ಕಾಲಕ್ಕೆ ಬದಲಾವಣೆಯ ಹೊಸ ದಾರಿಗಳಾಗಿ ಕನ್ನಡ ಸಾಹಿತ್ಯದಲ್ಲಿ ಗೋಚರಿಸಿದ್ದನ್ನು ಕಾಣಬಹುದು"[೨]

ಈ ಹಿನ್ನೆಲೆಯಲ್ಲಿ ಚಂದ್ರಶೇಖರ ಕಂಬಾರರ ಬರವಣಿಗೆಗಳು ನವ್ಯತೆಯನ್ನು ಪ್ರತಿಪಾದಿಸುತ್ತಿದ್ದು ಅವರ 'ಶಿವನ ಡಂಗುರ' ಕಾದಂಬರಿಯಲ್ಲಿ ನವ್ಯತೆ ಹಾಗೂ ದೇಶಿಯ ಚಿಂತನೆಗಳು, ವಸಾಹತು ನೀತಿ, ಆಧುನಿಕತೆ ವಿರೋಧವನ್ನು, ಮತ್ತು 'ಅಂತರ್ಜಾತಿ ವಿವಾಹ' ಕುರಿತ ಹೇಳಿಕೆಗಳು ಇವೆ. ಜಾತಿಯಿಂದ ವಿಮುಕ್ತಿ ಹೊಂದಿ ಸಮಾನತೆ ಕಂಡುಕೊಳ್ಳಬೇಕಾದಲ್ಲಿ ಅಂತರ್ಜಾತಿ ವಿವಾಹ ನಡೆಯಬೇಕು. ಇವು ಸಮಾಜವನ್ನು ಒಂದಾಗಿಸಲು ಸಹಾಕಾರಿ ಎನ್ನುವ ಚಿಂತನೆ ಕಂಬಾರರ ಶಿವನ ಡಂಗುರ ಕಾದಂಬರಿಯಲ್ಲಿದ್ದು ಆದರ್ಶ ಶಿವಾಪುರ ನಿರ್ಮಾಣ ಮಾಡಲು ಅಂತರ್ಜಾತಿ ವಿವಾಹಗಳು ಸಹಕಾರಿ ಎನ್ನುವ ನಿಲುವುಗಳು ಇರುವುದನ್ನು ಕಾಣಬಹುದು.

"ಭಾರತೀಯ ಸಂದರ್ಭದಲ್ಲಿ ಸ್ತ್ರೀ-ಪುರುಷರ ಸಂಬಂಧಗಳು ವಿವಾಹದ ಚೌಕಟ್ಟಿನೊಳಗೆ ಗುರ್ತಿಸಿ ಅದನ್ನು ಗಂಡು-ಹೆಣ್ಣುಗಳ ಭೌತಿಕ ಸಮ್ಮಿಲನದ ರೂಪದಲ್ಲಿ ಭಾವಿಸದೆ ಅದು ನಾಗರಿಕತೆ ಸಾಂಸ್ಕೃತಿಯ ಜಾತಿ ಸ್ವರೂಪದೊಂದಿಗೆ ಏರ್ಪಡಿಸಿಕೊಳ್ಳುವ ಸಂಬಂಧದ ಮೂಲಕವೂ ವಿಶ್ಲೇಷಿಸುವ

ಪದ್ಧತಿ ಬೆಳೆದು ನಿಂತಿದೆ"[5]. ಇದಕ್ಕೆ ಶಿವನ ಡಂಗುರದಲ್ಲಿ ಬರುವ ಬರಮೇಗೌಡ ಮತ್ತು ತುಂಗಿ ನಡುವಿನ ಸಂಬಂಧ ಗುರ್ತಿಸುತ್ತದೆ. ತುಂಗಿಯನ್ನು ಕಾಮಿಸಿ ಮೋಹಿಸಿ ಭೋಗದ ವಸ್ತುವಾಗಿ ಗುರ್ತಿಸಿ ಆಕೆಯನ್ನು ಹೆಂಡತಿಯೆಂದು ಒಪ್ಪಿಕೊಳ್ಳದೇ ಈತ ಪಟ್ಟಭದ್ರ ನೀತಿಗೆ ಜಾತಿಯ ಚೌಕಟ್ಟಿನಲ್ಲಿ ತನ್ನನ್ನು ತಾನು ಗುರ್ತಿಸಿಕೊಂಡ ಬಗೆಯನ್ನು ಕಾದಂಬರಿ ಚಿತ್ರಿಸುತ್ತದೆ. ಹಾಗೇ ಗೌಡ ಕುಲದ ಚೆಂಬಸನೆಂಬುವವ ದಲಿತಳೂ, ದೇವದಾಸಿಯೂ ಆಗಿದ್ದ ಶಾರಿ ಎನ್ನುವವಳನ್ನು ಪ್ರೀತಿಸಿ ಅಂತರ್ಜಾತಿ ವಿವಾಹವಾಗುತ್ತಾನೆ. ಮೇಲಿನ ಈ ಎರಡು ಅಂಶಗಳನ್ನು ಕಂಬಾರರು ಈ ಕಾದಂಬರಿಯಲ್ಲಿ ಮುಖಾಮುಖಿಯಾಗಿಸಿದ್ದಾರೆ. ಅಂದರೆ ಒಂದು ಜಾತಿಪರ ನಿಲುವನ್ನು ಸೂಚಿಸಿದರೆ ಇನ್ನೊಂದು ಜಾತಿ ವಿರುದ್ಧದ ಧ್ವನಿಯನ್ನು ಉಂಟುಮಾಡಿದೆ. ಬರಮೇಗೌಡ ಜಾತಿ ಚೌಕಟ್ಟಿನಲ್ಲಿ ಗುರ್ತಿಸಿಕೊಂಡರೆ ಚೆಂಬಸ ಪ್ರಗತಿಪರ ಚಿಂತನೆ ಹೊಂದಿ ಜಾತಿ ವ್ಯವಸ್ಥೆಯನ್ನು ಮೆಟ್ಟಿ ನಿಲ್ಲುವ ಬಗೆಯನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಕೊನೆಗೆ ಚೆಂಬಸ ಇದರಲ್ಲಿ ಯಶಸ್ವಿಯೂ ಆಗುತ್ತಾನೆ.

ಈ ಎರಡು ಚಿಂತನೆಗಳ ಮೂಲಕ ಕಂಬಾರರು ಕಟ್ಟಿಕೊಡುವ ಚಿಂತನೆ ಕುರಿತಾಗಿ ಚರ್ಚಿಸುವುದು ಮತ್ತು ಅಂತರ್ಜಾತಿ ಪರ ಇವರ ನಿಲುವುಗಳೇನು? ಮತ್ತು ಅಂತರ್ಜಾತಿ ಮದುವೆಗಳಿಂದ ಸಮಾಜದಲ್ಲಿ ಉಂಟಾಗುವ ತಲ್ಲಣಗಳೇನು? ಎಂಬುದನ್ನು ಪರಸ್ಪರ ಪಾತ್ರಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೈಯುವುದು ಬಹು ಮುಖ್ಯವೆನಿಸುತ್ತದೆ.

ಅಂತರ್ಜಾತಿ ವಿವಾಹಗಳು ಇಂದು ಆಧುನಿಕತೆಯಲ್ಲಿ ಬದಲಾವಣೇ ಸ್ವರೂಪ ಪಡೆದು ಹದಿಹರೆಯದ ಯುವಕ-ಯುವತಿಯಲ್ಲಿ ಉಂಟಾಗುವ ಮೋಹ, ಪ್ರಣಯಗಳಿಂದಾಗಿ ಅವು ಮದುವೆ ಎನ್ನುವ ಮೆಟ್ಟಿಲು ಏರುತ್ತಿದ್ದು ಜಾತಿ, ಧರ್ಮ, ಮತ, ಪಂಗಡಗಳನ್ನು ಲೆಕ್ಕಿಸುತ್ತಿಲ್ಲ. ಪ್ರಾಚೀನ ಭಾರತದಲ್ಲಿದ್ದ ವಿಭಿನ್ನ ವಿವಾಹ ಪದ್ಧತಿಗಳ ಮೂಲ ನೆಲೆಯು ಆಧುನಿಕ ಕಾಲದ ವಿವಾಹ ಕ್ರಮದ ಭಿನ್ನತೆಗೆ ಕಾರಣವಾಗಿದ್ದಿರಬಹುದು, ಅನ್ಯ ಧರ್ಮೀಯ, ಅನ್ಯಜಾತಿಯೊಂದಿಗಿನ ಉಲ್ಲೇಖದ ಪೌರಾಣಿಕ ಮತ್ತು ಚಾರಿತ್ರಿಕ ರೂಪಗಳು, ಘಟನೆಗಳು ವಿಕಾಸ ಹೊಂದಿದಂತೆ 'ಜಾತಿ' ಜೊತೆಗೆ ತಳಕು ಹಾಕಿಕೊಂಡು ಹೊಸ ಸಮಾಜದಲ್ಲಿ 'ಅಂತರ್ಜಾತಿಯ ಮತ್ತು ಅಂತಧರ್ಮೀಯ' ವಿವಾಹಗಳಾಗಿ ಬೆಳೆದು ಬರುತ್ತಿವೆ. ಜೊತೆಗೆ ಆಧುನಿಕ ಕಾಲದ ಬದುಕಿನ ಕ್ರಮಗಳೂ ಸಹ ಇಂತಹ ವಿವಾಹಗಳು ಹೆಚ್ಚಾಗಲು ಕಾರಣವಾಗಿವೆ. ಇವುಗಳು ಸಾಂಪ್ರದಾಯಿಕ ವಿವಾಹ ಪದ್ಧತಿಯನ್ನು ವಿರೋಧಿಸುವುದರ ಜೊತೆಗೆ ಸಮಾನತೆ ತರುವಲ್ಲಿ ಜಾತಿ ನಿರ್ಮೂಲನೆಗೊಳಿಸುವಲ್ಲಿ ಈ ಅಂತರ್ಜಾತಿ ವಿವಾಹಗಳು ಮಹತ್ವದ ಪಾತ್ರ ವಹಿಸುತ್ತವೆ. ಸಮಾಜದ ಬದಲಾವಣೆ ಉಂಟುಮಾಡುತ್ತವೆ ಎಂಬುದಕ್ಕೆ ಶಿವನ ಡಂಗುರ ಕಾದಂಬರಿಯಲ್ಲಿ ಕಂಡುಬರುವ ಅಂತರ್ಜಾತಿ ವಿವಾಹದಿಂದ ಗುರ್ತಿಸಬಹುದು ಈ ಎಲ್ಲ ಅಂಶಗಳ ಚರ್ಚೆಯನ್ನು ಈ ಮುಂದಿನಂತೆ ಕಾದಂಬರಿಯಲ್ಲಿ ಬರುವ ಚೆಂಬಸ ಶಾರಿ, ಬರಮೇಗೌಡ-ತುಂಗಿಯರ ಪಾತ್ರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಸೂಕ್ತ.

ಮೊದಲಿಗೆ ಅಂತರ್ಜಾತಿ ಮದುವೆಯನ್ನು ತಿರಸ್ಕರಿಸುವ ಬರಮೇಗೌಡನ ಕುರಿತಾಗಿ ಚರ್ಚಿಸೋಣ. ಬರಮೇಗೌಡ ಶಿವಾಪುರದಲ್ಲಿ ಕಂಡುಬರುವ ಬಹುಮುಖ್ಯ ವ್ಯಕ್ತಿಯಾಗಿ ಇಡೀ

ಊರಿನ ಒಡೆತನ ಹೊಂದಿದವನು. ಈತನ ವಂಶವನ್ನು ಗುರ್ತಿಸುವುದಾದರೆ ಬರಮೇಗೌಡನ ವಂಶದ ಇತಿಹಾಸ ಪುರುಷ ದ್ಯಾಮೇಗೌಡ ಪಾಶ್ಚಾಪುರದ ಮುಸ್ಲಿಂ ದೊರೆಯ ಸಣ್ಣ ಮಾಂಡಳೀಕರಾಗಿ ಮೆರೆದ ಗೌಂಡ ಕುಲದಲ್ಲಿ ಹುಟ್ಟಿದವ ಈತನ ವಂಶಜರು ವಂಶಪಾರಂಪರ್ಯಾವಾಗಿ ಬಂದ ಸಾವಿರಾರು ಎಕರೆ ಭೂಮಿಯನ್ನು ರೈತರಿಂದ ಸಾಗುವಳಿ ಮಾಡಿಸಿಕೊಂಡಿದ್ದರು. ಈ ದ್ಯಾಮೇಗೌಡನ ಆರನೇ ತಲೆಯ ಶಿವಗೊಂಡನಿಗೆ ಇಬ್ಬರು ಮಕ್ಕಳು ಬರಮೇಗೌಡ ಮತ್ತು ಈಸುರಗೌಡ. ಕುಳ್ಳ ಶರೀರ ಸ್ಥೂಲ ದೇಹಿಯಾದ ಬರಮೇಗೌಡ ವಿಲಾಸಿ ಜೀವನ ಸಾಗಿಸುತ್ತಿದ್ದ. ಅತ್ಯಂತ ಕಾಮುಕ ಸ್ವಭಾವ ಹೊಂದಿದ ಈತ ಊರ ಸ್ತ್ರೀಯರ ಸೌಂದರ್ಯವನ್ನು ಆಗಾಗ ನೋಡಿ ಆನಂದ ಪಡುತ್ತಿದ್ದ ಕುಡಚಿ ಗ್ರಾಮದ ಪಾರ್ವತಿ ಎಂಬ ಹೆಣ್ಣನ್ನು ಮದುವೆಯಾಗಿ 'ಬಾಗಿರ್ತಿ' ಎಂಬುವವಳಿಗೆ ಜನ್ಮ ನೀಡಿದರೂ ಆತನ ಕಾಮದಾಹ ತೀರಲಿಲ್ಲ.

ಪಾರ್ವತಿ ಅಷ್ಟೊಂದು ಸುಂದರಳಾಗಿಲ್ಲದ ಕಾರಣವಾಗಿ ಕಾಲಕ್ರಮೇಣ ಆಕೆಯನ್ನು ತಿರಸ್ಕರಿಸಿ, ಒಂದು ಸಾರಿ ಎಲ್ಲಮ್ಮನ ಜಾತ್ರೆಗೆ ಹೋದಾಗ ಅಲ್ಲಿ 'ಕರಿವರ್ಣದ ದೇವದಾಸಿ' ಮತ್ತು ದಲಿತಳಾದ ತುಂಗಿ (ತುಂಗವ್ವ)ಯನ್ನು ಕಂಡು ಆಕೆಯ ಅಂದ ಚೆಂದಕ್ಕೆ ಮಾರು ಹೋಗಿ ಕೂಡಲೇ ಆಕೆಯ ಹತ್ತಿರ ಹೋಗಿ ಅವಳ ಬಲಗೈ ಹಿಡಿದು 'ನಡವಾಳಿಯಲ್ಲಿ ಕೂಡಾವಳಿಯಲ್ಲಿ ನೀನು ನನ್ನ ಹೆಣ್ಣಾಗು, ಇಲ್ಲಾ ನನ್ನನ್ನು ಕೊಂದು ಹೋಗು"[8] ಎಂದು ಹೇಳಿ ತನ್ನವಳನ್ನಾಗಿಸಿಕೊಂಡ ತೆಳ್ಳನೆ ದೇಹ, ನೀಲಿಕಣ್ಣಿನವಳಾದ ತುಂಗಿ ತನ್ನ ಎದೆ ಬಾಗಿಲು ತೆರೆದು ಆತನನ್ನು ಒಳಕ್ಕೆ ಕರೆದುಕೊಂಡಳು. ನಂತರ ಅದೇ ದಿನರಾತ್ರಿ ಕಾಡಿನಲ್ಲಿ ಪರಸ್ಪರರು ಒಂದಾದರು. ಅದೇ ದಿನರಾತ್ರಿ ದೇವಿ ಇಬ್ಬರಿಗೆ ಆಶೀರ್ವದಿಸಿ ತುಂಗಿಗೆ ದೇವಿ ಕುಂಕುಮ ಸಿಡಿಸಿದಳು. ಮರುದಿನ ಗೌಡ ಆಕೆಯನ್ನು ತನ್ನೂರಿಗೆ ಕರೆದುಕೊಂಡು ಬಂದು ಶಿವಾಪುರದ ಹೊರಕೇರಿಯಲ್ಲಿ ಇರಿಸಿ ಆಕೆಗೊಂದು ಚಿಕ್ಕ ಮನೆಕೊಟ್ಟು ಇರಿಸಿದ. ಆದರೆ ಮದುವೆಯಾಗಲಿಲ್ಲ. ಅಲ್ಲದೇ ಬೇಕಾದಾಗಲೆಲ್ಲ ತುಂಗಿಯನ್ನು ತನ್ನ 'ವಿಲಾಸ ಖಾನಾ' (ತೋಟದಮನೆ)ಕ್ಕೆ ಕರೆಸಿಕೊಂಡು ಸುಖಭೊಗ ಅನುಭವಿಸುತ್ತಿದ್ದ. ಕೊನೆವರೆಗೂ ಆಕೆಯನ್ನು ಹೆಂಡತಿ ಎಂದು ಒಪ್ಪಿಕೊಳ್ಳಲಿಲ್ಲ. ಕಾರಣ 'ಜಾತಿ'ಯೆಂಬ ಭೂತ ಆತನನ್ನು ಕಾಡುತ್ತಿತ್ತು.

ದಲಿತಳಾದ ತುಂಗಿಯನ್ನು ಮತ್ತು ತನಗೆ ಹುಟ್ಟಿದ್ದ 'ಲಸಮ'ನೆಂಬ ಮಗನನ್ನು ಗೌಡ ಕುಲಕ್ಕೆ ಸೇರಿಸಿಕೊಂಡರೆ ಗೌಡ ಕುಲ ಹದಗೆಡುತ್ತದೆ ಎಂಬ ಭ್ರಾಂತಿಯಿಂದ ಅವರಿಬ್ಬರನ್ನು ದೂರವಿಟ್ಟ. ಇಲ್ಲಿ ಬರಮೇಗೌಡ ತುಂಗಿಯನ್ನು ಕೇವಲ ಭೋಗದ ವಸ್ತುವಾಗಿ ಗುರ್ತಿಸಿದನೇ ವಿನಃ ಹೆಂಡತಿಯಾಗಿ ಅಲ್ಲ. ತನ್ನ ಕಾಮದಾಹ ತೀರಿಸಿಕೊಳ್ಳಲು ಕೆಳಜಾತಿ ಎಂದು ಗುರ್ತಿಸದೇ ತುಂಗಿಯಿಂದ ದೈಹಿಕ ಸುಃಖ ಅನುಭವಿಸಿದ ಈತನಿಗೆ ಮದುವೆಯಾಗುವ ವಿಚಾರ ಬಂದಾಗ ಮಾತ್ರ ಜಾತಿ ಅಡ್ಡ ಬಂದಿತು. ಇದು ಇಲ್ಲಿವರೆಗೂ ಭಾರತದಲ್ಲಿ ನಡೆದುಬಂದ ಜಾತೀಯತೆಯನ್ನು ಎತ್ತಿ ತೋರಿಸುತ್ತದೆ. ಮನೆಯಲ್ಲಿ ಹೆಂಡತಿ ಇದ್ದೂ ಇನ್ನೊಂದು ಹೆಣ್ಣಿನ ಮೇಲೆ ಕಣ್ಣಾಕುವ ಸಮಾಜದ ಇಂತಹ ಕಚ್ಚೆ ಹರಕರನ್ನು ಏನು ಮಾಡಲು ಸಾಧ್ಯವಾಗುವುದಿಲ್ಲ ಕಾರಣ ಹಣ ಆಸ್ತಿಯಿಂದ ಎಲ್ಲವನ್ನೂ ಕೊಳ್ಳುವ

ದುಷ್ಟ ಚಿಂತನೆ ಇವರಲ್ಲಿ ಇರುತ್ತದೆ. ಮತ್ತು ಇಂತಹ ಭ್ರಷ್ಟರಿಗೆ ಕಾಮುಕರಿಗೆ ಅಮಾಯಕ ಸ್ತ್ರೀಯರು ಬಲಿಪಶುವಾಗುವ ಚಿತ್ರಣವನ್ನು ಮತ್ತು ಅಂತರ್ಜಾತಿ ವಿರೋಧದ ನಿಲುವನ್ನು ಈ ಪಾತ್ರ ಚಿತ್ರಿಸುತ್ತದೆ . ಮಾಲ್ಜಾತಿಯ ಜನಕ್ಕೆ ಕೆಳಜಾತಿಯ ಜನರ ಸಹಾಯ ಬೇಕು. ಭೂಮಿ, ಉಳಲೂ, ಬಿತ್ತಲು, ಬೆಳೆ ಬೆಳೆಯಲು, ಕಟ್ಟಿಗೆ ಒಡೆಯಲು, ಮತತು ಕಾಮ ದಾಹ ತೀರಿಸಿಕೊಳ್ಳಲು ದಲಿತರು ಬೇಕು. ಆದರೆ ಸಮಾಜದಲ್ಲಿ ಎಲ್ಲರೊಂದಿಗೆ ಬೆರೆಯಲು ಯಾವ ಹಕ್ಕು ಅವರಿಗಿಲ್ಲ ಎಂಬ ಚಿತ್ರಣ ಜಾತೀಯತೆಯನ್ನು ಪ್ರೋತ್ಸಾಹಿಸುವ ಪ್ರಭುತ್ವವನ್ನು ಶಿವನ ಡಂಗುರ ಕಾದಂಬರಿ ಚಿತ್ರಿಸುತ್ತದೆ.

ಕ್ಷತ್ರಿಯನಾದ ಬರಮೇಗೌಡ ಪ್ರಭುತ್ವದ ದುರಾಡಳಿತ ನಡೆಸುವ ಈತನಿಗೆ, ಬೇಸಿಗೆಯಲ್ಲಿ ತಂಗಾಳಿಯ ಸುಖ ನೀಡಲಿಲ್ಲ. ಮೃದುವಾದ ಹಾಸಿಗೆ, ಜೊತೆಗೆ ಪ್ರಾಯದ ಹೆಣ್ಣು, ಮಾಂಸ, ವಿಸ್ಕಿ ಇವಿಷ್ಟಿದ್ದರೆ ಸಾಕು ಎಲ್ಲವನ್ನೂ ಮರೆಯುತ್ತಿದ್ದ. ಈ ಜಾತಿ ವಿಷಯದಲ್ಲಿ ಜಾಗೃತನಾಗಿದ್ದ, ಕಾರಣ ತಾನು ಉಚ್ಚ ಕುಲದವನು ಎಂದು ಅಂತರ್ಜಾತಿ ವಿವಾಹಕ್ಕೆ ಒಪ್ಪದೇ ತಾನು ಬಯಸಿದ ತುಂಗಿಗೆ ಹೊರಕೆರೆಯಲ್ಲಿಯೇ ಮನೆ ಕೊಟ್ಟು ಇಟ್ಟುಕೊಂಡ ಪ್ರಸಂಗ ಜಾತಿಯತೆ, ಮತ್ತು ಯಜಮಾನಿಕೆಯನ್ನು ಪ್ರಸ್ತುತಪಡಿಸುತ್ತದೆ.

ಹೀಗೆ ಬರಮೇಗೌಡನ ಪಾತ್ರದ ಮೂಲಕ ಕಂಬಾರರು 'ಸಮಾಜದಲ್ಲಿ ಜಾತಿಯತೆಯನ್ನು ಉಳಿಸಿಕೊಳ್ಳುವಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಹೇಗೆ ಹೆಣಗುತ್ತಿವೆ ಎಂಬ ಅಂಶವನ್ನು ತಿಳಿಪಡಿಸಿದ್ದಾರೆ. ಪ್ರಗತಿಪರ ಚಿಂತನೆಗೆ ಮಹತ್ವ ಕೊಡುವ ಇಂದಿನ ಯುವಕರು ಈ ಸಮಾಜದ ಚೌಕಟ್ಟನ್ನು ಒಡೆದು ಹಾಕಿ ಅಂತರ್ಜಾತಿ, ಅಂತಧರ್ಮೀಯ ಮದುವೆಗಳನ್ನು ಆಗುತ್ತಿರುವುದು ಸಮಾಜದ ಪ್ರಗತಿಪರ ಚಿಂತನೆಯಾದರೂ ಈ ಅಂತರ್ಜಾತಿ ವಿವಾಹದಿಂದಾಗಿ ಸಮಾಜದಲ್ಲಾಗುತ್ತಿರುವ ತಲ್ಲಣಗಳೇನು? ಮತ್ತು ಮದುವೆಯಾದ ಯುವಕರು ಎದುರಿಸುವ ಸಮಸ್ಯೆಗಳು ಸವಾಲುಗಳನ್ನು ಮೆಟ್ಟಿ ಯಶಸ್ವಿ ಜೀವನ ಕಂಡುಕೊಳ್ಳುವ ಪ್ರಗತಿಪರ ಚಿಂತನೆಯನ್ನು ಕಂಬಾರರು ಚೆಂಬಸ-ಶಾರಿಯರ ಅಂತರ್ಜಾತಿ ವಿವಾಹದ ಮೂಲಕ ತಿಳಿಪಡಿಸಿದ್ದಾರೆ. ಚೆಂಬಸ ಆಧುನಿಕತೆಯಲ್ಲಿ ಪ್ರಗತಿಪರ ಚಿಂತನೆ ಕೈಕೊಂಡವ ತನ್ನ ಊರಲ್ಲಿ ಆಗುತ್ತಿರುವ ತಲ್ಲಣಗಳೇನು? ಅವುಗಳನ್ನು ಮೆಟ್ಟಿನಿಲ್ಲುವ ವಿಧಾನಗಳಾವುವು ಎಂದು ಚಿಂತನೆಗೈದು ಊರಲ್ಲಿ ಸಮಾನತೆ ಉಂಟುಮಾಡಲು ಚಿಂತನೆಗೈದವನು. ನವ್ಯ ಸಾಹಿತ್ಯವು ಇದೇ ಚಿಂತನೆಯನ್ನು ಒಳಗೊಂಡಿದೆ. ಅಂದರೆ "ಆಧುನಿಕ ಬದುಕಿನ ಒತ್ತಡ ಹಾಗೂ ಪರಂಪರಾಗತ ಬದುಕಿನ ಕ್ರಮ ಈ ಎರಡರ ಸಂಘರ್ಷದ ಮಧ್ಯೆ ವೈಯಕ್ತಿಕವಾಗಿ ತನ್ನ ನೆಲೆಯನ್ನು ಕಂಡುಕೊಳ್ಳುವ ಚಿಂತನೆ ನವ್ಯರ ಬರವಣಿಗೆಯ ಮೂಲ ಧ್ವನಿಯಾಯ್ತು"[೫]. ಹೀಗೆ ಬದುಕನ್ನು ಹೊಸ ಚಿಂತನೆಗಳ ಮೂಲಕ ನೋಡಿ ಅರ್ಥೈಸುವ ವಿಧಾನವನ್ನು ಶಿವನಡಂಗುರ ಕಾದಂಬರಿಯಲ್ಲಿನ ಚೆಂಬಸ-ಶಾರಿಯ ವಿವಾಹ ಪ್ರಸಂಗದಿಂದ ಅರಿಯಬಹುದು.

ಚೆಂಬಸ ಶಿವಾಪುರದ ಗೌಡ ಬರಮೇಗೌಡನ ತಮ್ಮ ಈಸುರಗೌಡನ ಮಗ. ತಾಯಿ ಸುಲದಾಳದ ಶಿವಕ್ಕ ಚೆಂಬಸನಿಗೆ ಜನ್ಮ ನೀಡಿ ನಂಜೇರಿ ಸತ್ತಳು. ಇತ್ತ ತಬ್ಬಲಿಯಾದ ಮಗುವನ್ನು ನೋಡಿಕೊಳ್ಳುವುದು ಹೇಗೆಂದು ಚಿಂತಿಸುತ್ತಿರುವಾಗ ಅದೇ ಊರಿನವಳಾದ ಬರಮೇಗೌಡನ ಉಪಪತ್ನಿ (ಸೂಳಿ)

ತುಂಗಿಯ ಲಸಮನೆಂಬ ಮಗನಿಗೆ ಜನ್ಮ ನೀಡಿದಳು. ಮುಂದೆ ಇಬ್ಬರು ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ತುಂಗಿಗೆ ಒಪ್ಪಿಸಿದರು. ಚೆಂಬಸನನ್ನು ತಾನು ಹೆತ್ತ ಮಗನಂತೆ ಎದೆ ಹಾಲುಣಿಸಿ ಬೆಳೆಸಿದಳು. ಈ ಚೆಂಬಸ ಆಡಿ ಬೆಳೆದದ್ದು ಹೊರಕೇರಿಯಲ್ಲಿ. ಆತ ಹುಟ್ಟಿನಿಂದ ಕ್ಷತ್ರಿಯ ಗೌಡ ಕುಲದವನಾದರೂ ತುಂಗಿಯ ಆರೈಕೆಯಲ್ಲಿ ಬೆಳೆದಿದ್ದರಿಂದ ಜಾತಿಯತೆಯನ್ನು ಗುರ್ತಿಸಲಿಲ್ಲ ಎಲ್ಲರೂ ಸರಿಸಮಾನರು ಎಂಬ ಚಿಂತನೆ ಅವನಲ್ಲಿತ್ತು. ಶಾಲೆಯಲ್ಲಿ ಈತನನ್ನು ರಾಡಿರಮೇಶನಂತಹವರು ಮುಟ್ಟಿಸಿಕೊಳ್ಳಲಿಲ್ಲ. ಕಾರಣ ಈತ 'ಅಸ್ಪೃಶ್ಯ ಸ್ತ್ರೀಯಾದ ತುಂಗವ್ವಳ' ಎದೆಹಾಲು ಕುಡಿದು ಬೆಳೆದವ ಎಂದು ಆವಾಗ ಚೆಂಬಸನಿಗೆ ಗೊತ್ತಾಯ್ತು. ತುಂಗವ್ವನಿರೋ ಸ್ಥಳ ಹೊರಕೇರಿಯೆಂದು, ಅಲ್ಲಿದ್ದವರೆಲ್ಲ ಅಸ್ಪೃಶ್ಯರೆಂದು ಊರವರೊಂದಿಗೆ ಸಮಾನವಾಗಿ ಬೆರೆಯುವ, ಮಾತನಾಡುವ ಊಟ ಮಾಡುವ ಯಾವ ಹಕ್ಕುಗಳು ಅವರಿಗಿಲ್ಲವೆಂದು'[1] ತಿಳಿಯಿತು. ಹೀಗೆ ದಲಿತರ ನೋವು, ಸಂಕಟಗಳನ್ನು ಅತೀ ಹತ್ತಿರದಿಂದ ಕಂಡ ಚೆಂಬಸನಿಗೆ "ಕರೀ ಮನಸ್ಸಿಗೆ ಇವೆಲ್ಲ ವಿಷಯಗಳು ಗೊತ್ತಿದ್ದರೂ ಗೊತ್ತಿಲ್ಲದವರಂತೆ ನಟಿಸುತ್ತಿದ್ದಾರೆಂದು"[2] ತಿಳಿದುಕೊಂಡು ಇದಕ್ಕೆ ಪರ್ಯಾಯ ಮಾರ್ಗ ಹುಡುಕುವುದರಲ್ಲಿ ಚಿಂತನೆಗೈದ. ಕಾಲಕ್ರಮೇಣ ಈ ಜಾತಿಯತೆ ವಿರುದ್ಧರ ಧ್ವನಿ ಎತ್ತಿ ನಿಲ್ಲಲು ಮುಂದಾದ. ಶಾಲೆಯಿಂದ ಬಿಡುವು ದೊರೆತಾಗಲೆಲ್ಲ ಚೆಂಬಸ ಲಸಮನಿಗೆ ಅಂಟಿಕೊಳ್ಳುತ್ತಿದ್ದ ಆತನ ಜೊತೆ ಕಾಡಿಗೆ ಹೋಗುತ್ತಿದ್ದ. ಕಾಡಿನ ಹತ್ತಿರದ ಚಳಿಮಳಿಯೇ 'ನೇರಳೆ' ನಡುಗಡ್ಡೆ. ಚೆಂಬಸ ಮತ್ತು ಲಸಮರಿಗೆ ನೇರಳೆ ಹಣ್ಣು ತುಂಬಾ ಇಷ್ಟವಾಗಿದ್ದವು. ಇವುಗಳ ಪಕ್ಕದಲ್ಲಿ ನಿರ್ವಾಣೆಪ್ಪನ ಗುಡಿಯಲ್ಲಿ ನಮಶ್ಶಿವಾಯ ಸ್ವಾಮಿ ಇದ್ದ. ಈತನ ಕಣ್ತಪ್ಪಿಸಿ ನೇರಳೆ ಹರಿದುಕೊಂಡು ಬರುತ್ತಿದ್ದರು. ಒಂದು ಸಾರಿ ಲಸಮ ಕಾರಿಹಣ್ಣು ಹರಿದುಕೊಂಡು ಮನೆಗೆ ಒಯ್ಯುತ್ತಿರವುದ ಕಂಡು ಯಾರಿಗೆ? ಎಂದಾಗ ನನ್ನ ಸೋದರ ಮಾವನ ಮಗಳು ಶಾರಿಗೆ ಎಂದ. ಇಬ್ಬರೂ ಶಾರಿ ಮನೆಗೆ ಹೋದಾಗ ಶಾರಿಯ ರೂಪ ಕಂಡು ಚೆಂಬಸ ಬೆರಗಾದ. ಅಲ್ಲದೆ ಕಾಡಿನಲ್ಲಿ ನೇರಳೆ ಹಣ್ಣು ತರಲು ಹೋದಾಗ ಹಿಂದೊಮ್ಮೆ ನೋಡಿದ್ದ. ಹೀಗೆ ಪರಸ್ಪರರಲ್ಲಿ ಭೇಟಿಯಾಗಿ ಅದು ಪ್ರೇಮವಾಯ್ತು. ಶಾರಿ ತುಂಗವ್ವನ ಅಣ್ಣನ ಮಗಳೆಂದು ತಿಳಿದುಕೊಂಡ ಚೆಂಬಸ ತನ್ನ ಎದೆಯಲ್ಲಿ ಶಾರಿಗೆ ಸ್ಥಾನ ಕೊಟ್ಟ . ಶಾರಿ ಮೂಲತಃ ದಲಿತಳು ಮೇಲಾಗಿ ಆಕೆಯನ್ನು ಬಾಲ್ಯದಲ್ಲಿಯೇ ದೇವರಿಗೆ ಬಿಡಲಾಗಿತ್ತು ಇದ್ಯಾವುದು ಚೆಂಬಸನಿಗೆ ಲೆಕ್ಕಕ್ಕೆ ಬರಲಿಲ್ಲ. ಕಾರಣ ತಾನೂ ದಲಿತ ಕೇರಿಯಲ್ಲಿ ಹುಟ್ಟಿ ಬೆಳೆದಿದ್ದ. ತಾನ್ಯಾಕೆ ಅವಳನ್ನ ಪ್ರೀತಿಸಬಾರದು? ಅಂದುಕೊಂಡ.

ಈ ವೇಳೆ ಆತನಲ್ಲಿ ಉಂಟಾದ ತಳಮಳವನ್ನು ಕಂಬಾರರು ಹೀಗೆ ಚಿತ್ರಿಸಿದ್ದಾರೆ. 'ಚೆಂಬಸ ತನ್ನ ಜಾತಿ ಬೇರೆ, ಕುಲ ಬೇರೆ, ಹುಟ್ಟಿದಾಗ ತುಂಗವ್ವನ ಹಾಲು ಕುಡಿದಿದ್ದಕ್ಕೆ ಜನ ತನ್ನನ್ನು ಹೊರಗಿಟ್ಟರ ಬೇಕಾದರೆ ಮದುವೆಯಾದರೆ ಬಿಡ್ತಾರೆಯೆ? ಇಲ್ಲ, ಜನ ಅಂದರೂ ಬಿಟ್ಟರೂ ಏನೀಗ?"[3] ಎಂದು ಯೋಚಿಸಿದ್ದ, ಮುಂದೇ ಸುಲದಾಳದ ಮದುವೆಯಲ್ಲಿ ಪರಸ್ಪರ ಹತ್ತಿರವಾದರು. ಪರಸ್ಪರ ಗಲ್ಲಕ್ಕೆ ಅರಿಸಿನ ಹಚ್ಚಿದರು. ಹೀಗೆ ಕಾಲಗತಿಸಿದಂತೆ ಇವರಿಬ್ಬರ ಪ್ರೇಮ ಕಡಿಮೆಯಂತೂ ಆಗಲಿಲ್ಲ. ಈ ವೇಳೆ ಕಾಲೇಜು ಕಟ್ಟಿ ಹತ್ತಿ ಬಿ.ಎ. ಓದಿ ಊರಿನ ಮೇಲೆ ಪ್ರಭಾವ ಬೀರಿದ. ಗುಡ್ಡದ ನೆತ್ತಿಯ ಹೊನ್ನೆ ಮರದಡಿ ಶಾರವ್ವ-ಚೆಂಬಸ ಪರಸ್ಪರ ಮತ್ತೆ ಭೇಟಿಯಾಗಿ ಮದುವೆ ಪ್ರಸ್ತಾಪ ಮಾಡಿಕೊಂಡರು. ಆಗ "ಶಾರಿ ಮಾವ ನಾ ದೇವದಾಸಿ! ಎಂದಳು.

ಅದು ಗೊತ್ತೈತಿ, ದೇವದಾಸಿ ಆಗಬೇಕಂತ ನಿನಗ ಆಸೆ ಇತ್ತೇನು?

ಎಂದಾಗ ಇಲ್ಲ ಎಂದಳು ಹಾಗಾದರೆ

ಈಗ ಮುತ್ತ ಹರದೊಗದ ಮದುವಿ ಆಗ್ತಿಯಾ? ಎಂದಾಗ ಆಕೇನಿ" ಎಂದಳು.

ಮುಂದೆ ಸಮಾಜದ ಎಲ್ಲ ಕಟ್ಟು ಪಾಡುಗಳನ್ನು ಮೀರಿ ಬೆಳಗಾವಿಯಲ್ಲಿ ರಿಜಿಸ್ಟರ್ ಮದುವೆ ಆಗಿಯೇ ಬಂದನು. ನಂತರ ಚಳುವಳಿಯಿಂದ ಬಂಧಿತನಾದ ವೇಳೆ ಶಾರಿಯ ಮೇಲೆ ಮೂರು ಜನ ಪೋಲಿಸರು ರಾಡಿರಮೇಶ, ಮತ್ತು ಗಣಪರು ಅತ್ಯಾಚಾರವೆಸಗಿದ್ದರು. ಇವರೆಲ್ಲರನ್ನೂ ಕೊಂದು ನದಿಗೆ ಎಸೆದು ನಂತರ ಜೈಲಿನಿಂದ ಬಿಡುಗಡೆ ಹೊಂದಿ ಶಾರಿಯನ್ನು ಹುಡುಕಿ ಮತ್ತೆ ತನ್ನ ಹೆಂಡತಿಯಾಗಿ ಸ್ವೀಕರಿಸಿದ ಕ್ರಮ ಪರಂಪರಾಗತ ವ್ಯವಸ್ಥೆಗೆ ಸೊಡ್ಡು ಹೊಡೆದು ನಿಂತಂತಿದೆ. ಕೊನೆಗೆ ತಾರಾ, ಬಿಗ್‌ಬಾಸ್, ಕುಂಟೀರಪ್ಪರಂಥ ಲಫಂಗರಿಂದ ಹದಿಗೆಟ್ಟ ಶಿವಾಪುರವನ್ನು ಸರಿಪಡಿಸುತ್ತಾನೆ. ಇಲ್ಲಿ ಚೆಂಬಸ ದೇವದಾಸಿ ತನವನ್ನು ಮೆಟ್ಟಿನಿಂತ ಶಾರಿಯನ್ನು ಪ್ರೀತಿಸಿದನು. ಶಾರಿ ದಲಿತಳಗಿದ್ದರೂ ಲೆಕ್ಕಿಸದೇ ಜಾತಿ ಸಂಕರ ಮಾಡಿದ ಆಕೆಯನ್ನು ಮದುವೆಯಾಗಿದ್ದು ಮತ್ತು ದುಷ್ಟರ ಅತ್ಯಾಚಾರಕ್ಕೆ ಒಳಗಾದ ತನ್ನ ಹೆಂಡತಿ ಶಾರಿಯನ್ನು ಮತ್ತೇ ಸ್ವೀಕರಿಸಿದ್ದು ಈ ಮೂರು ಅಂಶಗಳು ಪ್ರಗತಿಪರ ಚಿಂತನೆಗಳಾಗಿವೆ ಎಂಬುದನ್ನು ಕಾದಂಬರರಿ ಸ್ಪಷ್ಟಪಡಿಸುತ್ತದೆ. ಹಾಗೇ ಹದಿಹರೆಯದ ವೇಳೆ ಕಾಮ, ಮೋಹಗಳು ಹೇಗೆ ಉಂಟಾಗುತ್ತವೆ ಎಂದರೆ ಅವು ಜಾತಿಯನ್ನೂ ಮೀರಿ ನಿಲ್ಲುವ ಮಟ್ಟಕ್ಕೆ ಒಯ್ಯುತ್ತವೆ ಎಂಬ ಅಂಶವನ್ನು ಕಾಣುತ್ತೇವೆ.

ಹೀಗೆ ಜಾತಿಯನ್ನು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಅಂತರ್ಜಾತಿ ವಿವಾಹಗಳು ಸಹಕರಿಸುತ್ತವೆ ಎಂಬ ಮಾತಿಗೆ ಚೆಂಬಸ ಶಾರಿಯರ ಮದುವೆ ಸಾಕ್ಷಿಯಾಗಿ ನಿಲ್ಲುತ್ತದೆ. ಈ ವೇಳೆ ಸಮಾಜ ಅವರನ್ನು ಕೀಳಾಗಿ ತುಚ್ಛವಾಗಿ ಗುರ್ತಿಸಿದರೂ ಕೊನೆ ಕೊನೆಗೆ ಒಪ್ಪಿಕೊಳ್ಳುತ್ತದೆ. ಈ ಅಸಮಾನತೆಯನ್ನು ಮೆಟ್ಟಿ ನಿಲ್ಲುವ ಶಕ್ತಿ ಚೆಂಬಸನ ಪ್ರಗತಿಪರ ಚಿಂತನೆಯಲ್ಲಿ ಕಾಣಬಹುದಾಗಿದೆ.

ಬರಮೇಗೌಡನ ಪಾತ್ರ ಪರಂಪರಾಗತ ನೆಲೆಗೆ ಜಾತೀಯತೆಗೆ ಪೂರಕವಾಗಿದ್ದರೆ ಚೆಂಬಸನ ಪಾತ್ರ ಆಧುನಿಕತೆಯ ಪ್ರಗತಿಪರ ಚಿಂತನೆಗೆ ಪೂರಕವಾಗಿದೆ. ಇವೆರಡನ್ನು ಕಂಬಾರರು ಸಮಕಾಲಿನ ಬದುಕಿಗೆ ಮುಖಾಮುಖಿಯಾಗಿಸಿರುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಜಾತಿಯತೆಯಲ್ಲಿ ಮುಳುಗುವುದರಿಂದ ಸಮಾನತೆ ಸಾಧ್ಯವಿಲ್ಲ. ದಲಿತರು ದಲಿತರಾಗಿ ಮೇಲ್ಜಾತಿಯವರು ಮೇಲ್ಜಾತಿಯವರಾಗಿಯೇ ಉಳಿಯುತ್ತಾರೆ. ಅದೇ ಅಂತರ್ಜಾತಿ ವಿವಾಹವಾದರೆ ಜಾತಿ ಸಂಕರದಿಂದ "ಜಾತಿ" ಎನ್ನುವುದನ್ನು ಅಳಿದು ಹಾಕಿ ಎಲ್ಲರೂ ಸರಿಸಮಾನರಾಗಿ ಬಾಳಲು ಸಾಧ್ಯ ಎಂಬ ಪ್ರಗತಿಪರ ಚಿಂತನೆಯನ್ನು ಕಾದಂಬರಿ ಮೂಲಕ ಕಂಬಾರರು ಪ್ರತಿಪಾಲನೆ ಮಾಡಲು ಮುಂದಾಗಿರುವುದನ್ನು ಕಾಣುತ್ತೇವೆ.

ಕೊನೆ ಟಿಪ್ಪಣಿಗಳು

೧. ವಾಲಿ ಎ.ಸಿ. (ಡಾ): ಶ್ರೀ ಮಹಾದೇವರು, ಶ್ರೀ ಆಧ್ಯಾತ್ಮ ಟ್ರಸ್ಟ ಕಮೀಟಿ ಭಂಡಿವಾಡ ಪ್ರಕಾಶನ, ೨೦೧೫, ಪುಟ- ೯೮

೨. ರಘುನಾಥ. ಎಚ್.ಎಸ್: ಹೊಸಗನ್ನಡ ಕಾದಂಬರಿಗಳಲ್ಲಿ ಅಂತರ್ಜಾತಿಯ ಮತ್ತು ಮತಿಯ ವಿವಾಹ, ಪೂರ್ಣ ಪ್ರಕಾಶನ ಶಿವಮೊಗ್ಗ, ೨೦೧೦, ಪುಟ-೧೩೩

೩. ಅದೇ ಪುಟ- ೧೬

೪. ಕಂಬಾರ ಚಂದ್ರಶೇಖರ: ಶಿವನ ಡಂಗುರ ಕಾದಂಬರಿ, ಅಂಕಿತ ಪ್ರಕಾಶನ ಬೆಂಗಳೂರು, ೨೦೧೫, ಪುಟ-೩೧

೫. ರಘುನಾಥ ಎಚ್.ಎಸ್: ಹೊಸಗನ್ನಡ ಕಾದಂಬರಿಗಳಲ್ಲಿ ಅಂತರ್ಜಾತಿಯ ಮತ್ತು ಮತಿಯ ವಿವಾಹ, ಪೂರ್ಣ ಪ್ರಕಾಶನ ಶಿವಮೊಗ್ಗ, ೨೦೧೦, ಪುಟ-೧೩೨

೬. ಕಂಬಾರ ಚಂದ್ರಶೇಖರ: ಶಿವನ ಡಂಗುರ ಕಾದಂಬರಿ, ಅಂಕಿತ ಪ್ರಕಾಶನ, ಬೆಂಗಳೂರು, ೨೦೧೫,ಪುಟ-೪೦

೭. ಅದೇ ಪುಟ-೪೦

೮. ಅದೇ ಪುಟ-೬೩

* * * *

ಅಧ್ಯಾಯ– ೭

ಕಾದಂಬರಿಯಲ್ಲಿ ಸಂಘರ್ಷದ ನೆಲೆಗಳು

ಅಧ್ಯಾಯ- ೭

ಕಾದಂಬರಿಯಲ್ಲಿ ಸಂಘರ್ಷದ ನೆಲೆಗಳು

ಒಬ್ಬ ಲೇಖಕನ ಕೃತಿಯನ್ನು ಸಾಮಾಜಿಕ ಧಾರ್ಮಿಕ, ಆರ್ಥಿಕ, ರಾಜಕೀಯ-ಹೀಗೆ ಭಿನ್ನ ಭಿನ್ನ ಚೌಕಟ್ಟುಗಳಲ್ಲಿ ಸಾಂಸ್ಕೃತಿಕ ಪಥ್ಯವಾಗಿ ಅರಿಯುವಾಗ ಕೃತಿಯ ಒಳಗಡೆ ವ್ಯಕ್ತಿ-ವ್ಯಕ್ತಿತ್ವಗಳಲ್ಲಿ, ಧರ್ಮ, ಜಾತಿ, ಬೌದ್ಧಿಕ, ಮಾನಸಿಕತೆಗಳಿಂದ ಕೂಡಿದ ಸಂಘರ್ಷದ ಕೇಂದ್ರಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಿದಾಗ ಯಾವುದೇ ಕೃತಿಯಲ್ಲಿ ಸುಪ್ತವಾಗಿ ಅಡಕವಾದ ಲೇಖಕನ ವಿಚಾರಗಳನ್ನು ಅರಿಯಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಯಾವುದೇ ಒಬ್ಬ ಲೇಖಕ ತನ್ನ ಸುತ್ತಣ ಪರಿಸರ, ಆ ಪರಿಸರದಲ್ಲಿ ಉಂಟಾಗುತ್ತಿರುವ ವೈಪರಿತ್ಯಗಳು, ತಾಕಲಾಟಗಳು, ಸಂಘರ್ಷಗಳು, ಬದಲಾವಣೆಗಳನ್ನು ಗುರ್ತಿಸುತ್ತಾ ತನದಾಗ ಅನುಭವಗಳನ್ನು ತನ್ನ ಕೃತಿಯಲ್ಲಿ ಹಿಡಿದಿಡಲು ಪ್ರಯತ್ನಿಸುತ್ತಿರುತ್ತಾನೆ. ಇದಕ್ಕೆ ಚಂದ್ರಶೇಖರ ಕಂಬಾರರ ಕೃತಿಯೂ ಹೊರತಾಗಿಲ್ಲ.

ಬೆಳಗಾವಿ ಜಿಲ್ಲೆಯ ಪರಿಸರದಲ್ಲಿ ಹುಟ್ಟಿ ಬೆಳೆದ ಕಂಬಾರರು ತಮ್ಮ ಪರಿಸರದ ಮೇಲೆ, ತಮ್ಮ ಸಮಾಜದ ಜನರ ಮೇಲೆ ಉಂಟಾಗುತ್ತಿರುವ ಬದಲಾವಣೆಗಳನ್ನು ಕಂಡುಂಡವರು. ಜೊತೆಗೆ ದೇಶಿಯತೆಯಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡವರು. ಸದಾ ಪರಂಪರೆಯೊಂದಗಿನ ಅವರ ಒಡನಾಟ ಹೊಸ ಸಾಧ್ಯತೆಗಳನ್ನು ಹುಟ್ಟು ಹಾಕಿತು. ಅದೇ ದೇಶಿ ಚಿಂತನ. ಅನ್ಯಾಕ್ರಮಣದಿಂದ ಮತ್ತು ನಮ್ಮಲ್ಲೇ ಉದ್ಭವಿಸುತ್ತಿರುವ ಪ್ರಭುತ್ವದಿಂದಾಗಿ ಹಲವು ಸಂಘರ್ಷದ ನೆಲೆಗಳು ಹುಟ್ಟಿಕೊಂಡಿವೆ. ಅವು ಸಾಮಾಜಿಕವಾಗಿ, ರಾಜಕೀಯ, ಆರ್ಥಿಕ ಹೀಗೆ ಹಲವು ನೆಲೆಗಳಿಂದ ಸಮಾಜದಲ್ಲಿ ಸಂಘರ್ಷಗಳು ಹುಟ್ಟಿಕೊಳ್ಳುತ್ತಿರುವ ಬಗೆಯನ್ನು ಕಂಬಾರರು 'ಶಿವನ ಡಂಗುರ' ಕಾದಂಬರಿಯಲ್ಲಿ ಚಿತ್ರಿಸಿರುವುದನ್ನು ಕಾಣುತ್ತೇವೆ.

ಶಿವನ ಡಂಗುರ ಕಾದಂಬರಿಯು ಹಲವು ಸಂಘರ್ಷಗಳಿಂದಲೇ ಕೃತಿಯ ಒಳಬದುಕು ಅಸ್ತಿತ್ವ ಪಡೆದಿರುವುದನ್ನು ಕಾಣುತ್ತೇವೆ. ಕಾದಂಬರಿಯಲ್ಲಿ ಸಂಘರ್ಷದ ನೆಲೆಗಳನ್ನು ಗುರ್ತಿಸುವ ಮೊದಲು ಸಂಘರ್ಷ ಎಂದರೇನು? ಎಂದು ಗುರ್ತಿಸಿ ಆ ನಂತರ ಕಾದಂಬರಿ ಮೂಲಕ ಹೇಗೆ ಸಂಘರ್ಷದ ನೆಲೆಗಳು ಹುಟ್ಟಿಕೊಳ್ಳುತ್ತವೆ? ಮತ್ತು ಇದಕ್ಕೆ ಪರ್ಯಾಯ ಮಾರ್ಗಗಳೇನು? ಎಂಬುದನ್ನು ಅರಿಯೋಣ.

“ಸಂಘರ್ಷ ಎಂದರೆ ಸಾಮಾನ್ಯವಾಗಿ ತಿಕ್ಕಾಟ, ಘರ್ಷಣೆ, ಬಡಿದಾಟ” ಎಂದರ್ಥ. ಅಂದರೆ ವ್ಯಕ್ತಿ-ವ್ಯಕ್ತಿಗಳ ಮಧ್ಯೆ, ಸಮುದಾಯ-ಸಮುದಾಯದ ಮಧ್ಯೆ ಪರಂಪರೆ-ಇತಿಹಾಸಗಳ ಮಧ್ಯೆ ನಡೆಯುವ ಘರ್ಷಣೆಗಳಾಗಿವೆ. ಇಲ್ಲೊಂದು ವಿಷಯವನ್ನು ಸ್ಪಷ್ಟಪಡಿಸುವುದು ಅಗತ್ಯ

"ಸಂಘರ್ಷವೆಂದರೆ ಬರೀ ಎದುರು ಬದುಕಿನ ಜಗಳ, ಯುದ್ಧಗಳೆಂದಷ್ಟೇ ಭಾವಿಸಬೇಕಾಗಿಲ್ಲ, ವ್ಯಕ್ತಿಯ ಒಳಗೆ ವ್ಯವಸ್ಥೆ ಹುಟ್ಟಿಸಿದ ತಲ್ಲಣಗಳು ಮತ್ತು ಈ ತಲ್ಲಣಗಳನ್ನು ವ್ಯಕ್ತಿ ಎದುರಿಸುವ ಪರಿಗಳೆಲ್ಲ ಸಂಘರ್ಷದ ನೆಲೆಗಳೇ ಆಗಿವೆ"[೨] ಎಂಬುದನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ನೋಡುವುದಾದರೆ ಶಿವನ ಡಂಗುರ ಕಾದಂಬರಿಯಲ್ಲಿ ಕಂಡು ಬರುವ ಸಂಘರ್ಷದ ನೆಲೆಗಳನ್ನು ಈ ಕೆಳಕಂಡ ಅಂಶಗಳ ಮೂಲಕ ವಿಶ್ಲೇಷಣೆಗ್ಯೆಯುವುದು ಸೂಕ್ತವೆನಿಸುತ್ತದೆ.

ಸಮಾಜ ಎನ್ನುವುದು, ಹಲವು ಜಾತಿ ಮತ, ಪಂಥಗಳನ್ನು ಒಳಗೊಂಡ ಮತ್ತು ಸ್ತ್ರೀ-ಪುರುಷರು ಇರುವಂತಾದ್ದಾಗಿದ್ದು, ಅಸಮಾನತೆ, ಅನ್ಯಾಯ, ದೌರ್ಜನ್ಯ, ಯಜಮಾನಿಕೆಯನ್ನು ದುರ್ಬಲರ ಮೇಲೆ ಸಬಲರು ಮಾಡುವುದು ಸಹಜ. ಈ ವೈರುದ್ಯಗಳು ಸಮಾಜದಲ್ಲಿ ಸಾಮೂಹಿಕ ಸಂಘರ್ಷಗಳನ್ನು ಹುಟ್ಟು ಹಾಕುತ್ತವೆ. ಸ್ತ್ರೀ ಪುರುಷರಲ್ಲಿರುವ ಅಸಮಾನತೆಗಳು, ಮೇಲ್ವರ್ಗ ಕೆಳವರ್ಗದ ಮೇಲೆ ನಡೆಸುವ ದೌರ್ಜನ್ಯಗಳಿಂದ ನೊಂದ ಮನಸುಗಳಲ್ಲಿ ನೂವು, ಆಕ್ರೋಶ ತುಂಬಿಕೊಂಡಿರುತ್ತದೆ. ಈ ಆಕ್ರೋಶವು ಮೇರೆ ಮೀರಿದಾಗ ಸಂಘರ್ಷಗಳು ಉಂಟಾಗುವುದು ಸಹಜ ಇದನ್ನು ಶಿವನ ಡಂಗುರ ಕಾದಂಬರಿಯಲ್ಲಿಯೂ ಕಾಣಬಹುದು ಇದನ್ನು ಈ ಮುಂದಿನಂತೆ ವಿಷ್ಲೇಷಣೆ ಮಾಡಬಹುದಾಗಿದೆ.

೧. ಸ್ತ್ರೀ-ಪುರುಷರ ನಡುವಿನ ಸಂಘರ್ಷದ ನೆಲೆಗಳು

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯ ಮೇಲೆ ಕಾಲ ಕಾಲಕ್ಕೂ ದಬ್ಬಾಳಿಕೆ, ಅನ್ಯಾಯ ಅತ್ಯಾಚಾರಗಳು ನಡೆಯುತ್ತಾ ಬಂದಿರುವುದನ್ನು ಕಂಡಿದ್ದೇವೆ. ಕಾರಣ ಹೆಣ್ಣು ದುರ್ಬಲಳಾಗಿ ಉಳಿದಿರುವುದು ಈಕೆ ಸಬಲಳಿದ್ದರೂ ಸಮಾಜದ ವ್ಯವಸ್ಥೆ ಈಕೆಯನ್ನು ದುರ್ಬಲಳನ್ನಾಗಿಸಿದೆ. ಶಿವನ ಡಂಗುರ ಕಾದಂಬರಿಯಲ್ಲಿ ಬರುವ ಬರಮೇಗೌಡ-ತುಂಗಿ, ಪಾರ್ವತಿಯರ ಮಧ್ಯದ ಮಾನಸಿಕ ಹಿಂಸೆಯ ಘಟನೆಗಳು ಮತ್ತು ನೀಲಗಂಗು ಶಾರಿಯ ಮೇಲೆ ನಡೆಯುವ ಅತ್ಯಚಾರಗಳು ಮತ್ತು ಬರಮೇಗೌಡ ವ್ಯಸನಿಯಾಗಿ ಅನೇಕ ಸ್ತ್ರೀಯರ ಮೇಲೆ ಕಾಮುಕ ದೃಷ್ಟಿ ಬೀರಿದಂತಹ ಘಟನೆಗಳು ಸಮಾಜದಲ್ಲಿ ಸಂಘರ್ಷಗಳನ್ನು ಹುಟ್ಟುಹಾಕುವ ಪರಿಯನ್ನು ತೋರಿಸಿಕೊಡುತ್ತವೆ.

ಆದರ್ಶ ಗೃಹಿಣಿಯಾಗಿದ್ದ ಪಾರ್ವತಿ ಬರಮೇಗೌಡನಿಗೆ ತಕ್ಕ ಹೆಂಡತಿ. ಅಹಂಕಾರ, ದರ್ಪವಿಲ್ಲದ ಹೆಣ್ಣು, ಆದರೆ ಬರಮೇಗೌಡ ಈಕೆಗೆ ತಕ್ಕ ಗಂಡನಾಗಲಿಲ್ಲ ಆತನದು ವಿಲಾಸಿ ಬದುಕು ಹೆಣ್ಣು ಆತನಿಗೆ ಭೋಗದ ವಸ್ತುವಾಗಿ ಕಂಡಿದ್ದಳು. ತನಗೆ ಗಂಡು ಮಗುವನ್ನು ಹೆತ್ತುಕೊಡಲಿಲ್ಲ ಎನ್ನುವ ಒಂದೇ ಒಂದು ಕಾರಣದಿಂದ ಪಾರ್ವತಿಯನ್ನು ನಿರ್ಲಕ್ಷಿಸಿದ. ಬಾಗಿರ್ತಿಯೆಂಬ ಸುಂದರ ಮಗಳಿದ್ದರೂ ಅಷ್ಟೊಂದು ಒಲುಮೆ ತೋರಲಿಲ್ಲ. ಈ ವೇಳೆ ಪಾರ್ವತಿ ಮನದಲ್ಲಿ ಅನೇಕ ತಾಕಲಾಟಗಳು, ತಲ್ಲಣಗಳು ಹುಟ್ಟಿಕೊಂಡು, ಭಯ, ಆತಂಕಗಳ ನಡುವೆಯೇ ಕಾಲ ಕಳೆಯಬೇಕಾಯಿತು. ತನ್ನ ಗಂಡ ತನ್ನ ಬಿಟ್ಟು ಬೇರೊಬ್ಬ ಹೆಣ್ಣಿನ ಜೊತೆ ಸಂಪರ್ಕ ಹೊಂದಿದಾಗ ಆ ಸ್ತ್ರೀಯಲ್ಲಿ ಏಳುವ ತಾಕಲಾಟಗಳನ್ನು ಯಾರು ಕೇಳಬೇಕು? ಯಾರು ಕೇಳಿದಾದಾಗ ಆ ಹೆಣ್ಣು

ಅನುಭವಿಸುವ ನೂವು ಹೇಗಿರುತ್ತದೆ ಎಂಬುದನ್ನು ಪಾರ್ವತಿ ಪಾತ್ರದ ಮೂಲಕ ಗ್ರಹಿಸಬಹುದು. ಇಂತಹ ಘಟನೆಗಳು ಮನುಷ್ಯನ ಮನಸು ಮತ್ತು ಸಮಾಜದ ಸಂಘರ್ಷದ ಎಳೆಗಳಾಗಿ ಕಂಡುಬರುತ್ತವೆ. ಈ ಮಾನಸಿಕ ಘರ್ಷಣೆಯಿಂದ ಪಾರ್ವತಿ ದೈಹಿಕ, ಮಾನಸಿಕ ಎರಡೂ ಸುಖಗಳನ್ನು ಕಳೆದುಕೊಂಡು ಕೊರಗಿ ಕೊರಗಿ ಪ್ರಾಣ ಬಿಡುತ್ತಾಳೆ.

ಇನ್ನು ತುಂಗಿಯನ್ನು ಬರಮೇಗೌಡ ಪ್ರೀತಿಸಿದರೂ, ಆಕೆಯನ್ನು ಮದುವೆಯಾಗಲಿಲ್ಲ. ಕಾರಣ ಆಕೆ ದಲಿತಳೆಂದು ಗುರ್ತಿಸಿ ಆಕೆಯನ್ನು ಹೊರಕೇರಿಯಲ್ಲೇ ಇರಿಸಿದ. ಈ ತುಂಗಿಯ ಹಾಲು ಕುಡಿದು ಬೆಳೆದ ಲಸಮ ಮತ್ತು ಚೆಂಬಸರು ಬರಮೇಗೌಡ ಅಟ್ಟಹಾಸವನ್ನು ಮುರಿಯಲು ಮುಂದಾಗಿರುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಇನ್ನು ಬರಮೇಗೌ ತಾನು ಮತ್ತು ತನ್ನ ಅನೇಕ ಚೇಲಾಗಳ ಜೊತೆಗೂಡಿ ಊರಿನ ಅನೇಕ ಹರಿಯದ ಹೆಣ್ಣು ಮಕ್ಕಳ ಮೇಲೆ ಕಣ್ಣು ಹಾಕಿದ್ದ. ಇದರಿಂದ ಅನೇಕ ಸ್ತ್ರೀಯರಿಗೆ ಆಗಬಾರದ ಅನ್ಯಾಯಗಳು ನಡೆದು ಹೋದವು. ಇದು ಬೆಳಿತಾ ಬೆಳಿತಾ ಶಿವಾಪುರ ಎನ್ನುವ ಹಳ್ಳಿಯಲ್ಲಿ ಅಗೋಚರವಾದ ಕೊಲೆಸುಲಿಗೆ ನಡೆದು ಹೋದವು.

ಇವೆಲ್ಲ ಹೆಣ್ಣಿನ ಮೇಲೆ ಗಂಡಿನ ದಬ್ಬಾಳಿಕೆಯಿಂದ ಶಿವಾಪುರದ ಚಿತ್ರಣ ಬದಲಾಗಿರುವುದನ್ನು ಕಾಣುತ್ತೇವೆ. ಬರಮೇಗೌಡ ಮತ್ತು ಕುಂಟೀರಪ್ಪನ ಸಹಾಯದಿಂದ ಬಲವಂತನ ಮಗಳು ನೀಲಗಂಗು ಮತ್ತು ಚೆಂಬಸವನ ಹೆಂಡತಿ ಶಾರಿಯ ಮೇಲೆ ಅತ್ಯಾಚಾರಗಳು ನಡೆದವು ಇದರಿಂದಾಗಿ ರೊಚ್ಚಿಗೆದ್ದ ಚೆಂಬಸ ಅತ್ಯಾಚಾರವೆಸಗಿದ ಪೋಲಿಸರನ್ನು ರಾಡಿರಮೇಶ, ಗುಳಗೀ ಗಣಪರನ್ನು ಕೊಂದು ಹಾಕಿ ನದಿಯಲ್ಲಿ ಬಿಸಾಕಿದನು. ಹೀಗೆ ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳು ಸಂಘರ್ಷಗಳನ್ನು ಹುಟ್ಟಿ ಹಾಕುತ್ತವೆ ಎಂಬುದನ್ನು ತೋರಿಸಿಕೊಡುತ್ತದೆ. ಈ ವ್ಯವಸ್ಥೆ ಬದಲಾಗಬೇಕಾದರೆ ಸಮಾಜದಲ್ಲಿ ಹೆಣ್ಣು ಸಬಲಳಾಗಬೇಕು. ಮಾದೇವಿಯ ಹಾಗೆ ಆದರ್ಶಳಾಗಬೇಕು ಮತ್ತು ಬಾಗಿರ್ತಿ ರಾಜಕೀಯ ಪ್ರವೇಶಿಸಿ ಗ್ರಾ.ಪಂ. ಅಧ್ಯಕ್ಷಳಾಗಿ ಆದರ್ಶ ಚಿಂತನೆ ಹುಟ್ಟು ಹಾಕಿದಳು. ಹೀಗೆ ಹೆಣ್ಣು ಸಬಲಳಾದರೆ ಸಂಘರ್ಷ ಮೆಟ್ಟಿ ನಿಲ್ಲಲ್ಲು ಸಾಧ್ಯ ಎಂಬುದನ್ನು ಕಾದಂಬರಿ ಮೂಲಕ ಚಿತ್ರಿಸಿದ್ದಾರೆ.

೨. ಜಾತಿ ಸಂಘರ್ಷದ ನೆಲೆಗಳು

ಸಮಾಜದಲ್ಲಿ ಜಾತಿ ವರ್ಣ ವ್ಯವಸ್ಥೆಗಳು ಅನಾದಿಕಾಲದಿಂದಲೂ ಪಿಡುಗುಗಳಾಗಿ ಕಾಡುತ್ತಿವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರವೆಂಬ ವರ್ಣವ್ಯವಸ್ಥೆ ಮತ್ತು ಮೇಲ್ಜಾತಿ ಕೀಳ್ಜಾತಿಯೆಂಬ ತಾರತಾಮ್ಯ ಹುಟ್ಟಿ ಸಮಾಜದಲ್ಲಿ ಹಲವು ಸಂಘರ್ಷಗಳನ್ನು ಹುಟ್ಟುಹಾಕಿವೆ. ಈ ಜಾತಿ ವ್ಯವಸ್ಥೆ, ವರ್ಣ ವ್ಯವಸ್ಥೆ ಮೆಟ್ಟಿ ನಿಲ್ಲಲು ಸಮಾಜದಲ್ಲಿ ಅನೇಕ ಮಹಾತ್ಮರು, ಸಾಧು ಪುರುಷರು, ಶರಣರು ಎಷ್ಟೇ ಪ್ರಯತ್ನ ಪಟ್ಟರೂ ಇದನ್ನು ಅಳಿಸಿ ಹಾಕಲಾಗಲಿಲ್ಲ. ಕಾರಣ ಇದನ್ನು ಪೂರೈಸುವ ಪ್ರಬಲ ಸಮುದಾಯವಿದೆ. ಇದರ ವಿರುದ್ಧ ಧ್ವನಿ ಎತ್ತಿದವರ ಮೇಲೆ ದೌರ್ಜನ್ಯವೆಸಗುತ್ತಿದೆ. ಇದಕ್ಕೆ ಶಿವನ ಡಂಗುರ ಕಾದಂಬರಿಯಲ್ಲಿ ಬರುವ ಜಾತಿ ಸಂಘರ್ಷದ ನೆಲೆಗಳೇ ಸಾಕ್ಷಿಯಾಗಿ ಕಂಡುಬರತ್ತಿವೆ. ಬರಮೇಗೌಡ ಗೌಡಕುಲದಲ್ಲಿ ಹುಟ್ಟಿದವನಾದರಿಂದ ಶಿವಾಪುರದ ಊರಿನ ಗೌಡಕಿಕೆ ತಾನೇ ಪಡೆದು ಅನೇಕ ಕೆಳಜಾತಿ ಜನರ

ಮೇಲೆ ದೌರ್ಜನ್ಯವೆಸಗಿರುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಶಿವಾಪುರದ ಊರಿಗೆ ಸಾಮಾನ್ಯವಾಗಿ "ಉಳುವವನೇ ಭೂ ಒಡೆಯ" ಕಾಯ್ದೆ ಬಂದಿತು. ಚೆಂಬಸವನೆಂಬುವವ ತನ್ನ ಹೆಸರಿನ ಮೇಲೆ ಇದ್ದ ಅರವತ್ತೆಕರೆ ಭೂಮಿಯನ್ನು ದುಡಿಯುತ್ತಿದ್ದ ರೈತರಿಗೆ ಬಿಟ್ಟುಕೊಟ್ಟ. ಆದರೆ ಅದೇ ಬರಮೇಗೌಡ ಇದಕ್ಕೆ ವಿರುದ್ಧವಾಗಿ ನಿಂತ. ರೈತರಾಗಿ ದುಡಿಯುತ್ತಿದ್ದವರೆಲ್ಲರನ್ನು ಕೂಲಿಕಾರರೆಂದು ದಾಖಲೆ ತಿದ್ದಿಸಿ ಬಡರೈತರಿಗೆ, ದಲಿತರಿಗೆ ಮೋಸ ಮಾಡಿದ. ಸಹನೆ ಮೀರಿದ ನಾಲ್ಕು ಜನ ದಲಿತ ಯುವಕರು ಬೆಳಗಾವಿಯ 'ಅಂಬೇಡ್ಕರ ಸಂಘದ ಮೊರೆ ಹೊಕ್ಕರು'. ಮುಂದೆ ಬರಮೇಗೌಡನ ಅನ್ಯಾಯ ವಿರುದ್ಧ ಚಳುವಳಿಗಳು ಹುಟ್ಟಿಕೊಂಡವು. ಗಲಭೆಗಳು ಹುಟ್ಟಿಕೊಂಡವು. ಕೊನೆಗೆ ದಲಿತ ಸ್ತ್ರೀ ನೀಲಗಂಗು ಮತ್ತು ದಲಿತಳಾಗಿದ್ದ ಶಾರಿಯ ಮೇಲೆಯೂ ಅತ್ಯಾಚಾರದ ಘಟನೆಗಳು ಜರುಗಿದ್ದವು. ಇವೆಲ್ಲ ಜಾತಿ ಸಂಘರ್ಷದ ನೆಲೆಗಳಾಗಿಯೇ ಕಾದಂಬರಿಯಲ್ಲಿ ಬಿಂಬಿತವಾಗಿರುವುದನ್ನು ಕಾಣುತ್ತೇವೆ.

ಹೀಗೆ ಸ್ತ್ರೀಯರ ಮೇಲೆ ಮತ್ತು ಕೆಳವರ್ಗದ ಜನತೆಯ ಮೇಲೆ ನಡೆಯುತ್ತಿರುವ ಈ ದೌರ್ಜನ್ಯಗಳು ಸಂಘರ್ಷಗಳನ್ನು ಹುಟ್ಟುಹಾಕಿ ಸಮಾಜದ ಶಾಂತಿ ಕದಡುವ ಪ್ರಸಂಗವನ್ನು ಕಾದಂಬರಿ ಮೂಲಕ ಗುರ್ತಿಸಬಹುದು. ಸಮಾಜದ ಬದಲಾವಣೆಯ ಬಗ್ಗೆ ಸ್ಪಷ್ಟವಾದ ಕಲ್ಪನೆ ಹೊಂದಿ, ಕಾಳಜಿಹೊಂದಿ, ಸಮಕಾಲಿನ ಮೌಲ್ಯಗಳ ನೆಲೆಯಲ್ಲಿ ಇಂದಿನ ಸಮಾಜ ಕಟ್ಟಿಕೊಳ್ಳಬೇಕಾಗುತ್ತದೆ ಸಮಾಜದಲ್ಲಿ ಸಮಾನತೆ ಹುಟ್ಟು ಹಾಕುವಂತ ಪರ್ಯಾಯ ಮಾರ್ಗಗಳನ್ನು ಕಂಡುಕೊಂಡರೆ ಸಮಾಜದಲ್ಲಿ ನಡೆಯುವ ಸಂಘರ್ಷಗಳನ್ನು ತಡೆಯಲು ಸಾಧ್ಯವಾಗುತ್ತದೆ ಎಂಬುದನ್ನು ಮೇಲಿನ ಘಟನೆಗಳ ಹಿನ್ನೆಲೆಯಲ್ಲಿ ಗುರ್ತಿಸಬಹುದು.

> ಸಮಾಜದಲ್ಲಿ "ಕೆಡಕು ಅನ್ನುವುದು ಮನುಷ್ಯ ಮಾತ್ರರೆಲ್ಲರಲ್ಲೂ ಇರುವ, ಇದ್ದೇ ಇರುವದಾಗಿದ್ದು ಇದನ್ನು ಪಳಗಿಸಬೇಕಾದದ್ದು ಬದುಕಿನ ಕರ್ತವ್ಯ ವಿಧಿ"[೩] ಎನ್ನುವ ಓ. ಎಲ್. ನಾಗಭೂಷಣಸ್ವಾಮಿಯವರ ಮಾತು ಸರಿಯಾಗಿದೆ. ಅಂದರೆ ವ್ಯಕ್ತಿಯ ಒಳಗಿನ ಕೆಡಕು ನೀಗದೇ ವ್ಯಕ್ತಿಯ ಪರಿಸರ, ಊರು, ದೇಶ, ಸ್ವಚ್ಛ ಶುದ್ಧವಾಗಲಾರದು, ಶುದ್ಧವಾಗದೇ ಹೋದರೆ ಸಂಘರ್ಷಗಳು ಹುಟ್ಟುವುದು ಸಹಜವಾಗಿದೆ.

೩. ಸಮುದಾಯ ಮತ್ತು ರಾಜಕಾರಣ ಮಧ್ಯದ ಸಂಘರ್ಷಗಳು

ಸಮುದಾಯ ಮತ್ತು ರಾಜಕಾರಣದ ಸಂದರ್ಭವನ್ನು ಕುರಿತು ಕಂಬಾರರ ಬರಹಗಳು ಹಲವು ಒಳನೋಟ ಒದಗಿಸಿವೆ. ರಾಜಕಾರಣದ ಕೇಂದ್ರದಲ್ಲಿ ಅಸಹಾಯಕತೆ ವ್ಯಕ್ತವಾಗಿದೆ. ಹಾಗೇ ಸಮುದಾಯದ ಆತಂಕಗಳು ದಟ್ಟವಾಗಿರುವುದನ್ನು ಕಾಣುತ್ತೇವೆ. ಗೌಡಕಿಕೆ, ಡಿ.ಸಿ. ತಹಶೀಲ್ದಾರ, ತಲಾಟಿಯಂತ ಆಡಳಿತ ನಡೆಸುವವರು ಜನ ಸಮುದಾಯದ ಮಧ್ಯೆ ಅನ್ಯಾಯವೆಸಗಿದಾಗ ಸಹಜವಾಗಿ ಸಂಘರ್ಷಗಳು ಹುಟ್ಟಿಕೊಳ್ಳುತ್ತವೆ. ಹೊರಗಿನ ರಾಜಕಾರಣ ಮತ್ತು ಸ್ಥಳೀಯ ರಾಜಕಾರಣದಿಂದಾಗಿ ಸ್ಥಳೀಯರ ಮೇಲೆ ನಡೆಯುವ ಅನ್ಯಾಯ, ಅಕ್ರಮಗಳನ್ನು ಹೇಳತೀರದು. ರಾಜಕೀಯ ಅಟ್ಟಹಾಸದಲ್ಲಿ ಮುಗ್ಧ ಜನರ ನೋವು, ಶೋಷಣೆ. ಅನುಭವಿಸಿದ ಅಸಹಾಯಕತೆ ಇದ್ದು ಇದು ಮೇರೆ ಮೀರಿದರೆ ಸಹಜವಾಗಿ ಸಂಘರ್ಷಗಳು ಹುಟ್ಟಿಕೊಳ್ಳುತ್ತವೆ.

ಶಿವಾಪುರದಲ್ಲಿ ಬರಮೇಗೌಡನ ಅಭಿವೃದ್ಧಿ ಯೋಜನೆಯ ದುರಾಸೆಯಿಂದ ಹೊರಗಿನ ರಾಜಕೀಯ ಪ್ರವೇಶಿಸಿತು. ಅಂದರೆ ಬರಮೇಗೌಡ ಊರಿಗೆ ಸ್ಕೂಲು, ಕಾಲೇಜು, ಆಸ್ಪತ್ರೆ ಕಟ್ಟಿಸಲು ಯೋಜನೆ ರೂಪಿಸಿದ. ಮುಂದೆ ಊರಿಗೆ ಹೊರಗಿನಿಂದ ಬರಮೇಗೌಡನ ಅಳಿಯ ಕುಂಟೀರಪ ಕಾಲಿಟ್ಟ ಜೊತೆಗೆ ಅಮೇರಿಕಾ ಜಾಕ್ಸನ್ ಕಂಪನಿಯ ಬಿಗ್‌ಬಾಸ್ ಮತ್ತು ತಾರಾ ಬಂದರು. ಜೊತೆಗೆ ಡಿ.ಸಿ, ತಹಶೀಲ್ದಾರ ಎಲ್ಲರೂ ಕಾಲಿಟ್ಟು ಊರನ್ನು ಸ್ಮಶಾನ ಮಾಡ ಹೊರಟರು.

ಪವಿತ್ರವಾಗಿದ್ದ ಮಲ್ಲಿಮಡುವಿನಲ್ಲಿ ತ್ಯಾಜ್ಯ ತುಂಬಲು ಮುಂದಾದರು. ಇದರಿಂದ ಊರಲ್ಲಿ ರೋಗ-ರುಜಿನುಗಳು ಹುಟ್ಟಿಕೊಂಡವು. ಬಾಗಿರ್ತಿಗೆ ಅಂಗ ವೈಕಲ್ಯದ ಮಗಳು ಮತ್ತು ತುಂಗವ್ವನ ಎಮ್ಮೆಗೆ ವಿಕೃತ ಸಂತಾನಗಳು ಹುಟ್ಟಿಕೊಂಡವು. ಇದರಿಂದಾಗಿ ಸ್ಥಳಿಯರಲ್ಲಿ ವಿಕೃತ ಸಂತಾನಗಳು ಹುಟ್ಟಿಕೊಂಡವು. ಇದರಿಂದಾಗಿ ಸ್ಥಳಿಯರಲ್ಲಿ ಜಾಗೃತಿ ಮೂಡಿ ಚಳುವಳಿಗಳು ಹುಟ್ಟಿಕೊಂಡವು. ಇದನ್ನು ತಡೆಯಲು ಹೊರಗಿನಿಂದ ಪೋಲಿಸರು ಆಗಮಿಸಿ ಊರಿನ ಅಮಾಯಕ ಜನರ ಮೇಲೆ ದೌರ್ಜನ್ಯವೆಸಗಿ ಚಳುವಳಿ ದಮನ ಮಾಡಲು ಮುಂದಾದರು. ಜೊತೆಗೆ ಊರಿನ ದಲಿತರಾದ ಶಾರಿ, ನೀಲಗುಂಗುವಿನಂತ ಮುಗ್ಧ ಅಮಾಯಕ ಸ್ತ್ರೀಯರ ಮೇಲೆ ಅತ್ಯಾಚಾರಗಳು ಉಂಟಾದವು. ಈ ಹೊರಗಿನ ರಾಜಕಾರಣ ಊರಿಗೆ ಕಾಲಿಟ್ಟದ್ದರಿಂದ ಚೆಂಬಸವ ರೊಚ್ಚಿಗೆದ್ದು ಊರಲ್ಲಿ ಆತನಿಂದ ಐದು ಕೊಲೆ ಜರುಗಿದವು. ಹೊಗಿನಿಂದ ಬರುವ ಈ ರಾಜಕಾರಣದ ವ್ಯವಸ್ಥೆಯಿಂದ ಸ್ಥಳೀಯರಲ್ಲಿ ತಲ್ಲಣಗಳು ಉಂಟಾಗಿ ಸಂಘರ್ಷಗಳು ಹುಟ್ಟಿಕೊಳ್ಳುತ್ತವೆ ಎಂಬುದನ್ನು ಮೇಲಿನ ಅಂಶಗಳಿಂದ ವಿಶ್ಲೇಷಣೆಗೈಯಬಹುದಾಗಿದೆ.

೪. ಪ್ರಭುತ್ವ ಮತ್ತು ದುಡಿಯುವ ವರ್ಗದ ಸಂಘರ್ಷಗಳು

ಈಗಾಗಲೇ ಮೇಲೆ ಪ್ರಸ್ತಾಪಿಸಿದಂತೆ ಪ್ರಭುತ್ವವು ದುಡಿಯುವ ವರ್ಗದ ಮೇಲೆ ತನ್ನ ಅನ್ಯಾಯತನವನ್ನು ಪ್ರದರ್ಶಿಸುತ್ತಾ ಬಂದಿದ್ದು ಸಹನೆ ಮೀರಿದ ದುಡಿಯುವ ವರ್ಗ ಆಕ್ರೋಶಗೊಂಡಾಗ ಈ ತರಹದ ಆರ್ಥಿಕ ಅಸಮಾನತೆಯ ಸಂಘರ್ಷಗಳು ಹುಟ್ಟಿಕೊಳ್ಳುತ್ತವೆ. ಕಾದಂಬರಿಯಲ್ಲಿ ಬರುವ ಬರಮೇಗೌಡ ಸಾಕಷ್ಟು ಭೂಮಿ, ಆಸ್ತಿ ಹೊಂದಿದ್ದರೂ ಜನರ ಆಸ್ತಿಯ ಮೇಲೆ ಕಣ್ಣು ಹಾಕಿರುತ್ತಿದ್ದ. ಯಾವುದಾದರೂ ಬಡರೈತನಿಗೆ ಉತ್ತಮ ಭೂಮಿ ಇದ್ದರೆ ಆತನಿಗೆ ಸಾಲಸೂಲಕೊಟ್ಟಂತೆ ಮಾಡಿ ಬಡ್ಡಿ ಚಕ್ರಬಡ್ಡಿ ಹಾಕಿ, ಕೊನೆಗೆ ದುಡ್ಡು ಕೊಡದಾದಾಗ ಅವರ ಭೂಮಿಗಳನ್ನು ಮೋಸದಿಂದ ಕಸಿಕೊಂಡು ತನ್ನ ಹೆಸರಿಗೆ ಮಾಡಿಕೊಳ್ಳುತ್ತಿದ್ದ. ಅಲ್ಲದೇ ಊರಿಗೆ ಉಳುವವನೇ ಭೂ ಒಡೆಯ ಕಾಯ್ದೆ ಬಂದರೂ ದುಡಿಯುವಂತ ರೈತರಿಗೆ ಭೂಮಿಯನ್ನು ಕೊಡದೇ ತನ್ನದಾಗಿಯೇ ಇಟ್ಟುಕೊಂಡಿದ್ದ. ಇದರಿಂದ ತಮಗೆ ಅನ್ಯಾಯವಾಗುತ್ತಿದೆ ಎಂದು ಅರಿತ ಊರಿನ ದಲಿತ ಯುವಕರು ಬೆಳಗಾವಿಯ ಅಂಬೇಡ್ಕರ ಸಂಘದ ಮೊರೆ ಹೊಕ್ಕರು. ಊರಲ್ಲಿ ಸಭೆ ಸಮಾರಂಭ ಚಳುವಳಿ ಉಂಟಾದಾಗ ಅವುಗಳನ್ನು ದಮನ ಮಾಡಲು ಬರಮೇಗೌಡ ಕುಂಟೀರಪರು ಮುಂದಾದ ಪರಿಗಳೆಲ್ಲ ಸಂಘರ್ಷದ ನೆಲೆಗಳಾಗಿಯೇ ಕಂಡುಬರುವುದು ಮೇಲಿನ ಅಂಶಗಳಿಂದ ಅರಿಯಬಹುದಾಗಿದೆ.

ಒಟ್ಟಾರೆ ಸಮಾಜದಲ್ಲಿ ಸಂಘರ್ಷಗಳು ಜರುಗುವುದು ಸ್ತ್ರೀ-ಪುರುಷರಲ್ಲಿ ಮೇಲ್ವರ್ಗ-ಕೆಳವರ್ಗದವರಲ್ಲಿ ಅಸಮಾನತೆ ಅನ್ಯಾಯಗಳು ಉಂಟಾದಾಗ ಸಹಜವಾಗಿ ಸಂಘರ್ಷಗಳು

ಹುಟ್ಟಿಕೊಳ್ಳುತ್ತವೆ ಇಂತಹ ಸಂಘರ್ಷಗಳನ್ನು ತಡೆಯಬೇಕಾದರೆ ಹೊರಗಿನವರಿಂದ ಸಾಧ್ಯವಿಲ್ಲ ನಮ್ಮಲ್ಲಿ ಇರುವ ವ್ಯವಸ್ಥೆಯನ್ನು ಸರಿಪಡಿಸಿಕೊಂಡರೆ ಹೊರಗಿನ ರಾಜಕಾರಣ ಒಳಗೆ ಬರದಂತೆ ತಡೆದರೆ ದೇಶಿಯ ಅಂತಃಸತ್ವ ಅರಿತುಕೊಂಡು ನಮ್ಮೊಳಗಿನ ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳುವುದರ ಮೂಲಕ ಸಂಘರ್ಷಗಳನ್ನು ತಡೆಯಲು ಸಾಧ್ಯ ಎಂಬ ಅಂಶಗಳನ್ನು ಶಿವನ ಡಂಗುರ ಕಾದಂಬರಿಯಲ್ಲಿ ಬರುವ ಹಲವು ಸಂಘರ್ಷದ ನೆಲೆಗಳ ಮೂಲಕ ಗುರ್ತಿಸಬಹುದಾಗಿದೆ.

* * * *

ಕೊನೆ ಟಿಪ್ಪಣಿಗಳು

೧. ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ) : ಪ್ರಕಾಶನ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೧ ಪುಟ-೧೨೨೬

೨. ವಿಕ್ರಂ ವಿಸಾಜಿ: ನಾದಗಳು ನುಡಿಯಾಗಲೇ, ಪಲ್ಲವ ಪ್ರಕಾಶನ ಚನ್ನಪಟ್ಟಣ ಬಳ್ಳಾರಿ, ೨೦೦೮, ಪುಟ-೧೧೬

೩. ಬಗೆಬಗೆಯ ಡಿಸ್ಯನುಗಳ ಕಥೆಯ ನೇಯ್ಗೆ : ನಾಗಭೂಷಣಸ್ವಾಮಿ ಓ. ಎಲ್. ಮುಕ್ತಛಂದ ವಿಭಾಗ, ಪ್ರಜಾವಾಣಿ ದಿನಪತ್ರಿಕೆ, ಭಾನುವಾರ ೩ ನೇ ಜನೇವರಿ ೨೦೧೬ ಪುಟ- ೪

ಅಧ್ಯಾಯ– ೮

ಕೆಲವು ಮುಖ್ಯ ಪಾತ್ರಗಳ ವಿಶ್ಲೇಷಣೆ

ಅಧ್ಯಾಯ- ೮

ಕೆಲವು ಮುಖ್ಯ ಪಾತ್ರಗಳ ವಿಶ್ಲೇಷಣೆ

ಶಿವನ ಡಂಗುರ ಕಾದಂಬರಿಯಲ್ಲಿ ಹಲವಾರು ಪಾತ್ರಗಳಿದ್ದು ಪ್ರತಿಯೊಂದು ಪಾತ್ರವು ತನ್ನದೇ ಆದ ಮಹತ್ವ ಪಡೆದುಕೊಂಡಿದೆ. ಇದು ಮುಖ್ಯ ಇದು ಅಮುಖ್ಯ ಎಂದು ಹೇಳುವ ಹಾಗಿಲ್ಲ. ಎಲ್ಲವೂ ಸಮಾಜವನ್ನು ಪ್ರತಿಬಿಂಬಿಸುವಂತಿದೆ. ಸಮಾಜದಲ್ಲಿ ಪ್ರೀತಿ, ದ್ವೇಷ, ಅಸೂಹೆ, ಸಿಟ್ಟು, ಮೋಹ , ಮಮತೆ, ಒಳಿತು-ಕೆಡಕು ಎಲ್ಲ ಗುಣಗಳಿಂದ ಕೂಡಿದ ವ್ಯಕ್ತಿಗಳಿರುವಂತೆ ಕಾದಂಬರಿಯಲ್ಲಿಯೂ ಮೇಲಿನ ಎಲ್ಲ ಗುಣಗಳ ಹೊಂದಿರುವ ಪಾತ್ರಗಳಿವೆ. ಬರಮೇಗೌಡ, ಚೆಂಬಸ, ಕುಂಟೀರಪ್ಪ, ಈಸುರಗೌಡ, ರಾಡಿರಮೇಶ, ಗುಳಗಿ ಗಣಪ್ಪ, ನಮಶ್ಶಿವಾಯ ಸ್ವಾಮಿ, ಬಿಗ್ ಬಾಸ, ರಾಜಪ್ಪಗೌಡ, ಬಲವಂತ, ಶಾರಿ, ತುಂಗವ್ವ, ಬಾಗಿರ್ತಿ, ಪಾರ್ವತಿ, ಮಾಣಿಕಮ್ಮ, ಮಾದೇವಿ, ತಾರಾ, ಶಿವಕ್ಕ, ನಾಗಪ್ಪ-ಯಮನವ್ವ, ನೀಲಗಂಗು ಹೀಗೆ ಇವೆಲ್ಲ ಈ ಕಾದಂಬರಿಯಲ್ಲಿನ ಪಾತ್ರಗಳಾಗಿವೆ.

ಬರಮೇಗೌಡನ ವಿಲಾಸಿ ಬದುಕು ಮತ್ತು ದುರಾಡಳಿತ ಕುಂಟೀರಪ್ಪನ ಕುತಂತ್ರ, ಪಾರ್ವತಿಯ ಮುಗ್ಧತೆ, ಬಾಗಿರ್ತಿಯ ಅಸಹಾಯಕತೆ, ಚೆಂಬಸನ ಹೋರಾಟ ಮತ್ತು ನಾಯಕತ್ವ, ನಮಶ್ಶಿವಾಯನ ಮಾರ್ಗದರ್ಶನ, ಮಾದೇವಿಯ ಹೊಸ ಚಿಂತನೆ ಇನ್ನೂ ಮುಂತಾದ ಪಾತ್ರಗಳು ಒಂದೊಂದು ವ್ಯಕ್ತಿತ್ವವನ್ನು ಕಟ್ಟಿಕೊಡುತ್ತವೆ.

ಚಂದ್ರಶೇಖರ ಕಂಬಾರರ ಕುಲುಮೆಯಲ್ಲಿ ಯಾವ ಪಾತ್ರವೂ ಮೇಲು ಕೀಳಿನ ಝಳಕ್ಕೆ ತಾಗುವುದಿಲ್ಲ. ಎಂತಹ ನೀಚ ಮತ್ತು ಕುರೂಪಿ ಪಾತ್ರಗಳೂ ಇದ್ದರೂ ತನ್ನದೇ ಆದ ಒಂದು ವ್ಯಕ್ತಿತ್ವವನ್ನು ಹೊಂದಿರುತ್ತವೆ. ಕಾದಂಬರಿಯಲ್ಲಿ ಬರುವ ಪಾತ್ರಗಳು ಒಂದು ಸಮಾಜದ ಚಿತ್ರಣವನ್ನು ಕೊಡುತ್ತಿದ್ದು, ಹಳ್ಳಿ ಬದುಕಿನಲ್ಲಿ ಪ್ರಭುತ್ವ ಆಧುನಿಕತೆ, ಹಾಸುಹೊಕ್ಕಾದ ಬಗೆಯನ್ನು ಮತ್ತು ಸ್ವಚ್ಛಂದ ಹಳ್ಳಿಯನ್ನು ಕಟ್ಟಿಕೊಳ್ಳುವ ಬಗೆಯನ್ನು ಕಾದಂಬರಿಯ ವಿವಿಧ ಪಾತ್ರಗಳು ಚಿತ್ರಿಸುತ್ತವೆ. ಅಧ್ಯಯನಕ್ಕಾಗಿ ಕೆಲವು ಮುಖ್ಯ ಪಾತ್ರಗಳನ್ನು ಈ ಕೆಳಕಂಡಂತೆ ವಿಶ್ಲೇಷಣೆಗೈಯಬಹುದು.

೮.೧. ಪುರುಷ ಪಾತ್ರಗಳು

೧. ಬರಮೇಗೌಡ

ಶಿವನ ಡಂಗುರ ಕಾದಂಬರಿಯಲ್ಲಿ ಬರುವ ಶಿವಾಪುರದ ಬಹುಮುಖ್ಯ ವ್ಯಕ್ತಿ ಬರಮೇಗೌಡ, ಗೌಡಾಳಿಕೆಯ ಮನೆತನದಲ್ಲಿ ಜನಿಸಿದ್ದರಿಂದ ಊರಿನ ಒಡೆತನವನ್ನು ತನ್ನದಾಗಿಸಿಕೊಂಡು ಶಿವಾಪುರವನ್ನು ತನ್ನ ವಿಲಾಸಿ ಜೀವನದಿಂದ ಮತ್ತು ಸುಧಾರಣೆಗಳಿಂದ ಕೆಣಕಿ ಊರಿನ ಲಯ ತಪ್ಪುವಂತೆ ಮಾಡಿದವ. ಬಹಳಷ್ಟು ಹೆಂಗಸರನ್ನು ಆಕರ್ಷಿಸಿದ. ಹೆಂಡತಿ ಪಾರ್ವತಿಯನ್ನು ಕೈಹಿಡಿದರೂ ಜೋಗತಿ ತುಂಗವನನ್ನು ಮೋಹಿಸಿ ಹೆಂಡತಿಯೆಂಬಂತೆಯೇ ಕಂಡಂರೂ ಮದುವೆಯಾಗದೇ ಇಟ್ಟುಕೊಂಡ. ಅವಳಿಂದ ಹುಟ್ಟಿದ ಮಗ ಲಸಮನನ್ನು ತನ್ನ ಉತ್ತರಾಧಿಕಾರಿಯಾಗಿ ಮಗನೆಂದು

ಒಪ್ಪಿಕೊಂಡಿದ್ದ. ಶಿವಾಪುರದಲ್ಲಿ ಕೊಲೆ, ಸುಲಿಗೆ, ಅನ್ಯಾಯ, ಅಕ್ರಮಗಳ ಹಿಂದೆ ಈತನ ಕೈವಾಡವಿರುತ್ತಿತ್ತು. ಊರನ್ನು ಅಭಿವೃದ್ದಿಗೊಳಿಸಲು ಇಂಗ್ಲೀಷ್ ಶಾಲೆ ಆಸ್ಪತ್ರೆಗಳನ್ನು ಆರಂಭಿಸಬೇಕೆಂದು ಡಿ.ಸಿ.ಗೆ ಪತ್ರಬರೆದಿದ್ದ.

ಬರಮೇಗೌಡ ಗೌಂಡ ಕುಲದಲ್ಲಿ ಹುಟ್ಟಿದವನು. ದ್ಯಾಮೇಗೌಡನೆಂಬ ಇತಿಹಾಸ ಪುರುಷನ ಆರನೆ ತಲೆಯ ಶಿವಗೊಂಡನಿಗೆ ಇಬ್ಬರು ಮಕ್ಕಳು ಬರಮೇಗೌಡ ಮತ್ತು ಈಸುರಗೌಡ. ಈ ಬರಮೇಗೌಡ ಎತ್ತರವಲ್ಲದ ಕುಳ್ಳನೂ ಅಲ್ಲದ ಸ್ಥೂಲದೇಹಿ, ತನ್ನ ಹೆಂಡತಿ ಪಾರ್ವತಿಯನ್ನು ನಿರ್ಲಕ್ಷ್ಯ ಮಾಡಿ ತನಗಿದ್ದ ತೋಟದ ಮನೆಯನ್ನು ಅತ್ಯಾಧುನಿಕಗೊಳಿಸಿ ತನ್ನ ಶೃಗಾಂರ ಸಾಹಸ ಕಥೆಗಳ 'ವಿಲಾಸ ಖಾನ' ಮಾಡಿಕೊಂಡ. ಅಲ್ಲದೇ ದೇವದಾಸಿಯಾದ ತುಂಗವ್ವಳನ್ನು ಕಾಮಿಸಿ ಮೋಹಿಸಿ ಲಸಮನೆಂಬ ಮಗುವಿಗೆ ಜನ್ಮ ನೀಡಿದ.

ಅಲ್ಲದೆ ತನ್ನ ಮಗಳಾದ ಬಾಗಿರ್ತಿಯನ್ನು ಕುಂಟೀರಪ್ಪನೆಂಬುವವನಿಗೆ ಮದುವೆ ಮಾಡಿಕೊಟ್ಟಿದ್ದ. ಮುಂದೆ ಕುಂಟೀರಪ್ಪ ಮತ್ತು ಬರಮೇಗೌಡ ಊರನ್ನು ಅಭಿವೃದ್ಧಿಗೊಳಿಸಲು ಮುಂದಾಗಿ ಊರಿನ ವ್ಯವಸ್ಥೆಯನ್ನು ಬುಡುಮೇಲು ಮಾಡಿದರು. ಊರಿನ ಅಮಾಯಕರ ಭೂಮಿಗಳನ್ನು ತನ್ನದಾಗಿಸಿಕೊಂಡು ಮೋಸ, ವಂಚನೆ ಮಾಡುತ್ತಿದ್ದ ಅಲ್ಲದೇ ಡಿ.ಸಿ ತಹಶಿಲ್ದಾರರಂತವರನ್ನು ದುಡ್ಡುಕೊಟ್ಟು ಕೊಂಡುಕೊಂಡಿದ್ದ. ಬರಮೇಗೌಡನಿಗೆ ಈ ಎಲ್ಲ ತರಹದ ಬುದ್ಧಿ ಬಂದಿದ್ದು ಎಲ್ಲಿಂದ ಎಂದು ಗುರ್ತಿಸಹೊರಟರೆ ಆತನಿಗೆ ಆಧುನಿಕತೆಯ ಬಿರುಗಾಳಿಯಲ್ಲಿ ಸಿಲುಕಿಕೊಂಡಿದ್ದೇ ಆತನ ದುರಾಲೋಚನೆಗೆ ಕಾರಣವಾಗಿತ್ತು.

ಕಂಬಾರರ ಕರಿಮಾಯಿ ಕಾದಂಬರಿಯಲ್ಲಿ ಬರುವ ಗುಡಸೀಕರನ ಹಾಗೇ ಹಳ್ಳಿಯನ್ನು ಅಭಿವೃದ್ಧಿಯ ಮಾಡ ಹೋಗಿ ಸ್ಮಶಾನ ಮಾಡಿದವನು ಬರಮೇಗೌಡ. ದುಷ್ಟವ್ಯಕ್ತಿಗೆ ಮತ್ತೊಬ್ಬ ದುಷ್ಟನಿಂದಲೇ ಮೋಸವಾಗುವುದು ಸಹಜ ಎನ್ನುವಂತೆ ಬರಮೇಗೌಡನಿಗೆ ಆತನ ಅಳಿಯನಿಂದಲೇ ತಕ್ಕ ಶಾಸ್ತಿಯಾಗುತ್ತದೆ. ಕುಂಟೀರಪ್ಪ ಬರಮೇಗೌಡನಿಗೆ ಆತನ ಅಳಿಯನಿಂದಲೇ ತಕ್ಕ ಶಾಸ್ತಿಯಾಗುತ್ತದೆ. ಕುಂಟೀರಪ್ಪ ಬರಮೇಗೌಡನ ಎಲ್ಲ ಒಡೆತನ, ಆಸ್ತಿ ಅಂತಸ್ತು, ಅದೀಕಾರ, ಎಲ್ಲವನ್ನು ತನ್ನದಾಗಿಸಿಕೊಂಡು ಈತನನ್ನು ಕಾಲಕಸವಾಗಿ ಕಾಣುವ ಪ್ರಸಂಗ ಆಧುನಿಕತೆಯಲ್ಲಿ ಅಧಿಕಾರಶಾಹಿ ಆಡಳಿತ ಹೇಗೆ ತನ್ನ ಪ್ರಭಾವ ಬೀರುತ್ತದೆ ಎಂಬುದಕ್ಕೆ ಬರಮೇಗೌಡನ ಪಾತ್ರ ಸಾಕ್ಷಿಯಾಗಿ ನಿಲ್ಲುತ್ತದೆ.

ಆಧುನಿಕತೆಯ ಕನಸುಕಂಡ ಬರಮೇಗೌಡನಿಗೆ ಆಧುನಿಕತೆಯೇ ಮುಳುವಾಗುತ್ತದೆ. "ಆಧುನಿಕತೆ ಎಂಬುದು ಆತ್ಮದ ಮಾರುಕಟ್ಟೆ, ಛಿದ್ರ ವ್ಯಕ್ತಿಗಳ ಒಡೆದ ಕನಸುಗಳ ತಾಣವಿದು"[9] ಎಂಬ ವಿಕ್ರಂ ವಿಸಾಜಿಯ ವಿಚಾರಧಾರೆಯಂತೆ ಬರಮೇಗೌಡನ "ಒಡೆದ ಕನಸುಗಳು" ಕನಸುಗಳಾಗಿಯೇ ಉಳಿದು ಕೊನೆಗೆ ಊರನ್ನು ಸ್ಮಶಾನಮಾಡ ಹೊರಟಿರುವುದನ್ನು ಕಾದಂಬರಿಯಲ್ಲಿ ಬರುವ ಬರಮೇಗೌಡನ ಪಾತ್ರದಿಂದ ಕಾಣಬಹುದು. ಆಧುನಿಕತೆಯ ಲಾಭಗಳಿಸಿಕೊಳ್ಳಲು ಬುದ್ಧಿವಂತರು ಮುಖವಾಡ ಧರಿಸಿ ಕೊನೆಗೆ ಹೇಗೆ ಮೋಸಕ್ಕೆ ಗುರಿಯಾಗುತ್ತಾರೆ ಎಂಬುದನ್ನು

ಬರಮೇಗೌಡನ ಪಾತ್ರ ಚಿತ್ರಿಸುತ್ತದೆ. ದೇಶಿಯತೆಯನ್ನು ರಕ್ಷಿಸಿಕೊಳ್ಳದೇ ಆಧುನಿಕತೆಯ ವಿಲಾಸಿ ಬದುಕಿಗೆ ಆಶೆಪಟ್ಟ ಸ್ಥಿತಿ, ಮತ್ತು ಪ್ರಗತಿಯ ಭರದಲ್ಲಿ ಹಳ್ಳಿ ನಾಶವಾಗುತ್ತಿರುವ ಚಿತ್ರಣವನ್ನು ಬರಮೆಗೌಡನ ಪಾತ್ರ ಚಿತ್ರಿಸುತ್ತದೆ.

೨. ಚೆಂಬಸವ

ಚೆಂಬಸವ ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರವಾಗಿದ್ದು, ಈತನ ತಂದೆ ಈಸುರಗೌಡ ತಾಯಿ ಶಿವಕ್ಕ, ದೊಡ್ಡಪ್ಪ ಬರಮೆಗೌಡ. ಚೆಂಬಸವನ ತಾಯಿ ಶಿವಕ್ಕ ಹೆರಿಗೆ ಸಮಯದಲ್ಲಿ ನಂಜೇರಿ ಸಾವನ್ನಪ್ಪಿದಳು. ಅದೇ ಊರಿನವಳಾದ ಅಂದರೆ ಸುಲದಾಳದ ಬರಮೇಗೌಡನ ಉಪಪತ್ನಿ (ಸೂಳಿ) ತುಂಗವ್ವಳೂ ಇದೇ ವೇಳೆ ಲಕ್ಷ್ಮಣ (ಲಸಮ)ನಿಗೆ ಜನ್ಮನೀಡಿದಳು. ತುಂಗವ್ವ ಚೆಂಬಸವ ಮತ್ತು ಲಸಮನನ್ನು ಹಾಲುಣಿಸಿ ಬೆಳೆಸಿದವಳು ತುಂಗವ್ವ. ಚೆಂಬಸವನ ತಂದೆ ಈಸುರಗೌಡ ಚಳುವಳಿಗಾರ. ಈತ ಹುದಲಿಯಿಂದ ಯರಗಟ್ಟಿ ಮತ್ತು ಉತ್ತರಕ್ಕೆ ಅಥಣಿ ನಿಪ್ಪಾಣಿವರೆಗಿನ ಸೀಮೆಯಲ್ಲಿ ಬ್ರಿಟಿಷ ಸೈನ್ಯಕ್ಕೆ ಅಸಾಧ್ಯ ತಲೆನೋವಾಗಿದ್ದ. ಕೊನೆಗೆ ಬೆಳಗಾವಿಯಲ್ಲಿ ನಡೆದ ಗೋಲಿಬಾರನಲ್ಲಿ ಈಸುರಗೌಡ ಮರಣ ಹೊಂದಿದ. ಮುಂದೆ ಅನಾಥನಾದ ಮಗು ಚೆಂಬಸನನ್ನು ತುಂಗವ್ವ ಎದೆ ಹಾಲುಣಿಸಿ ಸಾಕಿ ಸಲುಹಿ ದೊಡ್ಡವನಾಗಿ ಮಾಡಿದಳು. ಚೆಂಬಸವ ಗೌಡ ಕುಲದಲ್ಲಿ ಹುಟ್ಟಿದರೂ ಬೆಳೆದದ್ದು ಹೊರಕೇರಿಯ ತುಂಗವ್ವನಲ್ಲಿ. ಮೇಲು-ಕೀಳೆಂಬ ಭಾವ ಈತನ ಜೀವನದುದ್ದಕ್ಕೂ ಬರಲಿಲ್ಲ. ಬದಲಾಗಿ ದಲಿತರನ್ನು ಮೇಲೆತ್ತುವ ಚಿಂತನೆ ಹೊಂದಿದ್ದು ಮತ್ತು ಊರಲ್ಲಿ ನಡೆಯುವ ಅನ್ಯಾಯ ಅಕ್ರಮಗಳಿಗೆ ತೊಡೆತಟ್ಟಿ ನಿಂತವನು ಚೆಂಬಸವ.

ಚೆಂಬಸವನಿಗೆ ತಾನು ಕೀಳ್ಜಾತಿ ಜನರಲ್ಲಿ ಬೆಳೆದವನು ಎಂದು ಗೊತ್ತಾಗಿದ್ದು ಶಾಲೆಯಲ್ಲಿ. ಶಾಲೆಯಲ್ಲಿ ಓದುತ್ತಿದ್ದ ರಮೇಶಿ ಆಡಿದ ಮಾತು ಸಮಾಜದಲ್ಲಿ ಜಾತಿ ವ್ಯೆವಸ್ಥೆ ಉಂಟುಮಾಡುತ್ತಿರುವ ನೋವುಗೊತ್ತಾಯಿತು. ಶಾಲೆಯಲ್ಲಿ ರಮೇಶಿ ಬಳಿ ಕೂಡ ಹೋದಾಗ ರಮೇಶಿ "ಛೇ ಛೇ ಹೊರಕೇರ್‍ಯಾಗ ಹುಟ್ಟಿದವನ ಜೋಡಿ ನಾ ಹೆಂಗ ಕುಂದರಬೇಕ್ರಿ?"[2] ಎಂದ. ಗೌಡ ಕುಲದಲ್ಲಿ ಹುಟ್ಟಿದರೂ ದಲಿತ ತುಂಗವ್ವಳ ಮೊಲೆ ಹಾಲು ಕುಡಿದು ಬೆಳೆದಿದ್ದಕ್ಕಾಗಿ ಅಸ್ಪೃಶ್ಯನಾಗಬೇಕಯಿತು. ಹೊರಕೇರಿಯಲ್ಲಿದ್ದವನಿಗೆ ಇದು ಗೊತ್ತಿಲ್ಲವೆಂದುಕೊಂಡಿದ್ದ. ಮುಂದೆ ತಿಳಿಯಿತು "ದಲಿತರ ಕರಿ ಮನಸ್ಸಿಗೆ ಇದೆಲ್ಲ ಗೊತ್ತಿದ್ದರೂ ಗೊತ್ತಿಲ್ಲದವರಂತೆ ನಟಿಸುತ್ತಿದ್ದಾರೆಂದು ಗೊತ್ತಾಯಿತು"[3]. ಚೆಂಬಸವ ಹೀಗೆ ದಲಿತ ಕೇರಿಯಲ್ಲಿಯೇ ಹೆಚ್ಚು ಬೆಳೆದ.

ಈತನಿಗೆ ಮಾರ್ಗದರ್ಶಕನಾಗಿ ನಮಶ್ಶಿವಾಯ ಸದಾ ಬೆನ್ನಹಿಂದೆ ಇದ್ದ. ಬರಮೇಗೌಡ, ಕುಂಟೀರಪ್ಪ ಕೂಡಿ ಶಿವಾಪುರವನ್ನು ಅಭಿವೃದ್ಧಿ ಹೆಸರಿನಲ್ಲಿ ಹಾಳು ಮಾಡಿತ್ತಿದ್ದರು. ಇವರ ಚಟುವಟಿಕೆಗಳಿಗೆ ವಸಾಹತುಶಾಹಿ ನೀತಿಗೆ ಮತ್ತು ಆಧುನಿಕತೆಗೆ ವಿರೋಧ ಒಡ್ಡಿ ದೇಶಿಯತೆ ಉಳಿಸಿಕೊಳ್ಳುವಲ್ಲಿ ಮಹತ್ತರ ಪಾತ್ರ ವಹಿಸಿದ. ದಲಿತ ಸ್ತ್ರೀ ಮತ್ತು ದೇವದಾಸಿಯಾಗಿದ್ದ ಶಾರಿಯನ್ನು ಮನಸಾರೆ ಪ್ರೀತಿಸಿ ಮೂಢನಂಬಿಕೆಗೆ ಸೊಡ್ಡು ಹೊಡೆದು ಮದುವೆಯಾಗಿ ಜಾತಿಸಂಕರ ಮಾಡಿದ. ಶಿವಾಪುರದಲ್ಲಿದ್ದ ರಾಚಿ ರಮೇಶ, ಕುಂಟೀರಪ್ಪನಂತವರಿಗೆ ಸಿಂಹಸ್ವಪ್ನವಾಗಿ ಬೆಳೆದು ನಿಂತನು.

ಬರಮೆಗೌಡನ ದುರಾಲೋಚನೆಯಿಂದ ಅಮೇರಿಕಾ ಜಾಕ್ಸನ್ ಕಂಪನಿ ಶಿವಾಪುರಕ್ಕೆ ಕಾಲಿಟ್ಟು ತ್ಯಾಜ್ಯ ತುಂಬಿ ಮಲ್ಲಿಮಡುವಿನಂತ ಪವಿತ್ರ ಸ್ಥಳವನ್ನು ಮಲೀನ ಮಾಡಿದಾಗ ಸಂಘಟನೆ ಕಟ್ಟಿ ವಸಹಾತು ಮತ್ತು ಆಧುನಿಕತೆಯಿಂದಾಗಿ ಶಿವಾಪುರವನ್ನು ನಾಶಮಾಡುತ್ತಿರುವ ಬಿಗ್‌ಬಾಸ್ ಬರಮೆಗೌಡ ಮತ್ತು ಕುಂಟೀರಪ್ಪನಂತವರ ವಿರುದ್ದ ಚಳುವಳಿ ಪ್ರಾರಂಭಿಸಿ ಉಳಿಸಿಕೊಳ್ಳಲು ಮುಂದಾದ. ತನ್ನ ಹೆಂಡತಿ ಮೇಲೆ ಅತ್ಯಾಚಾರವೆಸಗಿದ ಮೂರು ಜನ ಪೋಲಿಸರು ರಾಡಿರಮೇಶ ಮತ್ತು ಗುಳಗಿ ಗಣಪರನ್ನು ಕೊಂದು ನದಿಗೆ ಹಾಕಿ ಪೋಲಿಸರಿಗೆ ತಾನೇ ಶರಣಾಗತನಾಗಿ ಕೊನೆಗೆ ವೀರ ನೆನೆಸಿ ಜೈಲಿನಿಂದ ಹೊರಬಂದ.

ಚೆಂಬಸವ ಮೊದಲು ಶಿವಲಿಂಗಕ್ಕೆ ಕಲ್ಲೆಸೆಯುವ ಆ ಮೇಲೆ ನಮಶ್ಶಿವಾಯನ ಸಜ್ಜನಿಕೆಯಿಂದ ಪಶ್ಚಾತಾಪಗೊಂಡ "ತನ್ನ ಸುತ್ತ ತಾನರಿಯದ ಚೈತನ್ಯವೊಂದು ಸುತ್ತುವರಿದಿರುವಂತಿದೆ ಎಂದು ಅನ್ನಿಸಿ ಅದನ್ನು ಶಬ್ದಗಳಲ್ಲಿ ಯೋಚಿಸಿದ್ದೆ ತಡ ಮೈರೋಮಾಂಚನವಾಯಿತು"[8].

ಕೊನೆಗೆ ಅಮ್ಮನ ಗುಡ್ಡದಲ್ಲಿ ಯಾವುದೇ ಒಂದು ಶಕ್ತಿ ಕರಿ ಅಯ್ಯನ ರೂಪದಲ್ಲಿ ಬಂದು ಕಾರಣಿಕ ನುಡಿ ಆಡಿತು. ಅದನ್ನು ನಮಶ್ಶಿವಾಯ ಸ್ವಾಮಿ ಚೆಂಬಸನೆಗೆ ನೆನಪಿಸಿ ಇಗೋ ಇದು ಶಿವನ ಡಂಗುರ ಎಂದು ಹೇಳುತ್ತಾ...

"ಇದು ಸತ್ಯದ ಗುಡ್ಡ ನೀವು ಸತ್ಯದ ಶಿಷ್ಯರು
ಸತ್ಯದ ಶಿಷ್ಯರಿಗೆ ಬೇರೆ ಸತ್ಯವಿಲ್ಲವೋ
– – – – – – – – – – – – –
– – – – – – – – – – – – –
ನಿನ್ನ ಭಾಗದ ಮಗಳು ಬಾಗಿಲಲಿ ನಂತಾಳು
ನಿಂತಲ್ಲಿ ಹೊಸ ಶಿವಾಪುರ ರಚಿಸೋ
ಇಂತಿದು ಶಿವನ ಡಂಗುರವೂ"[9]

ಎಂದು ನಮಶ್ಶಿವಾಯ ಸ್ವಾಮಿ ಹೇಳಿದ. ಮುಂದೆ ಶಿವಾಪುರ ಬದಲಾಗತೊಡಗಿತು. ಹೊಸ ಶಿವಾಪುರ ಬೆಳೆಯಲು ಈತ ನಾಯಕನಾಗಿ ನಿಂತ ಪರಿಯು ವಿಸ್ಮಯವಾದುದು.

ಹೀಗೆ ಶಿವನ ಡಂಗುರ ಕಾದಬಂರಿಯ ಕಥಾ ನಾಯಕನಾಗಿ ಕಂಡುಬರುವ ಚೆಂಬಸವ ದೇಶಿ ಪರಂಪರೆ ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತಾನೆ. ನಾವು ಶಿವಾಪುರವನ್ನು ಮತ್ತೆ ಕಟ್ಟಲು ನಾವು ಅನುಸರಿಸಬೇಕಾದ ಮಾದರಿ ಸಮುದಾಯದ ಬದುಕಿನಲ್ಲಿ ಕಲಿತು ಎಲ್ಲರ ನೋವು ನಲಿವು ಹಂಚಿಕೊಂಡು ಒಟ್ಟಾಗಿ ಮುನ್ನಡೆಯುವ ವ್ಯಕ್ತಿ ನಮ್ಮಲ್ಲೇ ತಯಾರಾಗಬೇಕು. ದೇಶಿಯ

ಪರಂಪರೆ ಉಳಿಸಿಕೊಳ್ಳಲು ನಾವೇ ಸನ್ನದ್ಧರಾಗಬೆಕೆಂಬ ಕಂಬಾರರ ಅನೇಕ ದೇಶಿಪ್ರಜ್ಞೆಗಳನ್ನು ಚೆಂಬಸವನ ಪಾತ್ರದಲ್ಲಿ ಗುರ್ತಿಸಬಹುದಾಗಿದೆ.

೩. ನಮಶ್ಶಿವಾಯ ಸ್ವಾಮಿ

ಲೋಕೋತ್ತರ ಶಕ್ತಿಯೊಡನೆ ಅಂದರೆ ದೈವಿಕ ಶಕ್ತಿಯೊಂದಿಗೆ ಸಂಬಂಧವಿರಿಸಿಕೊಂಡು ಬದುಕುವ ವ್ಯಕ್ತಿ ನಮಶ್ಶಿವಾಯ ಸ್ವಾಮಿ. ಶಿವನ ಡಂಗುರ ಕಾದಂಬರಿಯಲ್ಲಿ ಶಿವಾಪುರದ ಒಳಿತು-ಕೆಡಕಿನ ಬಗೆಗೆ ಸಲಹೆ ಸೂಚನೆ ಕೊಡುವ ಮಾರ್ಗದರ್ಶಕನಾಗಿ ಕಂಡುಬರುತ್ತಾನೆ. ಊರ ಹೊರಗಿನ ಮಲ್ಲಿಮಡು ಪ್ರದೇಶದ ಹತ್ತಿರ ಇರುವ ಚಳಿಮಳೆ (ನಡುಗಡ್ಡೆ) ಪ್ರದೇಶದಲ್ಲಿ ಒಂದು ಗುಡಿ ಇದೆ. ನಿರ್ವಾಣೆಪ್ಪನ ಗುಡಿ ಎಂದು ಅದಕ್ಕೆ ಹೆಸರು. ಅಲ್ಲೊಬ್ಬ ವಯಸ್ಸಾದ ಸ್ವಾಮಿ ಇದ್ದ. ಯಾವಾಗಲೂ ನಮಶ್ಶಿವಾಯ ನಮಶ್ಶಿವಾಯ ಎಂದು ಹೇಳುತ್ತಿದ್ದರಿಂದ 'ನಮಶ್ಶಿವಾಯ ಸ್ವಾಮಿ' ಎಂದು ಜನರು ಕರೆಯತ್ತಿದ್ದರು. ಧಾರ್ಮಿಕ ತೇಜಸ್ಸು, ಇಂದ್ರಿಯ ನಿಗ್ರಹ ಶಕ್ತಿ ಹೊಂದಿದ್ದ . ಪಾಂಡಿತ್ಯದ ಸಾಧನಗಳು ಅವನಲ್ಲಿದ್ದರೂ ಊರಿನ ಸಂಪರ್ಕದಲ್ಲಿರಲು ಬಯಸುತ್ತಿರಲಿಲ್ಲ.

ಶೂನ್ಯ ಸಂಪಾದನೆಯನ್ನು ಹಲವು ಸಾರಿ ಓದಿಕೊಂಡಿದ್ದ ಈತ ಅಲ್ಲಮನಂಥಹ ಋಷಿಮುನಿಗಳ ಜೊತೆಗೆ ಮಾನಸಿಕ ಸಂಪರ್ಕವಿಟ್ಟುಕೊಂಡಿದ್ದ. ಶಿವಾಪುರದಲ್ಲಿ ಆಗಾಗ ಕೊಲೆಸುಲಿಗೆಗಳಾಗುತ್ತಿದ್ದವು. ಸತ್ತ ಹೆಣಕ್ಕೆ ಈತನೇ ಸಂಸ್ಕಾರ ಮಾಡಬೇಕಾಗಿತ್ತು. ಈತ ಪರಿಶುದ್ಧವೆಂದು ನಂಬಿದ್ದು "ಗಾಳಿ, ನೀರು, ಮತ್ತು ಕಾಡಹಸಿರನ್ನ. ಮತ್ತು ಇವನ್ನು ಕೊಟ್ಟ ಆ ಗುಡ್ಡದ ಶಿವಲಿಂಗನ್ನು". ಹೀಗೆ ಶಿವಾಪುರಕ್ಕೆ ಈತ ಮಾರ್ಗದರ್ಶನ ಮಾಡುವ ಗುರುವಾಗಿ ಕಂಡುಬರುತ್ತಿದ್ದ.

ನಮಶ್ಶಿವಾಯನಿಗೆ ಚೆಂಬಸನ ಮೇಲೆ ಎಲ್ಲಿಲ್ಲದ ಮಮತೆ ಹೊಂದಿದ್ದ. ಕಾರಣ ಆತನಲ್ಲಿದ್ದ ಒಳ್ಳೆಯ ವಿಚಾರ ಕಂಡಿದ್ದ. ಮುಂದೆ ಚೆಂಬಸನಿಗೆ ಮಾರ್ಗದರ್ಶನ ನೀಡಿ ಆಧುನಿಕತೆಯಿಂದ ಮಲೀನವಾಗುತ್ತಿದ್ದ ಶಿವಾಪುರವನ್ನು ರಕ್ಷಣೆ ಮಾಡುವಲ್ಲಿ ಈತನ ಈತನ ಪಾತ್ರವೂ ಬಹುಮುಖ್ಯವಾಗಿದೆ. ಹೆಣ್ಣಿನ ಮೇಲೆ ಅಪಾರ ಗೌರವ, ಅನ್ಯಾಯದ ವಿರುದ್ಧದ ಕೂಗು, ದೇಶಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ, ಲೋಕೋತ್ತರವಾದ ಶಕ್ತಿಯೊಂದು ಕೆಲಸ ಮಾಡುತ್ತಿರುತ್ತದೆ. ಸತ್ಯದ ಶಿಷ್ಯರಾಗಿ ಸತ್ಯವಲ್ಲದೇ ಮತ್ತೊಂದು ನಂಬಬಾರದೆಂಬ ನಂಬಿಕೆಯಲ್ಲಿ ಕಾಲಕಳೆದು ಚೆಂಬಸನನ್ನು ಸತ್ಯದ ಮಾರ್ಗದಲ್ಲಿ ಮುನ್ನಡೆಸಿ 'ಹೊಸ ಶಿವಾಪುರ' ಕಟ್ಟಲು ಮಾರ್ಗದರ್ಶನವಿತ್ತ ಗುರುವಾಗಿ ಕಾದಂಬರಿಯಲ್ಲಿ ಕಂಡು ಬರುವುದನ್ನು ಕಾಣುತ್ತೇವೆ.

೪. ಕುಂಟೀರಪ್ಪ

ಶಿವಾಪುರದವನಲ್ಲದವನಾದ ಕುಂಟೀರಪ ಸ್ವಚ್ಛಂದವಾದ ಶಿವಾಪುರಕ್ಕೆ ಕಾಲಿಟ್ಟು ಆಧುನಿಕತೆಯ ಬಿರುಗಾಳಿ ಬೀಸಿ ಶಿವಾಪುರ ನಲುಗುವಂತೆ ಮಾಡಿದವನು. ಕಾದಂಬರಿಯಲ್ಲಿ ಖಳನಾಯಕನಾಗಿ ಕಂಡು ಬರುವ ಪಾರ್ವತಿಯ ತಮ್ಮನೇ ಈ ಕುಂಟೀರಪ್ಪ. ಈತನ ಮೂಲ ಹೆಸರು 'ಇರಪನಗೌಡ'. ಆದರೆ ಈತನ ಒಂದು ಕಾಲು ಸರಿ ಇರದ ಕಾರಣ ಕುಂಟುತ್ತಿದ್ದ. ಹೀಗಾಗಿ ಎಲ್ಲ ಜನ 'ಕುಂಟೀರಪ'

ಎಂದು ಕರೆಯುತ್ತಿದ್ದರು. ಬರಮೇಗೌಡನ ಎಲ್ಲ ಆಸ್ತಿಯನ್ನು ತನ್ನದಾಗಿಸಿಕೊಳ್ಳಬೇಕೆಂದು ಹೊಂಚು ಹಾಕುತ್ತಿದ್ದ. ಇದೆ ವೇಳೆ ಬರಮೇಗೌಡನ ಒಬ್ಬಳೆ ಮಗಳಾದ 'ಬಾಗಿರ್ತಿ'ಯನ್ನು ಮದುವೆಯಾದ. ಆದರೆ ಬಾಗಿರ್ತಿಗೆ ಕುಂಟೀರಪನ ಎಲ್ಲ ಕುತಂತ್ರ ಬುದ್ಧಿ ಗೊತ್ತಿದ್ದರೂ ತನ್ನ ತಾಯಿಗೆ ಮಣಿದು ಆತಗೆ ತನ್ನ ಕತ್ತಿಗೆ ಒಡ್ಡಿದಳು. ಕುಂಟೀರಪ ಬರಮೇಗೌಡನ ವಿಲಾಸಿ ಬದುಕನ್ನೇ ಅಸ್ತ್ರವಾಗಿ ಬಳಸಿಕೊಂಡು ತಾರಾಳಂತಹ ಹೆಣ್ಣಿನ ಆಶೆ ಹಚ್ಚಿದ. ರಾಡಿ ರಮೇಶನಂತಹ ಕೆಟ್ಟ ವ್ಯಕ್ತಿಗಳ ಗೆಳೆತನ ಬೆಳೆಸಿಕೊಂಡ. ಊರಿನ ಹರೆಯದ ಸ್ತ್ರೀಯರ ಮೇಲೆ ತನ್ನ ಕಾಮುಕ ದೃಷ್ಟಿ ಹರಿಸಿ ಯಾರಿಗೂ ಗೊತ್ತಗದಂತೆ ತನ್ನ ಕಾಮ ತೃಷೆ ಈಡೇರಿಸಿಕೊಳ್ಳುತ್ತಿದ್ದ.

ಕುಂಟೀರಪ ಬಾಗಿರ್ತಿಯನ್ನು ಮದುವೆಯಾದ ಮೇಲೆ ಬರಮೇಗೌಡನ ತಲೆ ಕೆಡಸಲು ಮುಂದಾದ. ಬರಮೇಗೌಡನಿಗೆ ಊರಲ್ಲಿ ಶಾಲಾ ಕಾಲೇಜು, ಆಸ್ಪತ್ರೆ ಕಟ್ಟಿಸಬೇಕೆಂಬ ಆಸೆಯನ್ನೇ ಮುಂದಿಟ್ಟುಕೊಂಡು ಅಭಿವೃದ್ಧಿಯ ನೆಪದಲ್ಲಿ ಅಮೇರಿಕಾ ಜಾಕ್ಸನ್ ಕಂಪನಿಯನ್ನು ಊರಿಗೆ ಬರಮಾಡಿಕೊಂಡು ಇಡೀ ಶಿವಾಪುರವನ್ನೇ ರಾಡಿ ಮಾಡ ಹೊರಟನು. ಬರಮೇಗೌಡನನ್ನು ಮುಂದಿಟ್ಟುಕೊಂಡು ಶಿವಾಪುರದ ಮಲ್ಲಿಮಡು ಪ್ರದೇಶದಲ್ಲಿ ತ್ಯಾಜ್ಯ ತುಂಬಿ ಪವಿತ್ರವಾಗಿದ್ದ ಪ್ರದೇಶವನ್ನು ಮಲೀನವಾಗುವಂತೆ ಮಾಡಿ ರೋಗ ರುಜಿನುಗಳು ಹುಟ್ಟುವಂತೆ ಮಾಡಿದನು. ಆಧುನಿಕತೆ ಮತ್ತು ವಸಹಾತುವನ್ನು ಆಗಮನಮಾಡಿ ಕುತಂತ್ರ, ದುರಹಂಕಾರ, ದುರಾಡಳಿತ, ಕಾಮುಕನಾಗಿ ಇಡೀ ಶಿವಾಪುರವನ್ನು ಕೊಳಕು ಮಾಡ ಹೊರಟವ ಈ ಕುಂಟೀರಪ್ಪ. ಆಧುನಿಕತೆಯ ಲಾಭಗಳಿಸಿಕೊಳ್ಳಲು ಭ್ರಷ್ಟಗೊಳಿಸುವ ವ್ಯಕ್ತಿಯಾಗಿ ಕಾಣಿಸಿಕೊಂಡ ಕುಂಟೀರಪ್ಪ ಹೊರಗಿನಿಂದ ಬಂದ ಕುಂಟೀರಪ್ಪನಂತಹವರನ್ನು ಚೆಂಬಸವನಂತಹವರು ಮೆಟ್ಟನಿಲ್ಲದೇ ಹೋದರೆ ಸ್ವಚ್ಛಂದವಾದ ಶಿವಾಪುರವನ್ನು ಕಟ್ಟಲು ಸಾಧ್ಯವಿಲ್ಲ. ಆಧುನಿಕತೆಯ ಪ್ರತೀಕರಾಗಿ ಗುರ್ತಿಸಿಕೊಂಡಿರುವ ಕುಂಟೀರಪ್ಪನಂಥವರನ್ನು ಶಿಕ್ಷಿಸಿ ನಮ್ಮ ದೇಶಿಯ ಬದುಕನ್ನು ಕಟ್ಟಿಕೊಳ್ಳಬೇಕೆಂಬ ಕೂಗು ಇಲ್ಲಿದೆ.

೫. ಬಿಗ್ ಬಾಸ್

ಬಿಗ್‌ಬಾಸ್ ಅಮೇರಿಕಾದ ಜಾಕ್ಸನ್ ಕಂಪನಿಯ ಮಾಲೀಕನಾಗಿದ್ದ. ಕುಂಟೀರಪನ ಕುತಂತ್ರದಿಂದ ತಾರಾಳ ಜೊತೆಗೂಡಿ ಶಿವಾಪುರಕ್ಕೆ ಕಾಲಿಟ್ಟನು. ಬರಮೇಗೌಡ, ತಾರಾ, ಬಿಗ್‌ಬಾಸ್, ಕುಂಟೀರಪ್ಪ, ಬೇಳಗಾವಿ ಡಿ.ಸಿ ಎಲ್ಲರೂ ಒಂದೂಗೂಡಿ ಶಿವಾಪುರದ ಚಿತ್ರಣ ಬದಲಿಸ ಹೊರಟಿದ್ದರು. ಅಭಿವೃದ್ಧಿಯ ಮುಖವಾಡ ಹಾಕಿ ಶಿವಾಪುರದಲ್ಲಿ ಹಗಲು ದರೋಡೆ ಮಾಡಲು ಮುಂದಾದರು "ಶಿವಾಪುರದ ಸಮಗ್ರ ಅಭಿವೃದ್ಧಿ" ಎಂಬ ಹೆಸರಿಟ್ಟು ಮಲ್ಲಿಮಡು ಪ್ರದೇಶದಲ್ಲಿ ವಿಷಪೂರಿತ ತ್ಯಾಜ್ಯ ತುಂಬಿದ್ದರಿಂದ ಊರಲ್ಲಿ ವಿಕೃತ ಸಂತಾನ ರೋಗ ರುಜೀನಗಳು ಹುಟ್ಟಿಕೊಂಡವು. ಬಿಗ್‌ಬಾಸ್ ತಾರಾಳನ್ನು ಮುಂದುಮಾಡಿಕೊಂಡು ಬರಮೇಗೌಡನನ್ನು ತನ್ನವನನ್ನಾಗಿಸಿಕೊಂಡಿದ್ದ. ಬರಮೇಗೌಡನಿಗೆ ಚುನಾವಣೆಯ ಹುಚ್ಚು ಹಿಡಿಸಿ ಆತನ ಅಳಿಯನಿಗೆ ಟಿಕೇಟು ಕೊಡಿಸಿ ಶಿವಾಪುರವನ್ನು ತಮ್ಮ ಕಪ್ಪುಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಲು ಹೊರಟವನು. ನಂತರ ಚಂಬಸನ ವೀರತನ ದಿಟ್ಟ ಚಳುವಳಿಗಳಿಂದ ಹಿಂದೆ ಸರಿದುಕೊಂಡ.

ಶಿವನ ಡಂಗುರ ಕಾದಂಬರಿಯಲ್ಲಿ ಇನ್ನೂ ಹಲವು ಪುರುಷ ಪಾತ್ರಗಳಿವೆ ಬಲವಂತನೆಂಬ ರೈತನ ಪಾತ್ರ ಪ್ರಭುತ್ವ ಆಳ್ವಿಕೆಯು ದುಡಿಯುವ ವರ್ಗದ ಮೇಲೆ ಹೇಗೆ ದರ್ಪ ಮಾಡುತ್ತದೆ ಎಂಬುದಕ್ಕೆ ಬಲವಂತನ ಪಾತ್ರ ಸಾಕ್ಷಿಯಾಗಿ ನಿಲ್ಲುತ್ತದೆ. ಗೌಡನ ಆಳಿನ ಮಗನಾದ ರಾಡಿ ರಮೇಶ ಕುಂಟೀರಪ್ಪನ ತಮ್ಮ ಗುಳಿಗಿ ಗಣಪ, ದುಷ್ಟರ ಬೆಂಬಲಿಗರಾಗಿ ನಿಲ್ಲುವ ಪರಿ ಪ್ರಭುತ್ವದ ಆಳ್ವಿಕೆ ಮಾಡಲು ಯುವ ಪಡೆ ಹದಗೆಡುವ ಪರಿಯನ್ನು ಮೇಲಿನ ಪಾತ್ರಗಳ ಮೂಲಕ ಕಾಣಬಹುದು. ದುಡ್ಡಿರುವ ದುರಹಂಕಾರಿಗಳಿಗೆ, ಸರಕಾರದ ಅನ್ನ ತಿನ್ನುವ ಅಧಿಕಾರಿಗಳು ಗೌಡನಂತವರಿಗೆ ಚೇಲಾಗಳಾಗುವುದು ಮತ್ತು ಅವರು ಕೊಡುವ ದುಡ್ಡು ಹೆಂಡದ ಆಸೆಗೆ ಬೆನ್ನು ಹತ್ತುವುದು ಸಹಜ ಎಂಬುದಕ್ಕೆ ಕಾದಂಬರಿಯಲ್ಲಿ ಬರುವ ಡಿ.ಸಿ. ತಲಾಠಿ, ತಹಸಿಲ್ದಾರರ ಪಾತ್ರಗಳು ಮೂಡಿಬಂದಿರುವುದನ್ನು ಕಾಣಬಹುದು.

ಒಟ್ಟಾರೆ ಇಲ್ಲಿನ ಪುರುಷ ಪಾತ್ರಗಳು ಒಂದೆಡೆ ಮುಗ್ದತೆ, ಪ್ರೀತಿ-ವಾತ್ಸಲ್ಯ, ದೇಶಿ ತನವನ್ನು ವ್ಯಕ್ತಪಡಿಸಿದರೆ, ಇನ್ನೊಂದೆಡೆ ಕುಂಟೀರಪ್ಪನಂತ ಪಾತ್ರಗಳು ದರ್ಪ ಅಹಂಕಾರದಿಂದ ಕೂಡಿದನ್ನು ಚಿತ್ರಿಸುತ್ತವೆ. ಚೆಂಬಸ ನಮಶ್ಶಿವಾಯನಂತ ಪಾತ್ರಗಳು ಸತ್ಯದ ಮಾರ್ಗ ಅನುಸರಿಸಿದರೆ, ಬರಮೇಗೌಡ, ಕುಂಟೀರಪ್ಪ, ಬಿಗ್‌ಬಾಸರಂತ ಪಾತ್ರಗಳು ಅಸತ್ಯದ ಮಾರ್ಗ ಹಿಡಿದು ಸಮಾಜಘಾತುಕರಾಗಿ ಕಂಡುಬರುವದನ್ನು ಮತ್ತು ಕೊನೆಗೆ ಸತ್ಯಕ್ಕೆ ಜಯ ಸಿಗುವದು ಎಂಬ ಮೌಲ್ಯವನ್ನು ಸತ್ಯದ ಪಾತ್ರಗಳು ಪ್ರಸ್ತುತ ಪಡಿಸಿರುವುದನ್ನು ಈ ಮೂಲಕ ವಿಶ್ಲೇಷಣೆಗೈಯಬಹುದು.

೮.೨. ಸ್ತ್ರೀ ಪಾತ್ರಗಳು :

ಶಿವನ ಡಂಗುರ ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳೆಂದರೆ, ಪಾರ್ವತಿ, ತುಂಗವ್ವ, ಬಾಗೀರ್ತಿ, ಶಾರಿ, ಮಾಣಿಕಮ್ಮ, ಮಾದೇವಿ, ತಾರಾ, ಈಸೂರು ಗೌಡನ ಹೆಂಡತಿ ಶಿವಕ್ಕ, ನಾಗಪ್ಪನ ಹೆಂಡತಿ ಯಮನವ್ವ, ಬಲವಂತನ ಮಗಳು ನೀಲಗಂಗೂ ಇವೆಲ್ಲ ಇಲ್ಲಿ ಬರುವ ಸ್ತ್ರೀ ಪಾತ್ರಗಳಾಗಿವೆ. ಕೆಲವನ್ನು ಈ ಕೆಳಕಂಡಂತೆ ವಿಶ್ಲೇಷಣೆ ಮಾಡಬಹುದು.

೧. ಪಾರ್ವತಿ

ಪಾರ್ವತಿ ಬರಮೇಗೌಡನ ಹೆಂಡತಿಯಾಗಿದ್ದು, ಈಕೆ ಕುಡಚಿ ಗ್ರಾಮದ ಕೊಟ್ರೇಶನೆಂಬ ವೈದ್ಯನ ಮಗಳು. ಬರಮೇಗೌಡ ಈಕೆಯನ್ನು ಮದುವೆಯಾಗಿ ಬಾಗೀರ್ತಿ ಎಂಬ ಮಗುವಿಗೆ ಜನ್ಮ ನೀಡಿದ. ಪಾರ್ವತಿ ತನಗೆ ಒಂದು ಗಂಡು ಸಂತಾನ ನೀಡಲಿಲ್ಲವೆಂದು ನಿಂದನೆ ಮಾಡುತ್ತ ನಿರ್ಲಕ್ಷಿಸಿದ. ಬರಮೇಗೌಡ ವಿಲಾಸಿ ಬದುಕನ್ನು ನಡೆಸುವವ ಆದರೆ ಈಕೆ ಆದರ್ಶ ಗ್ರಹಿಣಿಯಾಗಿದ್ದಳು. ಅತ್ಯಂತ ಮುಗ್ದ ಸ್ತ್ರೀಯಾಗಿದ್ದಳು. ಬರಮೇಗೌಡ ಕಚ್ಚೆಹರಕನಾಗಿದ್ದರೂ ತನ್ನ ಗಂಡನೇ ದೇವರೆಂದು ನಂಬಿದವಳು ಬರಮೇಗೌಡನನ್ನು ಆಕರ್ಷಿಸುವ ಯಾವುದೇ ಸ್ತ್ರೀ ಚಮತ್ಕಾರಗಳು ದೈಹಿಕ ಸೌಂದರ್ಯ ಆಕೆಯಲ್ಲಿರಲಿಲ್ಲಾ. ಅವನನ್ನು ಮೋಡಿಮಾಡುವ ವಿದ್ಯೆಯೂ ಗೊತ್ತಾಗಿರಲಿಲ್ಲ. ಹೀಗಾಗಿ ಬರಮೇಗೌಡ ಬೇಗನೆ ದಾರಿ ಬಿಟ್ಟು ಅನೇಕ ಸ್ತ್ರೀಯರ ಮೇಲೆ ಕಣ್ಣು ಹಾಯಿಸಿ ತನ್ನ ಕಾಮ ತೃಷೆ ಈಡೇರಿಸಿಕೊಳ್ಳುತ್ತಿದ್ದ. ಅಲ್ಲದೆ ದಲಿತಳು ದೇವದಾಸಿಯೂ ಆಗಿದ್ದ ತುಂಗವ್ವಳ ಮೇಲೆ ಆಸೆ ಹೊಂದಿದ ಪಾರ್ವತಿ

ಗಂಡನ ನಿರ್ಲಕ್ಷದಿಂದ ಮತ್ತು ಇನ್ನೊಂದು ಹೆಣ್ಣಿನ ಜೊತೆ ಸಂಪರ್ಕ ಹೊಂದಿ ಆಕೆಯನ್ನು ತಂದು ಹೊರಕೇರಿಯಲ್ಲಿ ಇರಿಸಿದನ್ನು ಕಂಡು ಮನದೊಳಗೆ ಕೊರಗಿ ಕೊರಗಿ ಜೀವನ ಸಾಗಿಸುತ್ತಿದ್ದಳು ತನ್ನ ತಮ್ಮ ಕುಂಟೀರಪ್ಪನಿಗೆ ಮಗಳಾದ ಬಾಗಿರ್ತಿಯನ್ನು ಕೊಟ್ಟು ಮದುವೆ ಮಾಡಿ ಪ್ರಾಣ ಬಿಟ್ಟಳು.

ಕಾದಂಬರಿಯಲ್ಲಿ ಪಾರ್ವತಿ ಒಬ್ಬ ಆದರ್ಶ ಗೃಹಿಣಿಯಾಗಿ ಪ್ರೀತಿ ತುಂಬಿದ ತಾಯಿಯಾಗಿ ಕಂಡುಬಂದರೂ ಗಂಡನ ಕೆಟ್ಟ ಸ್ವಭಾವಗಳನ್ನು ವಿರೋಧಿಸದೇ ಅಮಾಯಕಳಾಗಿ ಕೊರಗಿ ಕೊರಗಿ ಸಾಯುವ ಪ್ರಸಂಗವನ್ನು ಕಾಣಬಹುದು. ಹೊರಗಿನ ಶ್ರೀಮಂತಿಕೆ ಎಷ್ಟಿದ್ದರೂ ದೈಹಿಕ ಮಾನಸಿಕ ಸುಖ ಇದ್ದರೆ ಮಾತ್ರ ನೆಮ್ಮದಿಯಿಂದ ಬಾಳಲು ಸಾಧ್ಯ. ಈ ದೈಹಿಕ ಮಾನಸಿಕ ಸುಖವಿಲ್ಲದ ಬಾಳು ಹಾಳು ಮನೆಯಿದ್ದಂತೆ ಎಂಬುದನ್ನು ಈ ಪಾರ್ವತಿ ಪಾತ್ರದಿಂದ ಅರಿಯಬಹುದು. ಯಾವುದೇ ಹೆಣ್ಣು ಇನ್ನೊಬ್ಬರ ಜೊತೆ ಏನೇ ಹಂಚಿಕೊಂಡು ಬದುಕಿದರೂ ತನ್ನ ಗಂಡನನ್ನು ಇನ್ನೊಬ್ಬರಿಗೆ ಬಿಟ್ಟುಕೊಡಲು ಮುಂದಾಗುವುದಿಲ್ಲ ಆದರೆ ಬರಮೇಗೌಡನೇ ಪಾರ್ವತಿಯನ್ನು ನಿರ್ಲಕ್ಷ ಮಾಡಿ ತುಂಗಿಯ ಜೊತೆ ಸಂಬಂಧವನ್ನು ಹೊಂದಿರುವದನ್ನು ಕಂಡು ಮನದಲ್ಲಿ ಕೊರಗಿ ಸಾಯುವಳು. ಚೆಂಬಸ ತನ್ನ ಮಗನಲ್ಲದಿದ್ದರೂ ಕೊನೆ ಕೊನೆಗೆ ಆತನ ಮೇಲೆ ಅತಿಯಾದ ಪ್ರೀತಿ ವಿಶ್ವಾಸ ತೋರಿ ಸಂತಸಪಡುವುದನ್ನು ಕಾದಂಬರಿಯ ಮೂಲಕ ಗುರುತಿಸಬಹುದು. "ಪ್ರಧಾನವಾಗಿ ಹೆಣ್ಣು ಗಂಡಿಗೆ ಅಧೀನಳೂ, ಸಾಮಾಜಿಕ ಪುರುಷ ದಬ್ಬಾಳಿಕೆಯಲ್ಲಿ ಆಕೆ ನೂವು ಅನುಭವಿಸಿದರೂ ವಿರೋಧ ಸೂಚಿಸಿದೇ ಮೌನವಾಗಿಯೇ ಸಹಿಸಿಕೊಂಡು ಬಂದಿದ್ದಾಳೆ"[೭] ಎನ್ನುವ ವಿಕ್ರಂ ವಿಸಾಜಿಯವರ ಮಾತಿಗೆ ಪಾರ್ವತಿ ಸಾಕ್ಷಿಯಾಗಿ ನಿಲ್ಲುತ್ತಾಳೆ.

೨. ತುಂಗವ್ವ

ಶಿವನ ಡಂಗುರ ಕಾದಂಬರಿಯಲ್ಲಿ ಬರುವ ಮುಖ್ಯ ಸ್ತ್ರೀ ಪಾತ್ರಗಳಲ್ಲಿ ತುಂಗವ್ವಳೂ ಒಬ್ಬಳು. ಮೂಲತಃ ಸುಲದಾಳದ ದಲಿತ ಸ್ತ್ರೀ ಆಗಿದ್ದ ಈಕೆ ಸವದತ್ತಿ ಎಲ್ಲಮ್ಮ ದೇವತೆಗೆ ಬಿಟ್ಟ ದೇವದಾಸಿಯಾಗಿದ್ದಳು. ಸೂರ್ಯನ ಬಿಸಿಲಲ್ಲಿ ಮಾಗಿದ, ಸಾಧುಗಪ್ಪು ಮೈಬಣ್ಣದ, ಆಕರ್ಷಕ ಎದೆ ಹೊಂದಿದ ದೊಡ್ಡ ಕಣ್ಣುಗಳನ್ನುಳ್ಳಾಕೆ. ಮಾತು ಒರಟಾದರೂ ಮೃದು ಹೃದಯದವಳು. ಒಮ್ಮೆ ಈಕೆ ಎಲ್ಲಮ್ಮನ ಜಾತ್ರೆಯಲ್ಲಿ ಬರಮೇಗೌಡನ ಕಣ್ಣಿಗೆ ಬಿದ್ದಿದ್ದೇ ತಡ ಕರಿವರ್ಣದ ಈ ದೇವದಾಸಿಯನ್ನು ಕಂಡು "ನಡಾವಳಿಯಲ್ಲಿ ಕೂಡಾವಳಿಯಲ್ಲಿ ನೀನು ನನ್ನ ಹೆಣ್ಣಾಗು, ಇಲ್ಲಾ ಕೊಂದು ಹೋಗು" ಎಂದು ಹೇಳಿ ಆಕೆಯನ್ನು ಕೂಡಿಕೊಳ್ಳಲು ಮುಂದಾದ. ಈಕೆಯೂ ಮೋಹಗೊಂಡು ಆತನನ್ನು ಕೂಡಿಕೊಂಡಳು. ಮುಂದೆ ಬರಮೇಗೌಡ ಈಕೆಯನ್ನು ಮದುವೆಯಾಗದೇ ತನ್ನ ಊರಿನ ಹೊರಕೇರಿಯಲ್ಲೊಂದು ಮನೆ ಕೊಟ್ಟು ಐದೆಕೆರೆ ಭೂಮಿ ಕೊಟ್ಟಿದ್ದ. ಈತ ಮದುವೆಯಾಗದಿದ್ದಕ್ಕೆ ಕಾರಣ ದಲಿತ ಸ್ತ್ರೀಯೆಂದು. ಆಕೆಯನ್ನು ಕಾಮಿಸುವಾಗ ಜಾತಿ, ಕುಲ ಲೆಕ್ಕಕ್ಕೇ ಬರಲಿಲ್ಲ. ಮದುವೆ ವಿಷಯ ಬಂದಾಗ ನಿರ್ಲಕ್ಷ ಮಾಡಿದ್ದು ಭಾರತದಲ್ಲಿ

ಜಾತಿ ವ್ಯವಸ್ಥೆ ಉಂಟು ಮಾಡುತ್ತಿರುವ ತಲ್ಲಣಗಳನ್ನು ಸೂಕ್ಷ್ಮವಾಗಿ ಗುರ್ತಿಸಬಹುದು. ಮುಂದೆ ಈಕೆಗೆ ಲಸಮ(ಲಕ್ಷ್ಮಣ)ನೆಂಬ ಮಗ ಹುಟ್ಟಿದ. ಈಸುರಗೌಡನ ಮಗನಾಗಿ ಹುಟ್ಟಿದ ಚೆಂಬಸನಿಗೆ ತನ್ನ ಎದೆ ಹಾಲು ಉಣಿಸಿ ಬೆಳೆಸಿ ದೊಡ್ಡವನನ್ನಾಗಿ ಮಾಡಿದಳು. ಭಾರತಿಯ ಸಂಸ್ಕೃತಿಯ ನಿಜವಾದ ತಾಯ್ತನವನ್ನು ಈ ತುಂಗವ್ವನ ಪಾತ್ರದಲ್ಲಿ ಕಾಣಬಹುದು. ಈ ಸಂಸ್ಕೃತಿಯ ಮಣ್ಣಿನ ಕಣಕಣದಲ್ಲೂ ಸ್ತ್ರೀಯ ತಾಯ್ತನ ತುಂಬಿದೆ ಎಂಬುದಕ್ಕೆ ತುಂಗವ್ವ ಸಾಕ್ಷಿಯಾಗಿ ನಿಲ್ಲುತ್ತಾಳೆ. ತಾ ಹೆತ್ತ ಮಗನಲ್ಲದಿದ್ದರೂ ಕೊನೆ ಉಸಿರಿನವರೆಗೂ ಚೆಂಬಸನನ್ನು ತನ್ನ ಮಗನಂತೆಯೇ ನೋಡಿದವಳು. ಅಲ್ಲದೇ ಸಂಸ್ಕಾರ ನೀಡಿ ದೇಶಿಯ ಚಿಂತನೆಗಳನ್ನು ಆತನಲ್ಲಿ ಬೆಳೆಸಿದ ಪರಿ ಒಬ್ಬ ತಾಯಿಯ ನಿಜವಾದ ಕರ್ತವ್ಯವನ್ನು ತಿಳಿಸಿಕೊಡುತ್ತದೆ.

ಚೆಂಬಸ ತನ್ನ ಶಾರಿಯನ್ನು ಪ್ರೀತಿಸಿ ಮದುವೆಯಾಗಲು ಹೊರಟಾಗ ಮೊದಲು ವಿರೋಧ ವ್ಯಕ್ತಪಡಿಸಿದ್ದಳು. ಕಾರಣ ಶಾರಿ ದಳಿತಳು ಮೇಲಾಗಿ ತನ್ನಂತೆ ದೇವದಾಸಿಯಾಗಿದ್ದಳು. ಇವೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ ಶಾರಿಯನ್ನು ಮದುವೆಯಾದ ಚೆಂಬಸನ ಕಂಡು ತನ್ನಂತೆ ಶಾರಿ ಬದುಕು ಅತಂತ್ರವಾಗಲಿಲ್ಲವೆಂದು ಒಳಗೊಳಗೆ ಸಂತಸಗೊಂಡಳು. ಬರಮೇಗೌಡನಿಗೆ ಈಕೆ ಕೇವಲ ಭೋಗದ ವಸ್ತುವಾಗಿ ಕಂಡಳು. ಪ್ರೀತಿ ವಾತ್ಸಲ್ಯ ತುಂಬಿದ ತಾಯಿಯಾಗಿ, ಸಮಾಜದಲ್ಲಿ ಶ್ರಮ ಸಂಸ್ಕೃತಿಯ ಹೆಣ್ಣಾಗಿ ಬಿಂಬಿತವಾಗಿರುವುದನ್ನು ಶಿವನ ಡಂಗುರ ಕಾದಂಬರಿಯಲ್ಲಿ ಈ ತುಂಗವ್ವನ ಪಾತ್ರದಲ್ಲಿ ಕಾಣಬಹುದು.

೩. ಶಾರವ್ವ (ಶಾರಿ)

ಶಿವನ ಡಂಗುರ ಕಾದಂಬರಿಯಲ್ಲಿ ಬರುವ ಬಹುಮುಖ್ಯ ಸ್ತ್ರೀ ಪಾತ್ರಗಳಲ್ಲಿ ಶಾರವ್ವಳೂ ಒಬ್ಬಳು. ತುಂಗವ್ವಳ ಅಣ್ಣ ನಾಗಣ್ಣ-ಯಮನಕ್ಕರ ಏಕೈಕ ಮಗಳು ಈ ಶಾರವ್ವ, ಎಲ್ಲರೂ 'ಶಾರಿ' ಎಂದು ಕರೆಯತ್ತಿದ್ದರು. ಸುಂದರವಾದ ದೊಡ್ಡ ಕಣ್ಣು, ಗುಲಾಬಿ ವರ್ಣದ ದುಂಡು ಮುಖ, ತುಂಬಿದ ತೋಳು, ಕಪ್ಪು ಕೂದಲು, ಕೆಂಪು ತುಟಿ, ಹೊಂದಿದವಳು ಶಾರಿ. ಆದರೆ ಈಕೆಯನ್ನು ಬಾಲ್ಯದಲ್ಲಿಯೇ ಎಲ್ಲಮ್ಮನ ಭಕ್ತೆ ಆಗಿದ್ದಳು. ಅಂದರೆ ದೇವದಾಸಿಯಾಗಿದ್ದಳು. ಈಕೆಯನ್ನು ಚೆಂಬಸನು ಬೆಟ್ಟದಲ್ಲಿ ನೇರಳೆ ಹಣ್ಣು ಹರಿಯುವಾಗ ಕಂಡು ಮೋಹಕಗೊಂಡು ಮದುವೆಯಂತಾದರೆ ಈಕೆಯನ್ನೇ ಮದುವೆಯಾಗಬೇಕೆಂದು ಅಂದೇ ನಿರ್ಧರಿಸಿದ್ದ ಇವರ ಪ್ರೇಮ ಹಾಗೇ ಮುಂದುವರಿದಿತ್ತು. ದೊಡ್ಡವಳಾದ ಮೇಲೆ ಈಕೆಯನ್ನು ಮದುವೆಯಾಗುತ್ತೇನೆ ಎಂದಾಗ ತುಂಗವ್ವ ಅಡ್ಡ ಬಂದಳು. ಶಾರಿ ದಳಿತಳು, ನೀನು ಗೌಡ ಕುಲದವ ಇದು ಹೇಗೆ ಸಾಧ್ಯ? ಮೇಲಾಗಿ ಶಾರಿ ದೇವದಾಸಿ ಎಂದು ತಿರಸ್ಕಾರದ ಭಾವ ತೋರಿದಳು. ನಿಮ್ಮ ಕುಲ ಗೋತ್ರ, ಗೊಡ್ಡು ಸಂಪ್ರದಾಯ ನನಗೆ ಬೆಕಿಲ್ಲ ಎಂದು ಹೇಳಿ ಬೆಳಗಾವಿಗೆ ಹೋಗಿ ರಿಜಿಸ್ಟರ್ ಮದುವೆಯಾಗಿ ಬಂದನು.

ಶಾರಿ ದಲಿತಳಾಗಿದ್ದರೂ ಅತೀ ಸುಂದರವಾದ ಸ್ತ್ರೀಯಾಗಿದ್ದಳು. ಹೀಗಾಗಿ ಈಕೆಯ ಸೌಂದರ್ಯ ಕುಂಟೀರಪ್ಪ, ರಾಡಿ ರಮೇಶ, ಮತ್ತು ಪೋಲಿಸರ ಕೆಂಗಣ್ಣಿಗೆ ಗುರಿಯಾಯಿತು. ಚೆಂಬಸ ಊರಿನಲ್ಲಿ ನಡೆಯುತ್ತಿದ್ದ ಅನ್ಯಾಯ ವಿರೋಧಿಸಿ ಚಳುವಳಿ ಮಾಡುತ್ತಿದ್ದರಿಂದ ಬಂಧಿಸಲು ಮುಂದಾಗಿದ್ದರಿಂದ

ತಲೆಮರೆಸಿಕೊಂಡಿದ್ದ. ಇದೇ ವೇಳೆ ಶಾರಿಯ ಮೇಲೆ ಪೋಲಿಸರು, ರಾಡಿ ರಮೇಶ, ಗುಳಗಿ ಗಣಪರು ಕೂಡಿ ಸಾಮೂಹಿಕ ಅತ್ಯಾಚಾರವೆಸಗಿದರು. ಕಾಮುಕರ ಬಲೆಗೆ ಅಮಾಯಕಳಾಗಿ ನಲುಗಿ ಹೋಗಿದ್ದ ಶಾರಿಯಲ್ಲಿ ಅನೇಕ ವಿಚಾರಗಳು ಮೂಡಿದ್ದವು. ನನ್ನ ಮಾನ ಹೋದ ಮೇಲೆ ಇನ್ನು ನನ್ನನ್ನು ಚೆಂಬಸ ಒಪ್ಪಿಕೊಳ್ಳುವನೋ ಇಲ್ಲವೋ ಎಂದುಕೊಳ್ಳುತ್ತಿರುವಾಗ ಚೆಂಬಸ ಶಾರಿಯನ್ನು ತನ್ನ ಹೆಂಡತಿಯಾಗಿಯೇ ಮತ್ತೇ ಸ್ವೀಕರಿಸಿ, ತನ್ನ ಹೆಂಡತಿಯ ಮಾನ ಕಳೆದವರನ್ನು ಕೊಂದು ಹಾಕಿ ನದಿಗೆ ಬಿಸಾಕಿ ತಾನೆ ಜೈಲಿಗೆ ಹೋಗಿ ಶಿಕ್ಷೆ ಅನುಭವಿಸಿ ವೀರನೆನಿಸಿ ಮತ್ತೇ ಶಿವಾಪುರಕ್ಕೆ ಕಾಲಿಟ್ಟು, ಮಾಣಿಕ್ಕಮ್ಮನ ಅನಾಥಾಶ್ರಮದಲ್ಲಿದ್ದ ತನ್ನ ಹೆಂಡತಿ ಮತ್ತು ಮಾದೇವಿಯನ್ನು ಊರಿಗೆ ಕರೆ ತಂದನು. ಈ ಸಮಾಜದಲ್ಲಿ ಹೆಣ್ಣು ಅತ್ಯಂತ ಶೋಷಿತಳು. ಪ್ರಭುತ್ವ, ಧರ್ಮ, ಕುಟುಂಬ ಹೀಗೆ ಮೂರು ಮುಖ್ಯ ಘಟ್ಟಗಳಲ್ಲಿ ಆಕೆ ಶೋಷಣೆಗೆ ಒಳಗಾಗಿದ್ದಾಳೆ ಎಂಬುದನ್ನು, ಮತ್ತು ಶಿವಾಪುರದವರಲ್ಲದವರು ಊರಿಗೆ ಕಾಲಿಟ್ಟಿದ್ದರಿಂದ ಊರಿನ ಅನೇಕ ಸ್ತ್ರೀಯರು ನಲುಗಿದ ಸಂಗತಿಯನ್ನು ಮತ್ತು ಆಧುನಿಕತೆಯ ಅಪಾಯಗಳು ಹೇಗೆ ಹೆಣ್ಣಿನ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಶಾರಿಯ ಪಾತ್ರದ ಮೂಲಕ ವಿಶ್ಲೇಷಣೆ ಮಾಡಬಹುದು.

೪. ಬಾಗೀರ್ತಿ

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ತನ್ನನ್ನು ಸಂಪೂರ್ಣವಾಗಿ ಗಂಡಸಿಗೆ ಅಧೀನಳಾಗಿ ಮತ್ತು ಆತನಿಗೆ ತನ್ನನ್ನು ಒಪ್ಪಸಿಕೊಳ್ಳುವುದರಲ್ಲೇ ತಮ್ಮ ಬದುಕಿನ ಸಾರ್ಥಕತೆ ಕಾಣುವ ಹೆಂಗಸಿನ ಚಿತ್ರಣಗಳು ಕಂಬಾರರ ಅನೇಕ ಬರಹಗಳಲ್ಲಿ ಕಾಣುವಂತೆ ಶಿವನ ಡಂಗುರ ಕಾದಂಬರಿಯಲ್ಲಿ ಬರುವ ಬಾಗೀರ್ತಿಯ ಪಾತ್ರ ಚಿತ್ರಣದಲ್ಲಿ ಕಾಣುತ್ತೇವೆ. ಶಿವಾಪುರದ ಊರಗೌಡನ ಮಗಳಾಗಿ ಹುಟ್ಟಿದರೂ ಕುಂಟೀರಪನೆಂಬ ದುಷ್ಟನಿಗೆ ತನ್ನನ್ನು ಹೆಂಡತಿಯಾಗಿ ಮಾರಿಕೊಂಡು ಆತ ಮಾಡುವ ಅನೇಕ ತಪ್ಪುಗಳನ್ನು ನೋಡುತ್ತಿದ್ದರೂ ಪ್ರತಿಭಟಿಸದೇ ಅಸಹಾಯಕಳಾಗಿ ನಿಲ್ಲುವ ಚಿತ್ರಣವನ್ನು ಬಾಗೀರ್ತಿ ಪಾತ್ರದಲ್ಲಿ ಕಾಣುತ್ತೇವೆ. ಹೆಣ್ಣಿನ ಬದುಕಿಗೆ ಪೂರ್ಣತೆ ಬರುವುದು ಗಂಡಸಿನಿಂದಲೇ ಎಂದು ತಿಳಿದು ಹೆತ್ತ ತಂದೆ-ತಾಯಿಗಳು ಎಂಥವರನ್ನೋ ತಮ್ಮ ಹೆಣ್ಣುಮಕ್ಕಳಿಗೆ ಮದುವೆ ಮಾಡುತ್ತಾರೆ. ಕೊನೆಗೆ ಆ ಹೆಣ್ಣು ಅಸಹಾಯಕಳಾಗಿ ಬಂಧನದಲ್ಲೇ ಮಕ್ಕಳ ಲಾಲನೆ-ಪಾಲನೆಯಲ್ಲೇ ಕಾಲ ಕಳೆಯಬೇಕಾಗುತ್ತದೆ ಇದಕ್ಕೆ ಬಾಗೀರ್ತಿಯೂ ಹೊರತಾಗಿಲ್ಲ. ತಾನೂ ತಾಯಿ ಆಶೆಯಂತೆ ಕುಂಟೀರಪ್ಪನನ್ನು ಒಲ್ಲದ ಮನಸ್ಸಿನಿಂದ ಮದುವೆಯಾದಳು. ಈತನ ದುಷ್ಟಬುದ್ಧಿ, ಕೆಡಕುಗಳು ಬಾಗೀರ್ತಿಗೆ ಗೊತ್ತಿದ್ದರೂ ಅವನ್ನು ಪ್ರತಿಭಟಿಸದೇ ಹಾಗೇ ಉಳಿಯುತ್ತಾಳೆ.ಆಧುನಿಕತೆಯ ಬಿರುಗಾಳಿಗೆ ಈಕೆಯೂ ಸಿಕ್ಕಿಹಾಕಿಕೊಂಡಿದ್ದಳು. ಊರಲ್ಲಿ ತ್ಯಾಜ್ಯ ತುಂಬಿದ್ದರಿಂದ ವಿಕೃತ ಸಂತಾನದ ಅಂಗವಿಕಲೇ ಮಾದೇವಿಗೆ ಜನ್ಮವಿತ್ತಳು. ತಂದೆಯ ಮೋಸ-ವಂಚನೆ ಗಂಡನ ದುಷ್ಟಚಿಂತನೆ ನಿತ್ಯ ನೋಡುತ್ತಿದ್ದರೂ ಅಸಹಾಯಕಳಾಗಿ ನಿಲ್ಲುವ ಚಿತ್ರಣ ಇಲ್ಲಿರುವುದನ್ನು ಕಾಣುತ್ತೇವೆ. ಕೊನೆಗೆ ಹೊಸ ಶಿವಾಪುರವಾಗಲೂ ಮುಂದಾದಾಗ ನಮಶ್ಶಿವಾಯ, ಚೆಂಬಸರಿಂದ ಸ್ಫೂರ್ತಿಪಡೆದು ಗ್ರಾಮ ಪಂಚಾಯತಿ ಅಧ್ಯಕ್ಷಳಾಗಿ ಊರನ್ನು ಅಭಿವೃದ್ಧಿಪಡಿಸಿದ ಚಿತ್ರಣ ಹೆಣ್ಣು ದುರ್ಬಲಳಲ್ಲ ಸಬಲಳು ಎಂಬುದನ್ನು ತೋರಿಸಿಕೊಟ್ಟಿದ್ದಾಳೆ. ಈ ಪುರುಷ ಪ್ರಧಾನ ಸಮಾಜದ ಸಂಚಿಕೆಯ ಪರಿಣಾಮವೆಂಬತೆ ಸಾಹಿತ್ಯ ಲೋಕದ

ಬಹುಪಾಲುಕೃತಿಗಳು ಹೆಣ್ಣನ್ನು ಕೌಟುಂಬಿಕ ವಾತಾವರಣದಲ್ಲೇ ತಳ್ಳಿವೆ. ಕೌಟುಂಬಿಕ ಚೌಕಟ್ಟಿನಾಚೆ ಆಕೆಯ ವ್ಯಕ್ತಿತ್ವ ಬೆಳೆಯಬಹುದಾದ ಸಾಧ್ಯತೆಗಳನ್ನು ತೋರಿಸುವುದು ಕಂಬಾರರ ಬರಹದಲ್ಲಿದೆ ಎಂಬುದನ್ನು ಬಾಗಿರ್ತಿಯಂಥ ಸ್ತ್ರೀ ಪಾತ್ರಗಳಲ್ಲಿ ಕಾಣಬಹುದು.

೫. ಮಾದೇವಿ

ವಸಹಾತುವಿನಿಂದ ನಲುಗಿದ ಶಿವಾಪುರದಂತಹ ಹಳ್ಳಿಯನ್ನು ಮತ್ತೆ ಕಟ್ಟಲು ನಾವು ಅನುಸರಿಸಬೇಕಾದ ಮಾದರಿ ಸಮುದಾಯದ ಬದುಕಿನಲ್ಲಿ ಕಲಿತು, ಎಲ್ಲರ ನೋವು-ನಂಟು ಹಂಚಿಕೊಂಡು ಕೆಳಗೆ ಬಿದ್ದವರ ಕೈಹಿಡಿದು ಒಟ್ಟಾಗಿ ಮುನ್ನಡೆಯಬೇಕೆಂಬ ಚಿಂತನೆ ಹೊಂದಿದವಳು ಈ ಮಾದೇವಿ. ಮಾಣಿಕಮ್ಮನ 'ಕಸ್ತೂರಿ ಬಾ ಅನಾಥಾಶ್ರಮ'ದಲ್ಲಿ ಬೆಳೆದು ದೊಡ್ಡವಳಾದ ಈಕೆಯಲ್ಲಿನ ಚಿಂತನೆ ಸಮಾನತೆಯ ಹಾದಿತೋರಿದೆ. ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ತಾನು ಮೊದಲ ಬಹುಮಾನ ಪಡೆಯುತ್ತಿದ್ದರೂ ಸ್ಪರ್ಧೆಯಲ್ಲಿ ಓಡಲು ಹೋಗಿ ಬಿದ್ದ ಮಗುವನ್ನು ಎತ್ತಿಹಿಡಿದು ಎಲ್ಲರೂ ಓಡಿ ಪ್ರಥಮ ಬಹುಮಾನ ಪಡೆಯುವರು. ಇದು ಇಂದಿನ ಸಮಾಜಕ್ಕೆ ಪ್ರಸ್ತುತ ಎಂಬಂತೆ ಕಾದಂಬರಿಯಲ್ಲಿ ಈಕೆಯನ್ನು ಚಿತ್ರಿಸಲಾಗಿದೆ. ನರಹಳ್ಳಿ ಬಾಲಸುಬ್ರಹ್ಮಣ್ಯರು ಗುರ್ತಿಸುವಂತೆ "ಕಂಬಾರರು ಕಟ್ಟಿಕೊಡಲೆತ್ನಿಸುವ ಕನಸಿನ ಸಮಾಜದಲ್ಲಿ ಒಬ್ಬರನ್ನೊಬ್ಬರು ತುಳಿದು ಹಿಂದಿಕ್ಕಿ ಮುನ್ನುಗ್ಗದೇ ಎಲ್ಲರೂ ಒಟ್ಟಿಗೆ ಬೆಳೆಯುವ ಪರಿಕಲ್ಪನೆಯನ್ನು ಮಾದೇವಿ ಪಾತ್ರ ಚಿತ್ರಿಸುತ್ತದೆ. ಹೀಗೆ ಕಾದಂಬರಿಯಲ್ಲಿ ಮಾಣಿಕಮ್ಮ, ಯಮನಕ್ಕನಂತಹ ಪಾತ್ರಗಳು ಪೋಷಕ ಪಾತ್ರಗಳಾಗಿ ಚಿತ್ರಿತಗೊಂಡಿವೆ.

ಒಟ್ಟಾರೆ ಅಭಿವೃದ್ಧಿಯ ಯೋಜನೆಯನ್ನು ಹೊರತುಪಡಿಸಿ ನೋಡುವುದಾದರೆ ಶಿವನ ಡಂಗುರ ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳು ಸಂಕಷ್ಟ ಕೇಂದ್ರವಾಗಿರುವುದನ್ನು ಕಾಣುತ್ತೇವೆ. ಈ ಸಮಾಜದಲ್ಲಿ ಹೆಣ್ಣಿಗೆ ಯಾವ ಸ್ವಾತಂತ್ರ್ಯವು ಸಿಕ್ಕಿಲ್ಲ ಅದು ಸಿಗುವಂತಾಗಬೇಕು ಎಂಬ ಚಿಂತನೆ ಕಾದಂಬರಿಯ ಸ್ತ್ರೀ ಪಾತ್ರದಲ್ಲಿ ಕಾಣುತ್ತೇವೆ. "ಈ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಅತ್ಯಂತ ಶೋಷಿತಳು. ಪ್ರಭುತ್ವ, ಧರ್ಮ, ಕುಟುಂಬ ಹೀಗೆ ಮೂರು ಮುಖ್ಯ ಘಟಕಗಳಲ್ಲಿ ಆಕೆ ಶೋಷಣೆಗೆ ಒಳಗಾಗಿದ್ದಾಳೆ" ಯಾಕೆ ಹೀಗಾಯಿತು? ಎಂಬ ಪ್ರಶ್ನೆಗೆ ಹೆಣ್ಣು ತನ್ನ ಸಾಂಸ್ಕೃತಿಕ ಸಂರಚನೆಯಲ್ಲಿಯೇ ಉತ್ತರ ಕಂಡುಕೊಳ್ಳಬೇಕೆಂಬುದನ್ನು ಕಂಬಾರರು ಈ ಕಾದಂಬರಿಯ ಮೂಲಕ ತಿಳಿಪಡಿಸಲು ಮುಂದಾಗಿದ್ದಾರೆ.

* * * *

ಕೊನೆ ಟಿಪ್ಪಣಿಗಳು

೧. ವಿಕ್ರಂ ವಿಸಾಜಿ : ನಾದಗಳು ನುಡಿಯಾಗಲೇ , ಪಲ್ಲವ ಪ್ರಕಾಶನ ಚನ್ನಪಟ್ಟಣ ಬಳ್ಳಾರಿ,೨೦೦೮ ಪುಟ ೧೩೪

೨. ಚಂದ್ರಶೇಖರ ಕಂಬಾರ : ಶಿವನ ಡಂಗುರ ಕಾದಂಬರಿ

ಅಂಕಿತ ಪ್ರಕಾಶನ ಬೆಂಗಳೂರು– ೨೦೧೫ ಪುಟ ೩೯

೩. ಅದೇ ಪುಟ – ೪೦

೪. ಅದೇ ಪುಟ – ೨೪೮

೫. ಅದೇ ಪುಟ –೨೭

೬. ಅದೇ ಪುಟ –೪೮

೭. ವಿಕ್ರಂ ವಿಸಾಜಿ : ನಾದಗಳು ನುಡಿಯಾಗಲೇ , ಪಲ್ಲವ ಪ್ರಕಾಶನ ಚನ್ನಪಟ್ಟಣ ಬಳ್ಳಾರಿ, ೨೦೦೮ ಪುಟ ೧೫೫

೮. ಚಂದ್ರಶೇಖರ ಕಂಬಾರ : ಶಿವನ ಡಂಗುರ ಕಾದಂಬರಿ

ಅಂಕಿತ ಪ್ರಕಾಶನ ಬೆಂಗಳೂರು– ೨೦೧೫ ಪುಟ ೧೬

೮. ಚಂದ್ರಶೇಖರ ಕಂಬಾರ : ಶಿವನ ಡಂಗುರ ಕಾದಂಬರಿ

೮. ಚಂದ್ರಶೇಖರ ಕಂಬಾರ : ಶಿವನ ಡಂಗುರ ಕಾದಂಬರಿ, ಅಂಕಿತ ಪ್ರಕಾಶನ ಬೆಂಗಳೂರು– ೨೦೧೫ ಪುಟ ೧೬೯.

೯.ವಿಕ್ರಂ ವಿಸಾಜಿ : ನಾದಗಳು ನುಡಿಯಾಗಲೇ , ಪಲ್ಲವ ಪ್ರಕಾಶನ ಚನ್ನಪಟ್ಟಣ ಬಳ್ಳಾರಿ,೨೦೦೮ ಪುಟ ೧೪೯

ಅಧ್ಯಾಯ– ೯

ಸಮಾರೋಪ

ಅಧ್ಯಾಯ- ೯

ಸಮಾರೋಪ

ಚಂದ್ರಶೇಖರ ಕಂಬಾರರ ಕಾದಂಬರಿಗಳಲ್ಲಿ ಒಂದಾದ 'ಶಿವನ ಡಂಗುರ' ಕಾದಂಬರಿಯು ಮಹತ್ವದ ಕಾದಂಬರಿಯಾಗಿದ್ದು, ದೇಶಿಯ ಚಿಂತನೆಗಳನ್ನು ಒಳಗೊಂಡ ಕಾದಂಬರಿಯಾಗಿದೆ. ಗ್ರಾಮೀಣ ಬದುಕಿನ ಮೇಲೆ ಆಧುನಿಕತೆ ಉಂಟುಮಾಡುತ್ತಿರುವ ದುಷ್ಪರಿಣಾಮಗಳನ್ನು ಮತ್ತು ದೇಶಿ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಳ್ಳುವ ಬಗೆಯನ್ನು ಕಾದಂಬರಿ ತಿಳಿಪಡಿಸುತ್ತದೆ. ಬುದ್ಧ, ಬಸವ, ಮತ್ತು ಗಾಂಧೀಜಿ ಕಂಡಂತೆ ಆದರ್ಶ ಸಮಾಜವನ್ನು ಚಂದ್ರಶೇಖರ ಕಂಬಾರರು 'ಶಿವಾಪುರ' ಎಂಬ ಆದರ್ಶ ಸಮಾಜದ ಮೂಲಕ ತಮ್ಮ ದೇಶಿ ಚಿಂತನೆಗಳನ್ನು ಹಿಡಿದಿಡಲು ಮುಂದಾಗಿರುವುದನ್ನು ಅವರ ಬರಹದಲ್ಲಿ ಕಾಣಬಹುದು . ಇದಕ್ಕೆ ಕಂಬಾರರ 'ಶಿವನ ಡಂಗುರ' ಕಾದಂಬರಿಯು ಹೊರತಾಗಿಲ್ಲ. ಆಧುನಿಕತೆ ಮತ್ತು ವಸಹಾತು ಪ್ರಭಾವದಿಂದ ನಲುಗಿ ಹೋಗುತ್ತಿರುವ 'ಶಿವಾಪುರ'ವನ್ನು ಮತ್ತೇ ಹೊಸದಾಗಿ ಕಟ್ಟಲು ಅನುಸರಿಸಬೇಕಾದ ಮಾದರಿಯನ್ನು ಸಮುದಾಯದ ಬದುಕಿನಲ್ಲೇ ಕಲಿತು ಎಲ್ಲರ ನೋವು ನಲಿವನ್ನು ಹಂಚಿಕೊಂಡು ಪರಸ್ಪರ, ಪ್ರೀತಿ, ವಾತ್ಸಲ್ಯ, ಸಹೋದರತೆಯ ಭಾವನೆಯಿಂದ ಎಲ್ಲರೂ ಒಟ್ಟಾಗಿ ಬಾಳುವ ದೇಶಿಯ ಚಿಂತನೆಗಳನ್ನು ಈ ಕಾದಂಬರಿ ಮೂಲಕ ಕಟ್ಟಿಕೊಡಲು ಕಂಬಾರರು ಪ್ರಯತ್ನಿಸಿದ್ದಾರೆ. ಪ್ರಸ್ತುತ ಅಧ್ಯಯನವು ಚಂದ್ರಶೇಖರ ಕಂಬಾರರ ಈ ಶಿವನ ಡಂಗುರ ಕಾದಂಬರಿಯನ್ನು "ಶಿವನ ಡಂಗುರ ಕಾದಂಬರಿ : ಒಂದು ವಿಶ್ಲೇಷಣೆ ಎನ್ನುವ ಶೀರ್ಷಿಕೆಯಡಿಯಲ್ಲಿ ವಿವಿಧ ಅಧ್ಯಾಯಗಳ ಮೂಲಕ ಅಧ್ಯಯನ ಮಾಡಲಾಗಿದೆ.

ಒಂದನೇಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ ಕುರಿತು ಚರ್ಚಿಸಲಾಗಿದೆ. ಎರಡನೇಯ ಅಧ್ಯಾಯದಲ್ಲಿ ಚಂದ್ರಶೇಖರ ಕಂಬಾರರ ಜೀವನ , ಶಿಕ್ಷಣ, ವೃತ್ತಿ ಬದುಕು ಮತ್ತು ಬರಹಗಳ ಕುರಿತಾಗಿ ಚರ್ಚಿಸಲಾಗಿದ್ದು, ಗ್ರಾಮೀಣ ಬದುಕಿನ ಆಪ್ತ ಅನುಭವಗಳ ಜೊತೆಗೆ ಬೆಳೆದ ಕಂಬಾರರ ಬಾಲ್ಯದ ಪರಿಸರ, ಸಾಂಸ್ಕೃತಿಕ ಜಗತ್ತು, ಕಲೆ, ಸಾಹಿತ್ಯ, ಸಂಗೀತದ ಪರಿಸರ ಕಂಬಾರರ ಮೇಲೆ ಗಾಢ ಪರಿಣಾಮ ಬೀರಿರುವುದನ್ನು ಮತ್ತು ಜನಪದ ಕಲೆಯಾದ ದೊಡ್ಡಾಟ, ಸಣ್ಣಾಟಗಳು ಅವರ ಮೇಲೆ ಹೇಗೆ ಪರಿಣಾಮ ಬೀರಿವೆ ಎಂಬ ಅಂಶಗಳನ್ನು ಅವರ ಜೀವನದ ಚಿತ್ರಣದಲ್ಲಿ ಗುರ್ತಿಸಬಹುದಾಗಿದೆ. ಕಂಬಾರರ ಬರಹಗಳಲ್ಲಿ ದೇಶಿಯ ಸಂಸ್ಕೃತಿಯ ನೆಲೆಗಳು ಹಾಸು ಹೊಕ್ಕಾದ ಬಗೆಯನ್ನು ಗುರ್ತಿಸಲಾಗಿದೆ. ಅವರ ಎಲ್ಲ ಬರಹಗಳು ದೇಶಿ ಚಿಂತನೆಗಳನ್ನೇ ಪ್ರತಿಪಾದಿಸುವುದನ್ನು ಮತ್ತು ನವ್ಯ ಸಾಹಿತ್ಯದ ಧೋರಣೆ, ಉದ್ದೇಶಗಳನ್ನು ಹಾಗೂ ಆಧುನಿಕತೆಯ ವಿರೋಧಿ ನಿಲುವುಗಳು ಇರುವುದನ್ನು ಕಂಬಾರರ ಬರಹಗಳಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಚಂದ್ರಶೇಖರ ಕಂಬಾರರ ಶಿವನ ಡಂಗುರ ಕಾದಂಬರಿಯ ಸಂಕ್ಷಿಪ್ತ ಸಾರಾಂಶಗಳನ್ನು ಅವರ ದೇಶಿಚಿಂತನೆಯ ನೆಲೆಯಲ್ಲಿ ವಿವಿಧ ಅಂಶಗಳ ಮೂಲಕ ತಿಳಿಪಡಿಸಲಾಗಿದೆ. ಕಾದಂಬರಿಯ ಶೀರ್ಷಿಕೆ ಕುರಿತಾಗಿ ಆಧುನಿಕತೆ ಎಂದರೇನು? ಇದರ ದುರುದ್ದೇಶಗಳೇನು? ಎಂಬ ಅಂಶಗಳು ಕಾದಂಬರಿಯಲ್ಲಿ ಹೇಗೆ ಅಡಕವಾಗಿವೆ ಎಂಬುದನ್ನು

ವಿವಿಧ ಚರ್ಚೆಗಳ ಮೂಲಕ ತಿಳಿಪಡಿಸಲಾಗಿದೆ. ಹಾಗೇ ಕಾದಂಬರಿಯಲ್ಲಿ ನವ್ಯ ಸಾಹಿತ್ಯದ ಧೋರಣೆಗಳು ಇರುವುದನ್ನು ಕಂಡುಕೊಳ್ಳಲಾಗಿದೆ. ಶಿವಾಪುರ ಜಾಗತಿಕ ಪ್ರಭಾವಕ್ಕೆ ಒಳಗಾಗಿ ನಲುಗುತ್ತಿದೆ ಎಂಬುದನ್ನು ಹಳ್ಳಿಯೊಂದರ ಬದುಕನ್ನು ಚಿತ್ರಿಸುತ್ತ ಆಧುನಿಕತೆಯ ಅಪಾಯ, ಜನಪದರ ಆತ್ಮನಾಶ ಮತ್ತು ಅನ್ಯಾಕ್ರಮಣ ನಮ್ಮ ಸೃಜನಶೀಲತೆಯನ್ನೇ ಕೊಲ್ಲುತ್ತಿದೆ ಎಂಬುದನ್ನು ಶಿವನ ಡಂಗುರ ಕಾದಂಬರಿ ಸಂಕ್ಷಿಪ್ತ ಸಾರಾಂಶದ ಮೂಲಕ ಗುರ್ತಿಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಗ್ರಾಮೀಣ ಬದುಕಿನ ಮೇಲೆ ಆಧುನಿಕತೆ ಹೇಗೆ ತನ್ನ ಪರಿಣಾಮವನ್ನು ಬೀರುತ್ತಿದೆ ಎಂಬುದರ ಕುರಿತಾಗಿ ಚರ್ಚಿಸಲಾಗಿದೆ. ಆಧುನಿಕತೆ ಎನ್ನುವುದು ಇಂದು ಪಾಶ್ಚಾತ್ಯರ ಪ್ರಭಾವದಿಂದಾಗಿ ಅನೇಕ ದುಷ್ಪರಿಣಾಮಗಳನ್ನು ಬೀರುತಿದೆ. ಗ್ರಾಮೀಣ ಸಂಸ್ಕೃತಿ, ಸಮಾಜ, ದೇಶಿಯತೆಯತೆಯ ಮೇಲೆ ಪ್ರಭಾವ ಬೀರುತ್ತಿದೆ. "ಆಧುನಿಕತೆ ವಾಸ್ತವ ನಂಬಿದರೆ ದೇಸಿಯತೆ ನಂಬುಗೆಯ ಮೇಲೆ ನಿರ್ಮಾಣವಾಗಿದ್ದು ಪುರಾಣ, ಕನಸುಗಳಿಂದ ಎಂಬ ಅಂಶದ ಕುರಿತಾಗಿ ಚರ್ಚಿಸಲಾಗಿದೆ. ಉಂಡ ಮನೆಗೆ ಎರಡು ಬಗೆಯುವುದು ವಸಹಾತುವಿನ ಗುಣವಾಗಿದ್ದು, ಇದನ್ನು ಕುಂಟೀರಪ್ಪ ಮತ್ತು ಅಮೇರಿಕಾ ಜಾಕ್ಸನ್ ಕಂಪನಿ ಮೂಲಕ ಬಿಗ್ ಬಾಸ್'ರ ಪಾತ್ರದ ಮೂಲಕ ಚರ್ಚೆಗೈಯಲಾಗಿದೆ. ದೇಶಿಯತೆಯನ್ನು ಕೊಲ್ಲುತ್ತಿರುವ ಆಧುನಿಕತೆಯ ಚುನಾವಣೆ ಮತ್ತು ರಾಜಕೀಯ ಹುಣ್ಣಾರಗಳಿಂದ ಅನೇಕ ಕೆಟ್ಟ ಪರಿಣಾಮಗಳನ್ನು ಬೀರುತ್ತಿದೆ. ಇದನ್ನು ಚೆಂಬಸನಂತ ಯುವ ಪಡೆ ಹೇಗೆ ಮೆಟ್ಟಿ ನಿಲ್ಲಲು ಸಾಧ್ಯ ಎಂಬ ಅಂಶವನ್ನು ಅಧ್ಯಯನದ ಮೂಲಕ ಚರ್ಚಿಸಲಾಗಿದೆ. ಐದನೇಯ ಅಧ್ಯಾಯದಲ್ಲಿ ಕಂಬಾರರ ದೇಶಿ ಚಿಂತನೆ ಹೊತ್ತ ಪರಂಪರೆಯನ್ನೊಳಗೊಂಡ 'ಶಿವಾಪುರ'ವನ್ನು ಗುರ್ತಿಸಲಾಗಿದೆ.

ಆರನೇಯ ಅಧ್ಯಾಯದಲ್ಲಿ ಭಾರತದಲ್ಲಿ ಅಂತರ್ಜಾತಿ ವಿವಾಹಗಳು ಸಮಾಜದ ಮೇಲೆ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳನ್ನು ಹೇಗೆ ಬೀರುತ್ತಿವೆ ಎಂಬುದನ್ನು ಶಿವನ ಡಂಗುರ ಕಾದಂಬರಿಯಲ್ಲಿ ಬರುವ ಚೆಂಬಸ– ಶಾರಿ, ಬರಮೇಗೌಡ– ತುಂಗವ್ವರ ಪಾತ್ರದ ಮೂಲಕ ಚರ್ಚಿಸಲಾಗಿದೆ. ಮೇಲ್ವರ್ಗದ ಜನ ಕೆಳ ಜಾತಿ ಜನರ ಜೊತೆ ಸಂಭೋಗ ಸುಖ ಹೊಂದಿದರೂ ಮದುವೆ ವಿಚಾರದಲ್ಲಿ ಜಾತಿಯಿಂದ ಹಿಂದೆ ಸರಿಯುತ್ತಾರೆ ಎನ್ನುವ ಅಂಶವನ್ನು ಬರಮೇಗೌಡನ ಪಾತ್ರ ತಿಳಿಸುತ್ತದೆ. ಅದೇ ಮೇಲ್ಜಾತಿಯ ಪ್ರಜ್ಞಾವಂತರು ಜಾತಿಯನ್ನು ಮೀರಿ ಜಾತಿ ಸಂಕರ ಮಾಡಿ ಸಮಾಜವನ್ನು ಸಮಾನತೆಯಲ್ಲಿ ನೋಡಿ ಅಂತರ್ಜಾತಿ ವಿವಾಹವಾಗುವ ಪರಿಯನ್ನು ಚೆಂಬಸವ–ಶಾರಿಯರ ಅಂತರ್ಜಾತಿ ವಿವಾಹದ ಮೂಲಕ ಚರ್ಚಿಸಲಾಗಿದೆ.

ಏಳನೇಯ ಅಧ್ಯಾಯದಲ್ಲಿ ಶಿವನ ಡಂಗುರ ಕಾದಂಬರಿಯಲ್ಲಿ ಉಂಟಾದ ಸಂಘರ್ಷದ ನೆಲೆಗಳ ಕುರಿತಾಗಿ ಚರ್ಚಿಸಲಾಗಿದೆ. ಸಂಘರ್ಷ ಎಂದರೆ ಒಂದು ಕೃತಿಯಲ್ಲಿ ಲೇಖಕನು ತನ್ನ ಸಮಾಜದ ಆಪ್ತ ಅನುಭವಗಳಾನ್ನು ಹಿಡಿದಿಡಲು ಮುಂದಾಗಿರುತ್ತಾನೆ, ಈ ಅನುಭವಗಳನ್ನು ಭೌದ್ಧಿಕವಾಗಿ, ಮಾನಸಿಕವಾಗಿ ನಡೆಯುವ ಸಂಘರ್ಷಗಳು ಅಡಕವಾಗಿರುವುದನ್ನು ಶಿವನ ಡಂಗುರ ಕಾದಂಬರಿ ಮೂಲಕ ಚರ್ಚಿಸಲಾಗಿದೆ. ಶಿವನ ಡಂಗುರ ಕಾದಂಬರಿಯಲ್ಲಿ ಉಂಟಾದ ಸಂಘರ್ಷಗಳು ಯಾವವು? ಅದಕ್ಕೆ ಇರುವ ಪರ್ಯಾಯ ಮಾರ್ಗಗಳೇಸು? ಎಂಬುದನ್ನು ವಿವಿಧ ಅಂಶಗಳ ಮೂಲಕ ಚರ್ಚಿಸಲಾಗಿದೆ.

ಎಂಟನೇಯ ಅಧ್ಯಾಯದಲ್ಲಿ ಶಿವನ ಡಂಗುರ ಕಾದಂಬರಿಯಲ್ಲಿ ಬರುವ ವಿವಿಧ ಪಾತ್ರಗಳ ಮೂಲಕ ಚರ್ಚಿಸಲಾಗಿದೆ. ಸಮಾಜದಲ್ಲಿ ಪ್ರೀತಿ, ಹಾದರ, ಕೊಲೆ, ಸುಲಿಗೆ, ದ್ವೇಶ, ಅಸೂಹೆಯಂತಹ ಗುಣಗಳನ್ನು ಹೊಂದಿರುವ ಜನರಿರುತ್ತಾರೆ ಎಂಬುದನ್ನು ಕಾದಂಬರಿಯಲ್ಲಿ ಬರುವ ಬರಮೇಗೌಡ, ಚೆಂಬಸ, ಶಾರಿ, ತುಂಗಿ, ಪಾರ್ವತಿ, ಕುಂಟೀರಪ್ಪರಂತಹ ವಿವಿಧ ಪಾತ್ರಗಳ ಮೂಲಕ ಅವರ ಗುಣಲಕ್ಷಣಗಳ ಮೂಲಕ ಚರ್ಚಿಗ್ಯೆಯಲಾಗಿದೆ.

ಒಟ್ಟಾರೆ ಶಿವನ ಡಂಗುರ ಕಾದಂಬರಿಯು ಅಪ್ಪಟ ದೇಶಿ ಚಿಂತನೆಗಳನ್ನು ಪ್ರತಿಪಾದಿಸುವ ಮತ್ತು ವಸಹಾತುಶಾಹಿ, ಆಧುನಿಕತೆಯನ್ನು ವಿರೋಧಿಸುವ ನಿಲುವುಗಳನ್ನು ಹೊಂದಿರುವ ಕಾದಂಬರಿಯಾಗಿದೆ. ಆದರ್ಶ ಗ್ರಾಮ ಹೇಗಿರಬೇಕು ಎಂಬುದನ್ನು ಶಿವಾಪುರದ ಮೂಲಕ ಕಂಬಾರರು ಕಟ್ಟಿಕೊಡುವ ಅವರ ದೇಶಿ ಚಿಂತನೆಗಳನ್ನು "**ಶಿವನ ಡಂಗುರ** ಕಾದಂಬರಿ : ಒಂದು ವಿಶ್ಲೇಷಣೆ" ಮೂಲಕ ಅಧ್ಯಯನ ಮಾಡಲಾಗಿದೆ. ಈ ಶಿವನ ಡಂಗುರ ಕಾದಂಬರಿಯನ್ನು, ದೇಶಿ ಚಿಂತನೆಯಲ್ಲಿ ಹೆಚ್ಚು ಹೆಚ್ಚು ಅಧ್ಯಯನ ಮಾಡುವ ಸಾಧ್ಯತೆ ಇದೆ. ಹಾಗೇ ನವ್ಯ ಸಾಹಿತ್ಯ ಧೋರಣೆಗಳಲ್ಲಿ ಕಂಬಾರರ ಇನ್ನುಳಿದ ಬರಹಗಳ ತೌಲನಿಕ ಅಧ್ಯಯನಗಳಲ್ಲಿ ಅಧ್ಯಯನ ಮಾಡಬಹುದಾಗಿದೆ.

* * * *

ಅಧ್ಯಾಯ- ೧೦. ಅನುಬಂಧಗಳು

೧೦.೧. ಪರಮರ್ಶನ ಗ್ರಂಥಗಳು

೧೦.೧. ಗ್ರಂಥಗಳು

೧. ಚಂದ್ರಶೇಖರ ಕಂಬಾರ : ಶಿವನ ಡಂಗುರ ಕಾದಂಬರಿ, ಅಂಕಿತ ಪ್ರಕಾಶಾನ ಬೆಂಗಳೂರು ೨೦೧೫

೨. ಜಯಪ್ರಕಾಶ ಮಾವಿನಕುಳಿ(ಡಾ): ಶಿವಾಪುರ ಕಂಬಾರ ನಮಸ್ಕಾರ, ಪ್ರಕಾಶನ ಚಂದ್ರಶೇಖರ ಕಂಬಾರ ಅಭಿನಂದನ ಸಮಿತಿ ಮೂಡಬಿದ್ರಿ, ೨೦೦೪

೩. ತಿಪ್ಪೇಸ್ವಾಮಿ ಎನ್(ಸಂ): ನೆಲಸಂಪಿಗೆ (ಚಂದ್ರಶೇಖರ ಕಂಬಾರರ ಒಟ್ಟು ನಾಟಕಗಳು), ಪ್ರಕಾಶನ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೪

೪. ನಾಗವೇಣಿ ಎಚ್(ಡಾ.): ರಂಗಸಂಪನ್ನರು ಡಾ. ಚಂದ್ರಶೆಖರ ಕಂಬಾರ, ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು, ೨೦೦೪

೫. ನಾಯಕ ಹಾ.ಮಾ. ಮತ್ತು ಪ್ರಧಾನ ಗುರುದತ್ತ: ಚಂದ್ರಶೇಖರ ಕಂಬಾರ, ನವಕರ್ನಾಟಕ ಪ್ರಕಾಶನ ಬೆಂಗಳೂರು, ೨೦೦೧

೬. ಬಸವರಾಜ ಮಲಶೆಟ್ಟಿ : ಚಂದ್ರಶೇಖರ ಕಂಬಾರ, ನವಕರ್ನಾಟಕ ಪ್ರಕಾಶನ ಬೆಂಗಳೂರು, ೨೦೦೧

೭. ರಾಮಚಂದ್ರನ್ ಸಿ. ಎನ್. (ಡಾ) : ವಸಾಹತ್ತೋತ್ತರ ಚಿಂತನೆ, ಪ್ರಕಾಶನ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು. ೨೦೦೦

೮. ವೀರೇಶ ಬಡಿಗೇರ (ಡಾ.) : ನಾಡೋಜ ಚಂದ್ರಶೇಖರ ಕಂಬಾರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೧

೯. ವಿಕ್ರಂ ವಿಸಾಜಿ : ನಾದಗಳು ನುಡಿಯಾಗಲೇ (ಚಂದ್ರಶೇಖರ ಕಂಬಾರರ ಕಾವ್ಯ ಕುರಿತು ಪಿ.ಎಚ್.ಡಿ. ಮಹಾಪ್ರಬಂಧ) ಪಲ್ಲವ ಪ್ರಕಾಶನ ಚೆನ್ನಪಟ್ಟಣ, ಬಳ್ಳಾರಿ, ೨೦೦೮

೧೦. ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ): ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ ಬೆಂಗಳೂರು ೨೦೦೧

೧೧. ರಘುನಾಥ ಎಚ್. ಎಸ್. : ಹೊಸಗನ್ನಡ ಕಾದಂಬರಿಗಳಲ್ಲಿ ಅಂತರ್ಜಾತಿಯ ಮತ್ತು ಮತೀಯ ವಿವಾಹ, ಪೂರ್ಣ ಪ್ರಕಾಶನ ಶಿವಮೊಗ್ಗ, ೨೦೧೦

೨. ಪತ್ರಿಕೆಗಳು

೧. ಬಗೆಬಗೆಯ ಡಿಸೈನುಗಳ ಕಥೆಯ ನೇಯ್ಗೆ: ಮುಕ್ತಛಂದ ವಿಭಾಗ, ಪ್ರಜಾವಾಣಿ ದಿನಪತ್ರಿಕೆ, ಭಾನುವಾರ ૩ನೇ ಜನೇವರಿ ೨೦೧೬, ಪುಟ ೪

೨. ಕಂಬಾರರ ಶಿವಾಪುರದಲ್ಲಿ ಮೊಳಗಿದ ಶಿವನಡಂಗುರ: ಭಾನುಪ್ರಭ ವಿಭಾಗ ಕನ್ನಡ ಪ್ರಭ ದಿನ ಪತ್ರಿಕೆ ಭಾನುವಾರ ೬ನೇ ಡಿಸೆಂಬರ್ ೨೦೧೫ ಪುಟ- ೨

૩. ಎಲ್ಲಿದೆ ಶಿವಾಪುರ?: ಸಾಪ್ತಾಹಿಕ ಪ್ರಭ, ಕನ್ನಡ ಪ್ರಭ ದಿನಪತ್ರಿಕೆ, ಭಾನುವಾರ ೨೮ನೇ ಅಕ್ಟೋಬರ ೨೦೧೨ ಪುಟ- ೧

೪. ಒಲವು ಮುಕ್ತಛಂದ ವಿಭಾಗ, ಪ್ರಜಾವಾಣಿ ದಿನಪತ್ರಿಕೆ ಭಾನುವಾರ ೨೦ನೇ ಅಗಸ್ಟ್ ೨೦೧೫ ಪುಟ- ૩

೫. ಜಾನಪದ ಸಿರಿಸಂಪಿಗೆ : ವಿಜಯ ವಿಹಾರ ವಿಜಯವಾಣಿ ದಿನಪತ್ರಿಕೆ, ಭಾನುವಾರ ೨ನೇ ಅಕ್ಟೋಬರ ೨೦೧೨.

೧೦.೨. ಚಂದ್ರಶೇಖರ ಕಂಬಾರರ ಜೀವನದ ಪ್ರಮುಖ ವರ್ಷಗಳು

೧೯೩೨ : ಕಂಬಾರರು ಬೆಳವಾಗಿ ಜಿಲ್ಲೆಯ ಗೋಡಗೇರಿಯಲ್ಲಿ ಜನನ

೧೯೫೮ : ಬಿ. ಎ. ಪದವಿ

೧೯೬೨ : ಎಂ.ಎ. ಪದವಿ

೧೯೭೫ : ಪಿ.ಎಚ್.ಡಿ ಪದವಿ

೧೯೬೨-೬೪ : ಬೆಳಗಾವಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಆರಂಭ

೧೯೬೪-೬೭ : ಸಾಗರದ ಲಾಲ್‌ಬಹದ್ದುರ ಶಾಸ್ತ್ರೀ ಕಾಲೇಜಿನಲ್ಲಿ ಅಧ್ಯಾಪಕತ್ವ

೧೯೬೪ : ಸತ್ಯಭಾಮೆಯೊಂದಿಗೆ ವಿವಾಹ

೧೯೬೮-೭೦ : ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕತ್ವ

೧೯೭೦-೯೧ : ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕತ್ವ

೧೯೯೨-೯೮ : ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪ್ರಥಮ ಕುಲಪತಿಗಳಾಗಿ ಸೇವೆ

೧೯೮೦-೮೩ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮೆಯ ಅಧ್ಯಕ್ಷರಾಗಿ ಸೇವೆ

೧೯೮೩-೯೧ : ಕರ್ನಾಟಕ ನಾಟಕ ಅಕಾಡೆಮೆ ಅಧ್ಯಕ್ಷರಾಗಿ ಸೇವೆ

೧೯೮೭-೯೧ : ಮೈಸೂರಿನ ರಂಗಾಯಣ ರೆಪರ್ಟಿಯ ಸದಸ್ಯರಾಗಿ ಸೇವೆ

೧೯೮೮-೮೯ : ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ ಸೇವೆ.

* * * *

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ